# ಇಟಗಿಯವರ



# ಯಕ್ಷಗಾನ 5 ಪ್ರಸಂಗಗಳು

ಲೇಖಕರು:
ಇಟಗಿ ಮಹಾಬಲೇಶ್ವರ ಭಟ್



ಕರ್ನಾಟಕ ಯಕ್ಷಗಾನ ಅಕಾಡೆಮಿ
೨ನೇ ಮಹಡಿ ಚಾಲುಕ್ಯ ವಿಭಾಗ, ಕನ್ನಡ ಭವನ,
ಜೆ.ಸಿ ರಸ್ತೆ, ಬೆಂಗಳೂರು ೫೬೦ ೦೦೨

# ಇಟಗಿಯವರ 5
# ಯಕ್ಷಗಾನ ಪ್ರಸಂಗಗಳು

ಲೇಖಕರು:
**ಇಟಗಿ ಮಹಾಬಲೇಶ್ವರ ಭಟ್**

**ಕರ್ನಾಟಕ ಯಕ್ಷಗಾನ ಅಕಾಡೆಮಿ**
2ನೇ ಮಹಡಿ ಚಾಲುಕು ವಿಭಾಗ, ಕನ್ನಡ ಭವನ,
ಜೆ.ಸಿ ರಸ್ತೆ, ಬೆಂಗಳೂರು 560 002

ITAGIYAVARA 5 YAKSHAGANA PRASANGAGALU written by Sri Itagi Mahabaleshwara Bhat Published by Registrar Karnataka Yakshagana Academy, Kannada Bhavana, J.C Road, Bangalore - 560 002 Ph : 080 22113146

ಈ ಆವೃತ್ತಿಯ ಹಕ್ಕು: ರಿಜಿಸ್ಟ್ರಾರ್, ಕರ್ನಾಟಕ ಯಕ್ಷಗಾನ ಅಕಾಡೆಮಿ, ಕನ್ನಡ ಭವನ, ಜೆ.ಸಿ ರಸ್ತೆ, ಬೆಂಗಳೂರು – 560 002

ಮುದ್ರಿತ ವರ್ಷ : 2019
ಪ್ರತಿಗಳು : 500
ಪುಟಗಳು : 96
ಬೆಲೆ : ರೂ.80.00

ಪ್ರಧಾನ ಸಂಪಾದಕರು
**ಪ್ರೊ. ಎಂ ಎ ಹೆಗಡೆ**
ಅಧ್ಯಕ್ಷರು, ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

ಪ್ರಕಾಶಕರು :
**ಎಸ್. ಹೆಚ್ ಶಿವರುದ್ರಪ್ಪ**
ರಿಜಿಸ್ಟ್ರಾರ್, ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

ಲೇಖಕರು :
**ಶ್ರೀ ಇಟಗಿ ಮಹಾಬಲೇಶ್ವರ ಭಟ್**
ಇಟಗಿ, ಸಿದ್ಧಾಪುರ, ಉತ್ತರ ಕನ್ನಡ
ಮೊ 9449454043

ಮುದ್ರಕರು :
**ಮಾತೃಶ್ರೀ ಗ್ರಾಫಿಕ್ಸ್**
ಟಿ. ಆರ್ ನಗರ್ , ಬೆಂಗಳೂರು 560 028
ಮೊ : 94490–00155

# ಅಧ್ಯಕ್ಷರ ಮಾತು



ಯಕ್ಷಗಾನ ಪ್ರದರ್ಶನಗಳಿಗೆ ಆಧಾರಭೂತವಾಗಿರುವುದು ಲಿಖಿತ ರೂಪದಲ್ಲಿರುವ ಪ್ರಸಂಗ ಕೃತಿ. ಕಥಾನಕವೊಂದನ್ನು ವಿವಿಧ ಛಂದೋಬಂಧಗಳನ್ನು ಬಳಸಿ ಪ್ರದರ್ಶಾನುಕೂಲಿಯಾಗಿ ರಚಿತವಾದ ಕೃತಿಯಲ್ಲಿ ದೃಶ್ಯ ಹಾಗೂ ಶ್ರವ್ಯ-ಕಾವ್ಯಗಳೆರಡರ ಮಿಶ್ರಣವನ್ನು ಕಾಣಬಹುದು. ಪದ್ಯ ಸಾಹಿತ್ಯದ ಚೌಕಟ್ಟಿನಲ್ಲಿ ಅರಳುವುದು ಗದ್ಯ ಸಾಹಿತ್ಯದ ಚೆಲುವಾದ ಪುಷ್ಪ. ಪ್ರಸಂಗ ಕಾವ್ಯವು ಹಾಡುಗಬ್ಬವಾಗಿರುವುದರಿಂದ ಅಲ್ಲಿ ನಾದ ಮಾಧುರ್ಯದ ಜೊತೆಗೆ ಅರ್ಥಗಾಂಭೀರ್ಯವೂ ಇದೆ. ಅವುಗಳನ್ನು ಅಂತರ್ಯದಲ್ಲಿ ಪರಿಭಾವಿಸಿ ಅರ್ಥಧಾರಿ ಅಥವಾ ವೇಷಧಾರಿ ತನ್ನ ಪ್ರತಿಭೆ ಪಾಂಡಿತ್ಯಗಳ ಹಿನ್ನೆಲೆಯಲ್ಲಿ ಪಾತ್ರವನ್ನು ಕೆತ್ತಿ ನಿಲ್ಲಿಸುತ್ತಾನೆ. ಹಾಗಾಗಿ ಪ್ರಸಂಗವು ಪ್ರತಿಪ್ರದರ್ಶನದಲ್ಲೂ ಮರುಹುಟ್ಟನ್ನು ಪಡೆಯುತ್ತ ನೃತ್ಯ ನೂತನವಾಗುತ್ತಿರುತ್ತದೆ. ಅಂತೆಯೇ ವರ್ಷಗಳುರುಳಿದರೂ ಪ್ರಸಂಗ ಹಳತಾಗುವುದಿಲ್ಲ.

ಸುಮಾರು ಐದುಸಾವಿರಕ್ಕೂ ಹೆಚ್ಚು ಪ್ರಸಂಗಳಿದ್ದರೂ ನೂರಾರು ಕೃತಿಗಳ ಸೇರ್ಪಡೆಯಾಗುತ್ತಿದೆ. ಆದರೆ ಅವುಗಳಲ್ಲಿ ಮುದ್ರಣಭಾಗ್ಯ ದಕ್ಕುವುದು ಕೆಲವೇ ಕೃತಿಗಳಿಗೆ ಮಾತ್ರ. ಪ್ರಕಟಿತ ಕೃತಿಗಳಿಗೆ ಮಾರುಕಟ್ಟೆ ವ್ಯವಸ್ಥೆಯಿಲ್ಲ. ಅದಕ್ಕೆ ಹಲವಾರು ಕಾರಣಗಳಿವೆ. ಅದರ ಚರ್ಚೆ ಇಲ್ಲಿ ಬೇಡ. ಈ ಕೊರತೆಯನ್ನು ನೀಗಿಸಲು ಅಕಾಡೆಮಿಯು ಪುಸ್ತಕ ಪ್ರಕಟಣೆಯ ಜೊತೆಗೆ ಡಿಜಿಲೀಕರಣದ ಮೂಲಕವೂ ಪ್ರಯತ್ನಿಸುತ್ತಿದೆ. ಅವಶ್ಯ ಸಂಪನ್ಮೂಲದ ಕೊರತೆಯ ಕಾರಣದಿಂದ ದೊಡ್ಡಮಟ್ಟದಲ್ಲಿ ತೊಡಗಿಕೊಳ್ಳಲಾಗುತ್ತಿಲ್ಲವಾದರೂ ಅಳಿಲು ಸೇವೆಯನ್ನಾದರೂ ಸಲ್ಲಿಸುತ್ತಿದೆಯೆಂದು ಸಂಕೋಚದಿಂದಲೇ ಹೇಳಿಕೊಳ್ಳಬೇಕಾಗಿದೆ.

ಪ್ರಸ್ತುತ ಸಂಕಲನವು ಇಟಗಿ ಮಹಾಬಲೇಶ್ವರ ಭಟ್ಟರ ಐದು ಪ್ರಸಂಗಗಳನ್ನು ಒಳಗೊಂಡಿದೆ. ಇಟಗಿಯವರು ಪ್ರಸಿದ್ಧ ವೇಷಧಾರಿಗಳೂ ಉತ್ತಮ ಕವಿಗಳೂ ಆಗಿದ್ದಾರೆ. ವ್ಯಾಪಕವಾದ ರಂಗಾನುಭವವಿರುವ ಅವರು ಇಂದಿನ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ಕೃತಿಗಳನ್ನು ರಚಿಸುತ್ತಿದ್ದಾರೆ. ಅವರನ್ನು ಪ್ರೋತ್ಸಾಹಿಸಿ ಅವರಿಂದ ಇನ್ನೂ ಉತ್ತಮಕೃತಿಗಳು ಹೊರಬರುವಂತಾಗಲೆಂಬುದು ನಮ್ಮ ಅಪೇಕ್ಷೆ.

ಈ ಕೃತಿಯನ್ನು ಪರಿಶೀಲಿಸಿ ಅವಶ್ಯಕಂಡಲ್ಲಿ ಪರಿಷ್ಕರಿಸುವಲ್ಲಿ ಹಿರಿಯ ಕವಿ, ಭಾಗವತ ಮತ್ತು ಅಕಾಡೆಮಿಯ ಗೌರವಾನ್ವಿತ ಸದಸ್ಯರಾದ ಪುರುಷೋತ್ತಮ ಪೂಂಜರು ಸಹಕರಿಸಿದ್ದಾರೆ. ಲಿಪಿಕರಣವನ್ನು ಕವಿಗಳೇ ಮಾಡಿಕೊಟ್ಟಿದ್ದಾರೆ. ಸಿಬ್ಬಂದಿಗಳು ಸಹಕರಿಸಿದ್ದಾರೆ. ಮಾತೃಶ್ರೀ ಗ್ರಾಫಿಕ್ಸನವರು ಅಂದವಾಗಿ ಮುದ್ರಿಸಿಕೊಟ್ಟಿದ್ದಾರೆ. ಅಕಾಡೆಮಿಯ ಬೆನ್ನೆಲುಬಾದ ಆಡಳಿತಾಧಿಕಾರಿಯವರನ್ನು ಮರೆಯುವಂತಿಲ್ಲ. ಇವರೆಲ್ಲರಿಗೆ ಧನ್ಯವಾದಗಳನ್ನು ಸಮರ್ಪಿಸುತ್ತ ಕೃತಿಗಳನ್ನು ಯಕ್ಷಲೋಕಕ್ಕೆ ಸಮರ್ಪಿಸುತ್ತಿದ್ದೇವೆ.

ಬೆಂಗಳೂರು
೧೫-೭ -೨೦೧೯

ಪ್ರೊ.ಎಂ.ಎ.ಹೆಗಡೆ
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ
ಬೆಂಗಳೂರು



## ನೆನವರಿಕೆ......

ಇದು ನನ್ನ ಕೃತಿಗಳ ಮೊದಲ ಪ್ರಕಟಣೆ. ಒಳಗೆಲ್ಲೋ ಒಂದಿಷ್ಟು ಪುಳಕ. ಲೇಖಕನಿಗೆ ಪುಸ್ತಕ ಪ್ರಕಾಶವೆಂದರೆ ತಂದೆಗೆ ಮಗಳ ಮದುವೆಯ ಸಂಭ್ರಮ ಅಂತ ಹಿರಿಯರಾಡಿದ ಮಾತು ನೆನಪಾಗುತ್ತದೆ. ಹೌದು, ನನ್ನ ಆಸಕ್ತಿಯ ಕ್ಷೇತ್ರಗಳು ಹಲವಿವೆ. ಅವುಗಳಲ್ಲಿ ಒಂದು ಈ ಯಕ್ಷಗಾನ ಪದ್ಯಗಳ ರಚನೆ. ನನ್ನ ಯಕ್ಷಗಾನ ಯಾನ ಪ್ರಾರಂಭವಾಗುವ ಮೊದಲೇ ಪುತ್ತೂರಿನ ಬೆಣ್ಣೆಮನೆ ಗೋಪಾಲಕೃಷ್ಣ ಭಟ್ಟ ಎಂಬ ಹಿರಿಯರು ತಾವು ಬರೆಯುತ್ತಿದ್ದ ಪ್ರಸಂಗಗಳ, ಪದ್ಯಗಳ ಕುರಿತು ನನ್ನಲ್ಲಿ ಸಾಕಷ್ಟು ಚರ್ಚಿಸುತ್ತಿದ್ದರು. ನನ್ನೆಲ್ಲ ಯಕ್ಷಗಾನ ಚಟುವಟಿಕೆಗಳಿಗೆ ಮೂಲ ಪ್ರೇರಕರು ಶ್ರೀಯುತರೆ. ಪುತ್ತೂರಿನ ಬೊಳುವಾರು ಆಂಜನೇಯನ ಸನ್ನಿಧಾನದಲ್ಲಿ ನಡೆದ ತಾಳಮದ್ದಳೆಯೊಂದರಲ್ಲಿ ಸುಭದ್ರಾ ಕಲ್ಯಾಣದ ತನ್ನ ಕೃಷ್ಣನಿಗೆ ನನ್ನ ಸತ್ಯಭಾಮೆಯ ಅರ್ಥವನ್ನು ಹೇಳಿಸಿ ಯಕ್ಷಗಾನದ ಹೆಬ್ಬಾಗಿಲಿಗೆ ತಂದುಬಿಟ್ಟರು. ಧರ್ಮಸ್ಥಳದ ಶ್ರೀ ಲಲಿತಕಲಾ ಹಾಗೂ ಹೊನ್ನಾವರ ಗುಣವಂತೆಯ ಶ್ರೀಮಯ ಕಲಾ ಕೇಂದ್ರಗಳಲ್ಲಿ ಯಕ್ಷಗಾನವನ್ನು ಅಭ್ಯಸಿಸಿ ಮೇಳಗಳಲ್ಲಿ ತಿರುಗಾಟವನ್ನೂ ಮಾಡಿ ಕೆಲವು ವರ್ಷಗಳು ಸಂದವು. ಪ್ರಸಂಗದ ಪದ್ಯ ಬರೆಯುವ ಹಂಬಲವು ಸುಪ್ತವಾಗಿತ್ತು. ಆ ಕಾಲಕ್ಕೆ ಸಿದ್ದಾಪುರದ ಧನ್ವಂತರಿ ಆಯುರ್ವೇದ ಮಹಾವಿದ್ಯಾಲಯದ ಡಾ. ಸಿ.ಎಸ್. ಸೋಮಯಾಜಿಯವರು 'ಅಶ್ವಿನಿ ವಿಜಯ' ದ ಕತೆಯನ್ನಿತ್ತು ಕೃತಿ ರಚನೆಗೆ ಒತ್ತಾಯಿಸಿದರು. ನಾನೋ ಬರೆದೆ. ಈ ವಿಷಯದಲ್ಲಿ ಅ, ಆ, ಇ, ಈ ಗೊತ್ತಿಲ್ಲ ಎನ್ನುವುದು ಆ ವರ್ಷದ ಮಾರಣಕಟ್ಟೆ ಮೇಳದ ತಿರುಗಾಟದಲ್ಲಿ ಆ ಪ್ರಸಂಗದ ಎಂಟು ಹತ್ತು ಪ್ರದರ್ಶನಗಳಾದ ಮೇಲೆ ತಿಳಿಯಿತು. ಭಾಗವತ ಎಮ್. ಆರ್. ಹೆಗಡೆ ಚಿನ್ಮನೆಯವರು ಹಾಡುವುದಕ್ಕೆ ಸರಾಗವಾಗುವುದಿಲ್ಲ ಅನ್ನುತ್ತಿದ್ದರು. ಪ್ರಸಂಗ ರಚನೆಗಳಲ್ಲಿ ಸಿದ್ಧಹಸ್ತರಾದ ಕಂದಾವರ ರಘುರಾಮ ಶೆಟ್ಟಿಯವರು ಚೌಕಿಗೆ ಬಂದಿದ್ದಾಗ ಅವರ ಕೈಗೆ ನನ್ನ 'ಕೂಸ'ನ್ನಿತ್ತೆ. ಅಲ್ಲಿಯೇ ಓದಿದ ಕಂದಾವರ ಮಾಸ್ತ್ರು, ಸಾಹಿತ್ಯ ಒಳ್ಳೆಯದಿದೆ ಆದರೆ ಛಂದಸ್ಸು ಸರಿಯಿಲ್ಲ ಎಂದರು. ಮಳೆಗಾಲದಲ್ಲಿ ಮನೆಗೆ ಬಂದರೆ ಛಂದೋ ಪಾಠವನ್ನು ಮಾಡುತ್ತೇನೆಂದರು. ಬೆಂಬಿಡದೆ ಅವರನ್ನೇ ಆಶ್ರಯಿಸಿ ಯಕ್ಷಗಾನ ಛಂದಸ್ಸನ್ನು ಯಥಾಸಾಧ್ಯ ಆರ್ಜಿಸಿಕೊಂಡೆ. ಲಘು–ಗುರು ಎಂದು ಪ್ರಸ್ತಾರ ಹಾಕಲರಿಯದ ನಾನು ಛಂದಸ್ಸಾಗರದಲ್ಲಿ ಧುಮುಕಿ ಕೈ ಕಾಲು ಬಡಿಯುವುದರ ಮೂಲಕ ಒಂದಿಷ್ಟು ತಿಳುವಳಿಕೆಯನ್ನು ಪಡೆದುಕೊಂಡೆ. ನಾಡಿನ ಪ್ರಸಿದ್ಧ ವಿದ್ವಾಂಸರಾದ ನನ್ನ ವಿದ್ಯಾಗುರುಗಳು ಪ್ರೋ. ಎಮ್.ಎ. ಹೆಗಡೆ ದಂಟಕಲ್‌ರವರು, ಯಕ್ಷಋಷಿ ಹೊಸ್ತೋಟ ಮಂಜುನಾಥ ಭಾಗವತರು ಹಾಗೂ ಡಾ. ಕಬ್ಬಿನಾಲೆ ವಸಂತ ಭಾರದ್ವಾಜರವರು ನನ್ನ ಅರಿವಿನ ಪರಿಧಿಯನ್ನು ವಿಸ್ತರಿಸಿದರು.

ಪೌರಾಣಿಕವಲ್ಲದ ಪ್ರಸಂಗಗಳನ್ನು ಬರೆಯುವ ಅವಕಾಶಗಳು ಕೂಡಿ ಬಂದರೂ ಅವುಗಳನ್ನು ತೊರೆದು ಪುರಾಣ ಪ್ರಸಂಗಗಳಿಗೇ ನಾನು ಅಂಟಿಕೊಂಡಿದ್ದು ನನ್ನ ಮಿತಿಯಾಗಿರಬಹುದು. ಭಿನ್ನವಾದ ಕಥಾಹಂದರಗಳು ಆಯಾ ಸಮಯಕ್ಕೆ ಅಗತ್ಯವೆನಿದಾಗ ರಚಯಿತಗೊಂಡ ಪ್ರಸಂಗಗಳು ಇವು. ಅಶ್ವಿನಿ ದೇವತೆಗಳ ಹಲವು ಕತೆಗಳನ್ನೊಳಗೊಂಡ "ಅಶ್ವಿನಿ ವಿಜಯ" ಪ್ರಸಂಗವು ಶ್ರೀ ಮಂದಾರ್ತಿ ಮೇಳವೊಂದರಲ್ಲಿ ಒಂದು ತಿರುಗಾಟದಲ್ಲೇ ಅರವತ್ತಕ್ಕೂ ಹೆಚ್ಚು ಪ್ರದರ್ಶನಗಳನ್ನು ಕಂಡಿದೆಯಂತೆ. ಗುಂಡಬಾಳ, ಮಾರಣಕಟ್ಟೆ ಮೇಳಗಳಲ್ಲಿ ನಾನು ತಿರುಗಾಟ ನಡೆಸುತ್ತಿದ್ದಾಗ ಕೆಲವು ಪ್ರದರ್ಶನಗಳಾಗಿದ್ದವು. ಮಕ್ಕಳ ಯಕ್ಷಗಾನ ರಂಗಭೂಮಿಯನ್ನು ಲಕ್ಷ್ಯದಲ್ಲಿರಿಸಿಯೇ ರಚಿಸಿದ "ಗುರುದಕ್ಷಿಣೆ" ಯನ್ನು ನಾಡಿನಾದ್ಯಂತ ಹಲವಾರು ಮಕ್ಕಳ ತಂಡದವರು ಪ್ರದರ್ಶಿಸಿದ್ದಾರೆ. ಶ್ರೀ ರಾಮಚಂದ್ರಾಪುರ ಮಠದವರು ಹಮ್ಮಿಕೊಂಡ ಗೋ ಯಾತ್ರೆಯ ಸಂದರ್ಭದಲ್ಲಿ ರಚಿಸಿದ " ಗೋ ಮಹಿಮೆ" ಯು ತುಂಬಾ ಪ್ರದರ್ಶನಗಳನ್ನು ಕಂಡಿದೆ. "ಮಾರಿಷಾ ಕಲ್ಯಾಣ" ವು ಈ ಹಿಂದೆ ಶಿರ್ಸಿಯಲ್ಲಿ ನಡೆದ ರಾಜ್ಯ ಮಟ್ಟದ ಪರಿಸರ ಯಕ್ಷಗಾನ ಸ್ಪರ್ಧೆಯಲ್ಲಿ ನಮ್ಮ ತಂಡವು ಭಾಗವಹಿಸುವ ಸಮಯಕ್ಕೆ ಅಂದಿನ ಪ್ರದರ್ಶನಕ್ಕಾಗಿಯೇ ಸಿದ್ಧಗೊಂಡ ಕೃತಿಯಾಗಿದೆ. ಹಾಗೆಯೇ "ಪ್ರೇತೊದ್ಧರಣ" ಕೂಡ ಕೆಲವು ತಾಳಮದ್ದಳೆಗಳ ಮೂಲಕ ರಂಗದ ಬೆಳಕನ್ನು ಕಂಡಿದೆ.

ಆದರೆ ಪುಸ್ತಕ ಮಾಡಿ ಪ್ರಕಟಗೊಳಿಸುವುದಕ್ಕೆ ಹಲವು ಸ್ನೇಹಿತರು ಅದರಲ್ಲೂ ಮುಖ್ಯವಾಗಿ ನಡಗೋಡು ಜಿ. ಮಹಾಬಲೇಶ್ವರ ಭಟ್ಟರು ಪ್ರಯತ್ನಿಸಿದರು. ಕಾಲವು ಕೂಡಿ ಬಂದಿರಲಿಲ್ಲ. ಗುಣಪಕ್ಷಪಾತಿಗಳಾದ ಈಗಿನ ಅಕಾಡೆಮಿಯ ಅಧ್ಯಕ್ಷ ಶ್ರೀ ಎಮ್.ಎ.ಹೆಗಡೆ ದಂಟಕಲ್ ರವರ ಮುತುವರ್ಜಿಯಿಂದ ಪುಸ್ತಕ ರೂಪವಾಗಿ ಬೆಳಗಲು ಕಾರಣವಾಯಿತು. ಶ್ರೀಯುತರಿಗೆ ನಾನು ಸದಾ ಕೃತಜ್ಞನು. ಯಕ್ಷಗಾನದ ಗುರುಗಳಾದ ಡಾ. ಕೋಳ್ಯೂರು ರಾಮಚಂದ್ರ ರಾವ್, ಹೆರಂಜಾಲು ವೆಂಕಟರಮಣಯ್ಯ ಹಾಗೂ ಕೆರೆಮನೆ ಶಂಭು ಹೆಗಡೆಯವರನ್ನು ನೆನಪಿಸಿಕೊಳ್ಳುವುದು ಸಕಾಲಿಕ. ನನ್ನ ಬುದ್ಧಿಮತ್ತೆಯಲ್ಲಿ ಯಕ್ಷಗಾನ ಛಂದಸ್ಸಿನ ಬೆಳಕನ್ನು ಮೂಡಿಸಿದ ಕಂದಾವರ ರಘುರಾಮ ಶೆಟ್ಟಿಯವರಿಗೆ ಗೌರವಪೂರ್ವಕ ನಮನಗಳು. ಹಲವಾರು ಸಾಂದರ್ಭಿಕ ಪದ್ಯರಚನೆಗಳಿಗೆ ಪ್ರೇರಕರಾದ ಕೊಂಡದಕುಳಿ ರಾಮಚಂದ್ರ ಹೆಗಡೆ, ಚಪ್ಪರಮನೆ ಶ್ರೀಧರ ಹೆಗಡೆ ಹಾಗೂ ಭಾಗವತ ಸರ್ವೇಶ್ವರ ಹೆಗಡೆ ಮೂರೂರು ಇವರುಗಳನ್ನು ನಾನೂ ಯಾವತ್ತೂ ಮರೆಯುವಂತಿಲ್ಲ. ಪ್ರಸಂಗಕರ್ತ ಜಿ.ಮೃತ್ಯುಂಜಯ ಹಾಗೂ ಅವಧಾನಿ ಪ್ರಶಾಂತ ಮಧ್ಯಸ್ಥ ಸಾಗರ ಇವರ ಸಲಹೆಯು ನನಗೆ ತುಂಬಾ ಪ್ರಯೋಜಕಾರಿಯಾಗಿದೆ. ಅಸಂಖ್ಯ ಸ್ನೇಹಿತರು ನನ್ನನ್ನು ಪ್ರೋತ್ಸಾಹಿಸಿದರು. ಅವರೆಲ್ಲರನ್ನೂ ಮನಸಾ ಸ್ಮರಿಸುತ್ತೇನೆ. ಯಕ್ಷಗಾನವು ಸ್ವಲ್ಪವೂ ಗೊತ್ತಿಲ್ಲದೇ ಇದ್ದ ಪ್ರದೇಶದಿಂದ ಬಂದವಳಾಗಿದ್ದರೂ ಕೂಡ ನನ್ನ ಯಕ್ಷ ಚಟುವಟಿಕೆಗಳಿಗೆ ಸದಾ ಒತ್ತಾಸೆಯಾಗಿರುವ ನನ್ನವಳು ಮೈತ್ರಿ ಮಹಾಬಲೇಶ್ವರ ಭಟ್ಟಳನ್ನು ಮರೆಯಲೆಂತು. ಮಗ ವಿಧಾತ ಮಗಳು ಐಸಿರಿ ನನ್ನ ಬದುಕಿನ ಎರಡು ಕಂಗಳು. ಅಕಾಡೆಮಿಯ ಸಕ್ರಿಯ ರಿಜಿಸ್ಟ್ರಾರ್‌ರವರಿಗೂ, ಸಹಕರಿಸಿದ ಎಲ್ಲ ಮನಸ್ಸುಗಳಿಗೂ ನಾನು ಋಣಿ.

ಓದಿನತ್ತ ನನ್ನ ಒಲವು ಹರಿಯಲು ಪ್ರಮುಖ ಕಾರಣ ನನ್ನ ತಂದೆ ಶ್ರೀ ರಾಮಕೃಷ್ಣ ಭಟ್ಟ ಇಟಗಿಯವರು. ಕಿಂಚಿತ್ತಾದರೂ ಭಗವದ್ಗೀತೆಯನ್ನು ಪಠಿಸದೆ ದಿನಕಳೆದವರಲ್ಲ. ತಾನು ಸ್ವತಃ ಓದದಿದ್ದರೂ ಓದಿದ್ದನ್ನು ಕಂಡು ಮನಸಾ ಸಂತಸಪಡುತ್ತಿರುವವಳು ನನ್ನ ಅಮ್ಮ ಸರಸ್ವತಿ ಭಟ್ಟ. ಇಂತಹ ನನ್ನ ಅಪ್ಪ-ಅಮ್ಮ ರಿಗೆ ಈ ಹೊತ್ತಿಗೆಯು ಸಮರ್ಪಿತ.

ಎಳೆಯ ನಾನು ಹಲವರಿಂದ ಬೆಳೆಯೆ ಪೊರಟೆನು ।
ಸಲಿಸಿ ನಮನಗಳನು ಬಾಗುತುಳಿದೆಯೆಂಬೆನು ॥
ಹಳಿಯದೆನ್ನ ಒಲವತಿದ್ದಿ ಬಲುಹನೊಪ್ಪುತ ।
ನಲಿವಿನಿಂದ ಒಳಿತ ಹರಸಿ ಕೆಲದೊಳಪ್ಪುತ ॥

ಸ್ಥಳ: ಇಟಗಿ ಸಿದ್ದಾಪುರ – 581322
ದಿನಾಂಕ: 16–07–2019

ಇಟಗಿ ಮಹಾಬಲೇಶ್ವರ ಭಟ್ಟ
ಯಕ್ಷಗಾನ ಕಲಾವಿದ
ನಂ:258. "ವೈಜಯಂತ"
ಇಟಗಿ, ಸಿದ್ದಾಪುರ, ಉತ್ತರಕನ್ನಡ
ಸಂ: 9449454043
Email: itagimb@gmail.com

# ಪರಿವಿಡಿ

1. ಅಶ್ವಿನಿ ವಿಜಯ ........ 7
2. ಗೋಮಹಿಮೆ ........ 45
3. ಗುರುದಕ್ಷಿಣೆ ........ 54
4. ಗೋಕರ್ಣ ........ 66
5. ಮಾರೀಷಾ ಕಲ್ಯಾಣ ........ 88

# ಅಶ್ವಿನಿ ವಿಜಯ

ಕಥಾ ಸಾರಾಂಶ:– ದೇವಶಿಲ್ಪಿಯಾದ ವಿಶ್ವಕರ್ಮನ ಪ್ರವೇಶ, ಪತಿಯಾದ ಸೂರ್ಯನ ಶಾಖವನ್ನು ತಡೆಯಲಾರದೆ, ತನ್ನ ನೆರಳಿಗೆ ಆಕಾರವನ್ನು ಕೊಟ್ಟು ಛಾಯೆಯೆಂಬ ಹೆಸರನ್ನಿಟ್ಟು ಮಗಳು ಸಂಜ್ಞೆಯು ತವರನ್ನು ಸೇರುತ್ತಾಳೆ. ವಿಶ್ವಕರ್ಮನಾಕೆಯನ್ನು ತಿರಸ್ಕರಿಸುತ್ತಾನೆ. ಅವಳು ಉತ್ತರ ಕುರುಕ್ಷೇತ್ರದಲ್ಲಿ ತಪಸ್ಸಿನಲ್ಲಿ ನಿರತಳಾಗುತ್ತಾಳೆ. ಕೆಲಕಾಲದ ನಂತರ ಛಾಯೆ ತನಗಾದ ಮಕ್ಕಳಿಗೆ ಹಾಗೂ ಸಂಜ್ಞೆಯ ಮಕ್ಕಳಲ್ಲಿ ತಾರತಮ್ಯ ತೋರುತ್ತಾಳೆ. ಬಾಲಯಮ ಇದನ್ನು ಪ್ರಶ್ನಿಸಿದಾಗ ಕಾಲ್ಗಳು ಕೊಳೆಯಲಿ ಎಂಬ ಶಾಪವನ್ನು ಕೊಡುತ್ತಾಳೆ. ತಂದೆಯಲ್ಲಾತ ದೂರುತ್ತಾನೆ. ಮಗನಿಗೆ ಸಾಂತ್ವನ ಪರಿಹಾರ ಹೇಳಿದ ಸೂರ್ಯ ಪತ್ನಿಯನ್ನು ಪ್ರಶ್ನಿಸುತ್ತಾನೆ. ಅವಳು ಸತ್ಯ ಹೇಳುತ್ತಾಳೆ. ವಿಶ್ವಕರ್ಮನಲ್ಲಿಗೆ ಬಂದ ಸೂರ್ಯ, ಆಕ್ಷೇಪಿಸುತ್ತಾನೆ. ವಿಶ್ವಕರ್ಮನು ಘಟನೆಗಳನ್ನು ವಿವರಿಸಿ, ಮುಂದಿನ ಮಾರ್ಗೋಪಾಯವನ್ನು ಸೂಚಿಸುತ್ತಾನೆ. ಕುದುರೆ ರೂಪನ್ನು ತಾಳಿ ತಪಗೈವ ತನ್ನ ಸತಿಯನ್ನು ಸಂತೈಸಲು ಸೂರ್ಯನೂ ಅಶ್ವವಾಗಿ ಅವಳನ್ನು ಕೂಡುತ್ತಾನೆ. ಭಯಗೊಂಡ ಆಕೆ ತನ್ನೆರಡೂ ನಾಸಿಕಗಳಿಂದ ವೀರ್ಯವನ್ನು ಹೊರಹಾಕುತ್ತಾಳೆ. ಸುಂದರ ಅವಳಿ ಶಿಶುಗಳ ಜನನವಾಗುತ್ತದೆ. ಅವರೇ ಅಶ್ವಿನಿ ದೇವತೆಗಳು. ಸೂರ್ಯ–ಸಂಜ್ಞೆಯರು ತಮ್ಮ ಮಂಡಲಕ್ಕೆ ತೆರಳುತ್ತಾರೆ. ಬ್ರಹ್ಮನ ಅನುಗ್ರಹ ಪಡೆದ ಅಶ್ವಿನಿಯರು ಮಧುವಿದ್ಯೆ ಕಲಿಯಲು ದಧ್ಯಂಚ ಋಷಿಯಲ್ಲಿಗೆ ತೆರಳುತ್ತಾರೆ. ಪ್ರಪಂಚ ಜ್ಞಾನವಿಲ್ಲದೇ ಬ್ರಹ್ಮವಿದ್ಯೆ ಫಲಿಸದೆನ್ನುತ್ತಾನೆ. ಯಮಳರು ಪರ್ಯಟನೆಗೆ ತೆರಳುತ್ತಾರೆ. ದೇವೇಂದ್ರನಿಗೆ ಬ್ರಹ್ಮವಿದ್ಯೆ ಕಲಿಯುವಂತೆ ನಾರದರು ಪ್ರೇರೇಪಿಸುತ್ತಾರೆ. ದಧ್ಯಂಚ ಇಂದ್ರನನ್ನು ಪರಿಹಾಸ ಮಾಡಿದಾಗ ಕ್ರುದ್ಧನಾದ ಇಂದ್ರ ಬೇರೆಯವರಿಗೂ ಬೋಧಿಸದಂತೆ ಅಂಥ ಸಂದರ್ಭದಲ್ಲಿ ತಲೆ ಕಡಿಯುತ್ತೇನೆಂದು ನಿರ್ಬಂಧ ಹೇರುತ್ತಾನೆ. ಜಗ ತಿರುಗಿ ಬಂದ ಅಶ್ವಿನಿಯರು ವಿಷಯ ತಿಳಿದು ಪರಿಹಾರವನ್ನೂ ಮಾಡುತ್ತಾರೆ. ಹಾಗೆ ಕುದುರೆಯ ಮುಖವಾಂತ ಋಷಿಯನ್ನು ಇಂದ್ರ ಸಿಟ್ಟಿನಿಂದ ತಲೆಗಡಿದು ತೆರಳುತ್ತಾನೆ. ಅಶ್ವಿನಿಯರು ಜೋಪಾನವಾಗಿಟ್ಟ ಮುನಿಯ ನಿಜಶಿರವನ್ನು ಜೋಡಿಸುತ್ತಾರೆ. ಹೀಗೆ ವಿದ್ಯೆಯನ್ನು ಸಂಪಾದಿಸಿ ಲೋಕಸೇವೆಯಲ್ಲಿ ತೊಡಗುತ್ತಾರೆ.

ಹವಿರ್ವಾಗ್ದಾನ:– ಯಜ್ಞದಲ್ಲಿ ದಕ್ಷನಿಗೆ ಆಡಿನ ಶಿರವನ್ನು ಜೋಡಿಸುವ ಕಾಲಕ್ಕೆ ದೇವೇಂದ್ರನಿಂದ ತನ್ನ ಸಮ ಹವಿಸ್ಸು ಸಿಗುವಂತೆ ಮಾಡುತ್ತೇನೆಂದು ವಾಗ್ದಾನವಾಗುತ್ತದೆ.

ಹವಿರ್ಮಾನ್ಯತೆ:– ಋಷಿವರ ಚ್ಯವನನ ಸತಿ ಸುಕನ್ಯೆಯನ್ನು ಕೆಣಕಿದ ಅಶ್ವಿನಿಯರು, ತಾವೊಲಿದು ಚ್ಯವನನಿಗೆ ರೂಪ–ಯೌವನವನ್ನು ಕೊಡುತ್ತಾರೆ. ಪ್ರತಿಯಾಗಿ ಋಷಿಯು ಹವಿಸ್ಸನ್ನು ನೀಡುತ್ತೇನೆನ್ನುತ್ತಾನೆ. ಮಾವನಾದ ಶರ್ಯಾತಿ ರಾಜನ ಪುತ್ರಕಾಮೇಷ್ಠಿಯ ಸಂದರ್ಭದಲ್ಲಿ ಹವಿರ್ಭಾಗವೀಯುತ್ತಾನೆ. ತಡೆದ ಮಹೇಂದ್ರನ ಕೈ ಸ್ತಬ್ಧಗೊಳಿಸುತ್ತಾನೆ. ದೇವಗುರು ಬೃಹಸ್ಪತಿಗಳು ಸಂಧಾನ ನಡೆಸಿ ಹವಿಸ್ಸು ಸಿಗುವಂತಾಗುತ್ತದೆ.

ಅಶ್ವಿನ್ಯಾನುಗ್ರಹ:- ಖೇಲವೆಂಬ ರಾಜ್ಯದ ದೊರೆ ಐಳನೆಂಬವನ ಮೇಲೆ ಪಾತಾಳದರಸ ಫಣಿದನುಜ ಧಾಳಿ ಮಾಡಿ ದನಗಳನ್ನು ಹಿಡಿಯುತ್ತಾನೆ. ತಡೆಯಬಂದ ಸೇನಾನಾಯಕಿಯ ಕಾಲುಗಳನ್ನು ಮೋಸದಿಂದ ಕಡಿಯುತ್ತಾನೆ. ಪುರೋಹಿತರಾದ ಅಗಸ್ತ್ಯ ಮುನಿಯು ತಪಸ್ಸಿನಿಂದ ಅಶ್ವಿನಿಯರನ್ನು ಒಲಿಸಿಕೊಳ್ಳುತ್ತಾರೆ. ಅವರು ಆಕೆಗೆ ಉಕ್ಕಿನ ಕಾಲ್ಗಳನ್ನು ಜೋಡಿಸುತ್ತಾರೆ. ರಾಕ್ಷಸ ಸಮೂಹವನ್ನು ಆಕೆ ಸದೆ ಬಡಿಯುತ್ತಾಳೆ. ಹಣಕ್ಕಾಗಿಯೋ ಇತರ ಆಮಿಷಗಳಿಗೊಳಗಾಗಿಯೋ ವೈದ್ಯವನ್ನು ನಡೆಸಬಾರದೆಂಬ ಸಂದೇಶವನ್ನು ಅಶ್ವಿನಿಯರು ನೀಡುತ್ತಾರೆ. ಇಲ್ಲಿಗೆ ಮಂಗಳವಾಗುತ್ತದೆ.

ಪಾತ್ರಗಳು

ಅಶ್ವಿನಿ ಪ್ರಾದುರ್ಭಾವ

ವಿಶ್ವಕರ್ಮ(ತ್ವಷ್ಟ್ರ), ಸಂಜ್ಞೆ(ಛಾಯೆ),ಬಾಲಯಮ, ಸೂರ್ಯ,ಅಶ್ವಿನಿಯರು(ದಸ್ರ-ನಾಸತ್ಯ)

ಬ್ರಹ್ಮ,ದಧ್ಯಂಚ,ದೇವೇಂದ್ರ, ನಾರದ.

ಹವಿರ್ವಾಗ್ದಾನ(ದಕ್ಷಯಜ್ಞ)

ಈಶ್ವರ, ದಕ್ಷ, ಬ್ರಾಹ್ಮಣರು, ದಾಕ್ಷಾಯಿಣಿ, ವೀರಭದ್ರ, ವಿಷ್ಣು.

ಹವಿರ್ಮಾನ್ಯತೆ( ಸತಿ ಸುಕನ್ಯಾ)

ಚ್ಯವನ, ಸುಕನ್ಯಾ, ಶರ್ಯಾತಿ, ವಶಿಷ್ಠ, ಬೃಹಸ್ಪತಿ.

ಅಶ್ವಿನ್ಯಾನುಗ್ರಹ (ವೀರ ವನಿತೆ ವಿಶ್ವಲೆ)

ಫಣಿದನುಜ, ಶಠಾಸುರ, ಮಠಾಸುರ, ಗೋಪಾಲಕರು, ಐಳಚಕ್ರವರ್ತಿ, ವಿಶ್ವಲೆ, ಅಗಸ್ತ್ಯ

## ಶ್ರೀ ಗಣೇಶಾಯ ನಮಃ

### ನಾಟಿ-ಝಂಪೆತಾಳ

ಜಯತು ವಾರಣ ವದನ ಜಯತು ವಿಘ್ನ ವಿಹರಣ । ಜಯತು ಪಾರ್ವತಿ ತನುಜ ಜಲಜಾಪ್ತ ತೇಜ ॥ ಪ॥ ಜಯತು ಸಜ್ಜನ ಪೋಷ ಜಯತು ಸುಂದರ ವೇಷ । ಜಯತು ಕಲಿಮಲ ನಾಶ ಜಯತು ಜಗದೀಶ ॥ ಜಯತು ಮೂಷಿಕ ವಹನ ಜಯತು ಚಿಂತನ ಗಹನ । ಜಯತು ವಿದ್ಯಾದಾತ ಜಿತಕಾಮ ಸ್ವಾಂತ ॥ 1 ॥ ಕೃತ್ತಿವಾಸನ ಕುವರ ಕುಜನ ವ್ರಜ ಸಂಹಾರ । ನೃತ್ಯ ಗಾನವಿಲೋಲ ಸ್ತುತ್ಯ ಸುವಿಶಾಲ ॥ ಚಿತ್ತದೊಳಗಿಹ

### ತೋಡಿ-ರೂಪಕತಾಳ

ಜಯತು ಜಯತು ವಿಶ್ವಪಾಲಕ । ಸಂರಕ್ಷಿಸೆಮ್ಮ । ದಯೆಯೊಳಿಂದು ಶ್ರೀ ವಿನಾಯಕ ॥ ಪ್ರಿಯದೊಳೆಮಗೆ ಸರಸ ಕಾರ್ಯ । ಜಯವ ಕರುಣಿಸುತ್ತ ಕಾಯ । ಲಯವ ನೀಗಿ ಸರ್ವ ವಿಘ್ನ । ಭಯವ ತೊಲಗಿಸಯ್ಯ ಗಣಪ ॥1॥

### ವಾರ್ಧಿಕ

ಗಜವದನನಾದಿಯಲಿ ನೆನೆವುತಂ ದುರ್ಗೆಯನು । ಭಜಿಸುವೆನು ನಾ ಮನದಿ ಶಂಕರನ ವಂದಿಸುತ । ಅಜರಮಣಿ ಜಿಹ್ವೆಯಲಿ ನೆಲೆಸುವಂದದಿ ಬೇಡಿಕೊಳ್ಳುತಂ ಪೊಡಮಡುತಲಿ ॥

ಗಜರಾಜ ಮೊರೆಯಿಡಲು ಕಾಯ್ದವಗು ಮೇಣವನ । ನಿಜಸತಿಗು ಸಹಿತೀಗ ಬಲಬಂದು ಒರೆಯುವೆನು । ಸುಜನರೊಳು "ಅಶ್ವಿನೀ ವಿಜಯ" ದಾಯುರ್ವೇದ ವಿಜಯದಾ ಸತ್ಕಥೆಯನು ॥1॥

### ಸೌರಾಷ್ಟ್ರ- ತ್ರಿವುಡೆತಾಳ

ತರಣಿ ಸತಿಸಹ ತುರಗ ರೂಪದಿ । ತರಳ ಯಮಳರ ಪಡೆದ ಕಥೆಯ । ನ್ನೊರೆವೆ ಪದ್ಯದಿ ಯಕ್ಷಗಾನ ವಿ । ವರಿಸುವಂತೆ ॥ ಸಕಲ ಜೀವೋನ್ನತಿಯ ಗುರಿಯನು । ಸುಖದಿ ಹೊಂದಿದ ವೈದ್ಯ ರೀತಿಯು । ವಿಕಸಿಸಿತು ಅಶ್ವಿನಿಕುವರರಿಂ । ಪ್ರಖರವಾಗಿ ॥2॥ ಆಶ್ವಿನೇಯರು ಸ್ವಾರ್ಥ ತ್ಯಾಗದಿ । ವಿಶ್ವದೇಳ್ಗೆಗೆ ಸೇವೆ ಗೈದನಿ । ದರ್ಶನಗಳಲಿ ಕೆಲವ ಪೇಳುವೆ । ವಿಶ್ವಸನದಿ ॥3॥

### ಪರಿವರ್ಧಿನಿ

ಗುರುತರ ಛಂದೋ ಬಂಧವ ಪ್ರಾಸವ । ನರಿಯೆನು ಪಿಂದಣ ಕವಿಗಳ ರಚನೆಯ । ಸರಸವಿಲಾಸದ ಬರಹಕೆ ಮನಸೋತೀತೆರ ಬರೆವುದಕೆ ॥ ಕರವಿಕ್ಕಿಹೆ ನುಡಿವೆಣ್ ನುಡಿಸಿರ್ಪುದ । ಒರೆವೆನು ನುಡಿಜಾಣರೆ ತಿದ್ದೋದಿರಿ । ಹರಸಿರಿ ಎನ್ನಿಂದುತ್ತಮ ಕಾವ್ಯ

ಪರಂಪರೆ ಬರಲೆಂದು ॥1॥

## ಮಧ್ಯಮಾವತಿ-ತ್ರಿವುಡೆತಾಳ

ವಸು ಪ್ರಭಾಸನ ತನುಜ ತ್ವಷ್ಟ್ರನು । ನಿಶಿತ ಮತಿಯುತ ಶಿಲ್ಪಿಯು । ಕುಶಲ ಕಾರ್ಮಿಕರೊಳಗನನ್ಯನು । ಮಿಸುನಿ ತೇಜದಿ ಪೊಳೆವನು ॥ ಜಗದಿತಾನು ॥ 1 ॥ ಕಾಶಿಯಲಿ ಘನ ತಪವ ಗೈದು ಮ । ಹೇಶನೊಲಿದಿರೆ ಗುರುವರ । ನಾಶಿಸಿದ ದಕ್ಷಿಣೆಯನಿತ್ತೆನು । ತೋಷಗೊಳಿಸಿದ ಹೆಮ್ಮೆಯ ॥ ಹೊಂದಿರುವೆನು ॥ 2 ॥ ಇರುವಳೋರ್ವಳೆ ತನುಜೆ ಸಂಜ್ಞೆಯು । ತರಣಿ ಯಾಕೆಯ ವರಿಸುತ । ತರಳರುದಿಸಿರೆ ಯಮ ಯಮುನೆಯರು । ವರ ಮನುವೆ ಮೊದಲಾದರು । ಹರುಷದಿಂದ ॥3॥ ಇಂತಿರುವ ಜನಕನ ಸಮೀಪಕೆ । ಕಾಂತೆ ಸಂಜ್ಞೆಯು ನಮಿಸುತ । ನಿಂತಿರಲವಳನೆತ್ತಿ ನುಡಿಸಿದ । ಸಂತಯಿಸುತಲಿ ತಾನತಿ । ಕೌತುಕದಲಿ ॥4॥

## ಶಂಕರಾಭರಣ ತ್ರಿವುಡೆತಾಳ

ಮಗಳೆ ನಿನ್ನಯ ಮೊಗಕೆ ಸಿರಿಯಾ । ಸೊಗಸಿದಿಲ್ಲ ತಿಳಿಯೌ ॥ ಸ್ವಗತದನುಭವ ನಗುವೆಯೌಷಧ । ಬಿಗಿದ ಮನಕೆ ॥ 1 ॥ ಮೌನದಲಿ ನೀ ನಿಂತುದೇತಕೆ । ಏನಿದಾಯ್ತು ನುಡಿನುಡಿ ॥ ನಾನಿಹೆನು ಪರಿಹರಿಪೆ ಸಂಶಯ । ವೇನು ಪೇಳೂ ॥ 2 ॥

## ನೀಲಾಂಬರಿ ಏಕತಾಳ

ಲಾಲಿಸೆನ್ನಯ ಮಾತನೂ । ಮತ್ಪಿತ ಪೇಳ್ವೆ । ಗೋಳುಗಳೆಲ್ಲವನೂ ॥ ತಾಳಲಾರದೆ ಬಂದೆನೂ । ದಾಂಪತ್ಯದ । ಬಾಳಲಿ ಬಹು ನೊಂದೆನೂ ॥ 1 ॥ ಪದುಮ ಬಾಂಧವನಿಗೆನ್ನ । ವಿದ್ಯುಕ್ತದಿ । ಮದುವೆ ಮಾಡಿಸಿದೆ ಮುನ್ನ । ಗದರಿಪನುರಿಕಿರಣ । ಸೈರಿಸಲಾರೆ । ಬದುಕಾಯ್ತು ದುರ್ಭರಣ॥ 2 ॥

## ಭಾಮಿನಿ

ಕುವರಿಯೆಂದುದ ಕೇಳುತಾಕ್ಷಣ । ಕವಿಯೆ ಕತ್ತಲೆ ವಿಶ್ವಕರ್ಮಗೆ । ಸುವದನವು ಕಪ್ಪಾಯ್ತು ವ್ಯಥೆಯೊಳು ಭಾವ ಬರಡಾಯ್ತು ॥ ತವಕದಲಿ ನೇವರಿಸಿ ನುಡಿದನು । ಭವನ ತೊರೆದುದರಿಂದಲುನ್ನತ । ಧವಲ ಕೀರ್ತಿಯು ನಾಶವಾಯ್ತೌ ಸತ್ಯವಿದು ಕೇಳೂ ॥ 1 ॥

## ಭೈರವಿ ಝಂಪೆತಾಳ

ಮಮ ತನೂಭವೆ ನಿನ್ನ । ಗಮನದಿಂದಚ್ಚರಿಯು । ರಮಣನನು ತೊರೆಯುವುದು । ಸಮವೇನೆ ನಿನಗೆ ॥ 1 ॥ ಇಷ್ಟು ಕಾಲಗಳಿಂದ । ಸ್ಪಷ್ಟ ಬಾಳುವೆಯಂದ । ಹುಟ್ಟಿರುವ ಮಕ್ಕಳನು । ಬಿಟ್ಟೆಂತು ಬಂದೆ ॥ 2 ॥

(ತೋಡಿ ಏಕತಾಳ:–[ಅಂಜಬೇಡೆಲೆ ಸೀತೆ ಎಂಬಂತೆ]

ಮಮ ತನುಜೆಯೆ ನೀನು । ಮತಿಗೆಟ್ಟ ನಡೆಯೇನು ॥ ರಮಣನ ತೊರೆವುದು । ಸಮವೇನೆ ನಿನಗೆ ॥ 1 ॥ ಇಷ್ಟು ಕಾಲಗಳಿಂದ । ಸ್ಪಷ್ಟ ಬಾಳುವೆಯಂದ ॥ ಹುಟ್ಟಿದಾ ಮಕ್ಕಳ । ಬಿಟ್ಟೇಕೆ ಬಂದೆ ॥2॥)

## ನೀಲಾಂಬರಿ ಝಂಪೆತಾಳ

ತನುಜಾತರಿಂಗೆನುತ ನಾನು । ಸ್ವೈರಣೆಯ । ನನುಕರಿಸುತೀವರೆಗೆ ನೊಂದು ಬೆಂದಿಹೆನು ॥ ಮನದಿ ನೀ ಯೋಚಿಸಿದನೆಲ್ಲ । ಬಿಡದಿಂತು । ಚಣಚಣಕೆ ದೂರುವುದು ಸುವಿವೇಕವಲ್ಲ ॥ 1 ॥

## ಮಾರವಿ ಏಕತಾಳ

ಒಪ್ಪುವುದೆಂತೀ ನುಡಿಗಳ ಸಂಜ್ಞೆಯೆ । ಅಪ್ಪುದೆ ನೀತಿಗಳು ॥ ಕಪ್ಪು ಕಲೆಯು ಪತಿ ತೊರೆದಿಹ ತರುಣಿಗೆ । ಬಪ್ಪುದು ಬಾಳಿನಲಿ ॥ 1 ॥ ಗೃಹಕೃತ್ಯವು ಮೇಣ್ ಗರ್ಭವ ಧರಿಸುವ । ವಿಹಿತದ ಕಾರ್ಯಗಳ ॥ ಸುಹಿತದಿ ಶಿಶು ಸಂರಕ್ಷಿಪ ಕ್ರಮಗಳ । ವಹಿಸಿದೆ ಸ್ತ್ರೀಯರಿಗೆ ॥ 2 ॥ ಸಲುಗೆಯ ನುಡಿಗಳ ಬಳಲಿಕೆ ತೊಳಲಿಕೆ । ಸಲದೌ ನಿನಗಿಲ್ಲಿ ॥ ತೊಲಗೀಗೆನುತಲೆ ಚಣ ಸಹ ನಿಲ್ಲದೆ । ಒಳ ನಡೆದನು ತ್ವಷ್ಟ್ರ ॥ 3 ॥

## ಭಾಮಿನಿ

ಕಂಡು ಗರತಿಯು ಮನದಿ ಕುಸಿದಳು । ಗಂಡನಾ ಮನೆ ಮೊದಲೆ ತೊರೆದಿಹೆ । ಕಂಡು ಕಾಣದೆ ಪಿತನು ತ್ಯಜಿಸಿದ ನುಡಿಯಲೇನಿದನು ॥ ದಂಡವಾದೀ ಎನ್ನ ಬಾಳ್ವೆಗೆ । ಕಂಡುಕೊಳ್ಳುವೆ ನೆಲೆಯನೆನ್ನುತ । ಅಂಡಲೆಯದುತ್ತರದ ಕುರುಕ್ಷೇತ್ರದಲಿ ತಪಕೆಂದು ॥ 1 ॥

## ಸೌರಾಷ್ಟ್ರ ತ್ರಿವುಡೆತಾಳ

ಸೂರ್ಯಸುತ ಯಮನೊಂದು ದಿವಸದಿ । ಕಾರ್ಯ ಕಾರಣ ವ್ಯತ್ಯಯಗಳಂ । ತರ್ಯವನು ಯೋಚಿಸಿದ ಜನನಿಯ । ಚರ್ಯೆಯಲ್ಲಿ ॥ 1 ॥ ಮೊದಮೊದಲು ಕಂಡಂಥ ರೀತಿಯು । ಬದಲು ಹೊಂದಿತು ಸಾವರಣಿ ಶನಿ । ಯುದರ ಪೋಷಕೆಯೊತ್ತು ಕೊಡುವಳು । ಸದನದಲ್ಲಿ ॥ 2 ॥ ಹಿರಿಯನೆನ್ನನು ಮನುವ ಮೇಣ್ ಯಮಿ । ಯರನು ಕಡೆಗಣಿಸುವಳು ದಿನದಿನ । ಸರುವ ಕಾರ್ಯದಿ ಹೀನವೆಣಿಪಳು । ಕಿರಿಯ ಗುಣದಿ ॥ 3 ॥ ಆಟಪಾಟದಿ ಸರಸ ನಡೆಯಲಿ । ಕೂಟ ಸೇರದ ತೆರದ ವರ್ತನೆ । ಕಾಟವಾಯ್ತಿದ ಪರಿಕಿಸುವೆ ನಾ । ಮಾಟವಾಗಿ ॥ 4 ॥

## ಸಾಂಗತ್ಯ ರೂಪಕತಾಳ

ಎಂದು ನಿಶ್ಚಯ ಗೈದು ಬಂದತಿ ವಿನಯದಿ । ವಂದಿಸಿದನು ಮಾತೆಯಡಿಗೆ ॥ ಬಂದಿಹೆ ಹಸಿದು ನಾ ನೀಡೆನಗುಣಿಸನು । ಎಂದೆನೆ ನುಡಿದಳಾತನಿಗೆ ॥ 1 ॥

## ಜಂಜೂಟಿ ಏಕತಾಳ

ಯಾರಿದು ನೋಡುವೆ ಕಾಲನೆ ನೀ ನಗೆ । ಬೀರುತಲುಣಿಸನು ಬೇಡುವೆಯಾ । ಬಹು । ಕಾಡುವೆಯಾ । ಏನ್ । ನೋಡುವೆಯಾ ॥ 1 ॥

## ಮಧುಮಾಧವಿ ಏಕತಾಳ

ದಿಟ್ಟಿಸಿ ಪರಿಹಾಸ ಗೈವುದೇಕೆನ್ನ । ಸಿಟ್ಟು ತಾ ಹುಟ್ಟುವ ನಡತೆಯೊಳ್ ಮುನ್ನ ॥ ಕೆಟ್ಟ ಮಕ್ಕಳಿಹರಲ್ಲಲ್ಲಿಯು ಹೊರತು । ಕೆಟ್ಟ ಮಾತೆಯಿಹಳೆಂಬುದು ಬಲು ಪೊಸತು ॥ 1 ॥

## ಜಂಜೂಟಿ ಏಕತಾಳ

ಭಲೆ ಭಲೆ ನೀತಿಯ ಪೇಳುವೆ ಸರ್ವವ । ತಿಳಿದಿಹ ಎನ್ನಲಿ ಘನಪ್ರೌಢ । ಸರಿ । ಸರಿಗಾಢ । ನೀ । ನಿಲಬೇಡ ॥ 1 ॥

## ಮಾರವಿ ಏಕತಾಳ

ಮಂಗಲ ರೂಪಿಣಿ ಜನನಿಯೆ ನೀನತಿ । ಹಂಗಿಸಿ ನುಡಿಯುವೆಯಾ ॥ ಇಂಗಿತವೇನದು ತುಳಿಯುವೆನೆನ್ನುತ । ಅಂಗಾಲೆತ್ತಿದನು ॥ 1 ॥

## ದೇಶಿ ಮಟ್ಟೆತಾಳ

ಯಮನ ನೋಡುತ। ವನಿತೆ । ಭ್ರಮೆಯ ಹೊಂದುತ ॥ ಅಮಿತ ಶಾಪವಿತ್ತು ಸಿಟ್ಟ । ಶಮಿಪೆನೆನ್ನುತ ॥ 1 ॥

ಅರರೆ ಪೋರನೆ । ಗರ್ವ । ಗಿರಿಯನೇರ್ದನೆ ॥ ದುರಿತ ಚರಣ ವ್ರಣಗಳಾಗಿ । ನಿರತ ಕೊಳೆಯಲಿ ॥ 2 ॥ ಎಂದು ಕುದಿಯುತ । ಛಾಯೆ । ಯಂದು ಶಪಿಸುತ ॥ ಓಂದೆ ಸರಿಯೆ ಖೇದ ತಾಳು । ತೆಂದ ರವಿಸುತ ॥ 3 ॥

## ಭಾಮಿನಿ

ಭ್ರಾಂತಿ ಹೊಂದಿದೆ ಎನ್ನ ಮನಸಿನ । ಶಾಂತಿ ಕದಡಿತು ಮಾತೆ ಕ್ರೋಧವ । ನಾಂತಳಾದರೆ ರಕ್ಷಿಸುವರಾರಿನ್ನು ಕಂದರನು ॥ ನಿಂತುಕೊಂಬರೆ ಕೊಳೆತ ಕಾಲ್ಗಳು । ಮುಂತೆ ಕೊಳೆಜಲ ಹರಿಯೆ ವಾಸನೆ । ಎಂತು ಸೈರಿಪೆ ಸೆಳೆತದುರಿಗಳ ಕೊರೆವ ಕ್ರಿಮಿಗಳನು ॥ 1 ॥

## ನಾದನಾಮಕ್ರಿಯೆ ಅಷ್ಟತಾಳ

ಮಮ್ಮಲ ಮರುಗಿದ ರವಿಸೂನು । ಇನ್ನು । ಸುಮ್ಮನೆ ಹಲುಬುವೆ ಫಲವೇನು ॥ ಒಮ್ಮೆ ನಾನುಸುರುವೆ ಜನಕಗೆ । ಎಂದು । ನೆಮ್ಮುತ ಪೊರಟ ತಾನಲ್ಲಿಗೆ ॥ 1 ॥ ಪಕ್ಷಿಗಳ್ ಚಿಲಿಪಿಲಿಗುಟ್ಟಲು । ಜಗ । ವಕ್ಷಿಯ ತೆರೆದೀಕ್ಷಿಸುತಿರಲು ॥ ತಾರ್ಕ್ಷಾಗ್ರಭವನ ಸಾರಥ್ಯದಿ । ಕರ್ಮ । ಸಾಕ್ಷಿಯು ಮೂಡಿದ ಪೂರ್ವದಿ ॥ 2 ॥ ದಿನಮಣಿ ತನಯನ ನೋಡಿದ । ಬಾಬಾ । ರೆನುತಲಿ ಕರೆದು ಮಾತಾಡಿದ ॥ ಮನಸು ಬೇಗುದಿಗಳಿದೇತಕೆ । ನಿನ್ನ । ತನುವು ಕಂಪಿಸುತಿದೆ ಭಯವೇಕೆ ॥ 3 ॥

## ಶಂಕರಾಭರಣ ಏಕತಾಳ

ಆಪ್ಯಾಯನದ ಆಲಿಂಗನವು । ತಪ್ಪಿತೆಂದು ಚಣವ ತಡೆದು । ಅಪ್ಪನಿಂಗೆ ವಿಷಯಗಳನು । ಒಪ್ಪಿಸಿರ್ದನು ॥ 1 ॥ ತಾರತಮ್ಯ ಗೈವಳ್ಮಾತೆ । ಸಾರಿ ಕೇಳ್ದೆ ವಿಷಯ ವಾರ್ತೆ । ದೂರುತೆನ್ನ ನಿಂದಿಸಿದಳು । ಕಾರಣವಿಲ್ಲ ॥ 2 ॥ ಕೆಲವು ಕಾಲದಿಂದ ಗೋಳು । ಗೊಳಿಸೆ ಸೈರಿಸಿದೆವುಇಂದು । ತುಳಿಯ ಪೋದೆ ಶಾಪ ಕೊಟ್ಟು । ತಳುವದೈದಳು ॥ 3 ॥ ಶಾಪದುರಿಯ ತಣಿಸೋ ಈಗ । ಪಾಪಗಳನು ಹರಿಸೋ ಬೇಗ । ತಾಪ ಹೆಚ್ಚದಂತೆಕಾಯೋ । ಕೋಪ ಮಾಡದೆ ॥4॥

## ವಾರ್ಧಿಕ

ಕಂದನನು ತೆಗೆದಪ್ಪಿ ನುಡಿದನಾ ಭಾಸ್ಕರನು । ಸಂದುದಂ ಚಿಂತಿಸಲು ಫಲಗಳೇನಿಹುದು ತಿಳಿ । ಕಂದುಗೊರಳನೊಲುಮೆಯ ತಪಸಿನಿಂ ನೀ ಗಳಿಸು ಕ್ಷೇತ್ರ ಗೋಕರ್ಣಕೈದು ॥ ಎಂದೆಂಬ ಜನಕನಲಿ ಪೇಳ್ದನಾ ಯಮನಾಗ । ತಂದೆಯೇ ನಾ ನಡೆಯಲಾರೆ ನೋಡುವುದಿತ್ತ । ನೊಂದಿರುವೆ ಕೊಳೆತ ವ್ರಣ ಸುರಿವ ಜಲ ವಾಸನೆಯ ಪರಿಹರಿಸು ದಯೆದೋರುತ ॥ 1 ॥

## ಕಂದ

ರವಿ ಕರುಣಾದ್ರ ಹೃದಯದಿಂ । ತವಕಿಸಿ ಕುಕ್ಕುಟವ ನಿರ್ಮಿಸಲದು ಕೊಳೆಗಳಂ ॥ ಸವಿದಾ ಕ್ರಿಮಿಗಳ ಹೀರಿರೆ । ಜವದಿಂ ಸರಿಹೊಂದಲಾಗ ಪೊರಮಟ್ಟ ಜವಂ ॥ 1 ॥

## ಕೇದಾರಗೌಳ ಝುಂಪೆತಾಳ

ಏನಿದಾಶ್ಚರ್ಯ ಜಗದೆ । ಮಾತೆಯೇ । ಸೂನುವನು ಶಪಿಪುದಿಹುದೆ ॥ ಮಾನಿನಿಯ ಪರಿಕಿಸುವೆನು । ಎನುತಾಗ । ರಾಣಿವಾಸಕೆ ಬಂದನು ॥ 1 ॥ ಮಡದಿ ಮಣಿ ಬಾಬಾರೆಲೆ । ಸತ್ಯವನು । ನುಡಿಯೆ ನೀ ತ್ವಷ್ಟ್ರ ಬಾಲೆ ॥ ಹಡೆದ ಮಗನನು ಶಾಪದಿ । ನೋಯಿಸಿದೆ । ಅಡಸಿರುವ ಅಷ್ಟಮದದಿ ॥ 2 ॥ ತಲ್ಲಣಿಸುತಾಗ ನೀರೆ । ನಾನು ನಾ । ನಲ್ಲ ಹೊರ ಕವಚ ಬೇರೆ ॥ ಸಲ್ಲಲಿತೆ ಸಂಜ್ಞೆಯಂದು । ನಿನ್ನ ಬಿಸಿ । ಯಲ್ಲವಳು ನೊಂದುಬೆಂದು ॥ 3 ॥ ನೆರಳಿಗಾಕಾರ ಕೊಟ್ಟು । ಛಾಯೆಯೆಂ । ದಿರಿಸುತೆನ್ನನ್ನು ಬಿಟ್ಟು ॥ ಪೊರಡುತಿರೆ ಗುಪ್ತವೊಂದ । ಬಿಟ್ಟುಕೊಡ । ದಿರಲೆಂಬ ಮಾತಿನಿಂದ ॥ 4 ॥

## ಕುಸುಮ ಷಟ್ಪದಿ

ಮಿತಿಯರಿತು ನಟಿಸಿದೆನು । ಸುತರನ್ನು ಪಡೆದಿಹೆನು । ಮತಿವಂತ ಕ್ಷಮಿಸೆನ್ನ ಎಂದೆನುತಲಿ ॥ ವ್ಯಥಿಸುತ್ತ ಕೈ ಮುಗಿದ । ಸತಿಯನುರೆ ಸಂತವಿಸಿ । ಅತಿತೇಜ ಪೊರಟ ಮಾತುಳನ ಮನೆಗೆ ॥ 1 ॥

## ಕೇದಾರಗೌಳ ಅಷ್ಟತಾಳ

ಜಾಮಾತ ಬರಲಿಂತು ಆ ಮಾವನಿದಿರೆದ್ದು । ಪ್ರೇಮದಿ ಮನ್ನಿಸಿದ ॥ ಕ್ಷೇಮವೆ ಬರವೇನು ಶ್ರೀಮುಖ ಕಂದಿದೆ । ಕಾಮಿತವೇನುಸಿರು ॥ 1 ॥ ತಿಳಿದಿದೆ ನಿಮಗೆಲ್ಲ ಕೆದಕಿ ಕೇಳುವುದೇಕೆ । ಲಲನೆ ಸಂಜ್ಞೆಯು ವಂಚಿಸಿ ॥ ತಳುವದೆ ತೊರೆದೆನ್ನ ತವರಿಗೆ ಬಂದರೆ । ತಿಳುಹಬಾರದೆ ಬುದ್ಧಿಯ ॥ 2 ॥ ತೊರೆವರೆ ಕಾರಣ ತಿಳುಹುವೆ ಕೇಳಯ್ಯ । ಉರಿಯನು ಸಹಿಸದಾಕೆ ॥ ಬರಲಿಲ್ಲಿ ಪೇಳಿದ ನೀತಿ ಮಾರ್ಗವನೆಲ್ಲ । ಸರಿಸಿ ತಾ ತೆರಳಿದಳು ॥ 3 ॥ ಉತ್ತರ ಕುರು ಕ್ಷೇತ್ರ ಸೇರುತ ತಪದಲ್ಲಾ । ಸಕ್ತಳಾಗಿಹಳೆಂದೆನೆ ॥ ಕತ್ತಲ ವೈರಿಯು ಸತಿಯು ಸೇರುವ ತೆರ । ಯುಕ್ತಿಯ ಗೊಳಿಸಿರೆಂದ ॥ 4 ॥

## ದ್ವಿಪದಿ

ಕರ ಮುಗಿದು ಇಂತೆಂದ ಭಾಸ್ಕರನಿಗಾಗ । ಸರಸದಿಂ ವಿಶ್ವಕರ್ಮನು ಪೇಳ್ದ ಬೇಗ ॥ 1 ॥ ಅತಿಯಾದ ಶಾಖವನು ಕುಗ್ಗಿಸುವೆ ನಾನು । ಶತಪತ್ರಮಿತ್ರ ಸಮ್ಮತಿಯೆಂದನವನು ॥ 2 ॥ ರವಿತೇಜವನು ತೆಗೆದು ಸುರಶಿಲ್ಪಿ ತಾನು । ವಿವಿಧಾಯುಧಂಗಳನು ಮುದದಿ ರಚಿಸಿದನು ॥ 3 ॥

## ಶ್ರೀ ಏಕತಾಳ

ಹರಿಗೆ ಸುದರ್ಶನ ಹರನಿಗೆ ಶೂಲವ । ಸುರಪಗೆ ವಜ್ರವನು ॥ ವಿರಚಿಸುತರ್ಪಿಸೆ ಹರುಷದಿ ಧರಿಸುತ । ಪೊರಟರು ಬೇಗದಲಿ ॥ 1 ॥ ಮಾವನ ಬೀಳ್ಗೊಂಡಾರ್ಯಮ ಪೊರಟನು । ಭಾವೆಯ ಪುಡುಕಲಿಕೆ ॥ ಆ ವನಿತೆಯು ತುರಗದ ರೂಪಿನೊಳಿಹ । ಸೋವನು ತಿಳಿದೆಂದ ॥ 2 ॥

## ನವರೋಜು ಏಕತಾಳ

ಇಳಿದವರಾ ಎತ್ತಲಿಕೆ । ನಾವ್ । ಇಳಿಯುವುದೂ ವ್ಯವಹರಿಕೆ ॥ ನಳಿನಾಕ್ಷಿಯ ಹೃದಯದ ತುಮುಲವ ನಾ । ತಿಳಿವರೆ ಹಯದಾಕಾರವ ತಾಳುವೆ ॥ 1 ॥ ಅಶ್ವದ ಆಕಾರವನು । ಸ । ಪ್ತಾಶ್ವನು ತಾ ಧರಿಸಿದನು ॥ ಅಶ್ವಿನಿಯಾಗಿಹ ಸತಿಯೊಳು ಸರಸದಿ । ವಿಶ್ವಾಸದೊಳಾತನು ಕೂಡಿದನೂ ॥ 2 ॥ ಆಕೆಯು ತಾನಾಕ್ಷಣದಿ । ಬಲು । ಜೋಕೆಯೊಳಗವಸರದಿ ॥ ವ್ಯಾಕುಲ ಗೊಳುತಾ ವೀರ್ಯವ ನಾಸದಿ । ನೂಕಲು ಇಬ್ಭಾಗಾಗುತ ಬಿದ್ದಿತು ॥ 3 ॥

## ದ್ವಿಪದಿ

ಸೌಂದರ್ಯ ಮೈತಳೆದು ಶೈಶವವ ಗಳಿಸಿ । ತೆಂದೆಂಬ ಭಾವದಲಿ ಯಮಳರಾಗುದಿಸಿ ॥ 1 ॥ ನೇಸರನು ಸಂಜ್ಞೆಯನು ಸರಸದಲಿ ರಮಿಸಿ । ವೇಷದಾ ಪೊರೆ ಕಳಚೆ ವಾಸ್ತವವ ತಿಳಿಸಿ ॥ 2 ॥ ಮನ್ನಿಸಿರಿ ತಪ್ಪುಗಳನೆಂದು ಕರ ಮುಗಿಯೆ । ಸನ್ನುತನು ಒಪ್ಪಿಕೊಂಡವಳ ಮೇಲ್ಸರಿಯೆ ॥ 3 ॥

## ಸೌರಾಷ್ಟ್ರ ತ್ರಿವುಡೆತಾಳ

ವನಜ ಬಾಂಧವ ತರುಣಿ ಸಂಜ್ಞೆಯ । ತನುಜರಾಗಿಹ ಆಶ್ವಿನೇಯರು । ಮನಸಿಜೋಪಮ ರೂಪಿನಲಿ ದಿನ । ದಿನದಿ ಬೆಳೆಯೆ ॥ 1 ॥ ರೂಪ ಸಂಪದವೊಂದೆ ಸಾಲದು । ಲೋಪವಿಲ್ಲದ ಪದವಿಗೋಸುಗ । ಆಪಜಾಸನನೊಲವ ಗಳಿಸಲು । ಪೋಪೆವೀಗ ॥ 2 ॥

## ವಾರ್ಧಿಕ

ಅದನೆನೆದು ಬ್ರಹ್ಮನಂ ದೃಢಮನದಿ ಧ್ಯಾನಿಸಲು । ವಿಧಿ ದಯದಿ ಮೈದೋರಿ ಬೇಡಿರುವ ಉಪವೇದ । ವದುವೆಆಯುರ್ವೇದವಂ ಕೊಟ್ಟು ಪೂರ್ಣತೆಯ ಮಾರ್ಗವನು ಸೂಚಿಸಿದನು । ಮಧುವಿದ್ಯೆಯಂ ನೀವು ದಧ್ಯಂಚ ಋಷಿಗಳಿಂ । ಮುದದಿಂದ ಪಡೆದಾಗ ಪರಿಣಾಮವಹುದೆಂದು । ವಿಧಿಸುತ್ತ ನೇಮವಂ ಥಟ್ಟನಂತರ್ಧಾನ ಗೈದಿರಲು ಅಶ್ವಿನಿಯರು ॥ 1 ॥

## ಸುರುಟಿ ಏಕತಾಳ

ಹರುಷದೊಳಾ ದಿನದಿ । ಅಶ್ವಿನಿ । ಯರು ತಮ್ಮೊಳು ಮುದದಿ ॥ ಶರಣರ ರಕ್ಷಿಪ । ಪರಮರ್ಷಿಯನುರೆ । ದರುಶನಕಾಂಕ್ಷಿಸಿ । ಪೊರಟರು ಬೇಗದಿ ॥ 1 ॥ ಎರಗಿದ ಯಮಳರನು । ನೆಗಹುತ । ಲರುಹಿದ ಮುನಿವರನು ॥ ಸ್ಮರಸಮ ರೂಪರೆ । ತ್ವರಿತದೊಳೀದಿನ ॥ ಬರಲೇಂ ಕಾರಣ । ವರುಹಿರಿ ವಹಿಲದಿ ॥ 2 ॥

## ತೋಡಿ ರೂಪಕತಾಳ

ಮುನಿವರೇಣ್ಯ ಸಾತ್ವಿಕಾರ್ಣವ । ನೀ ಲಾಲಿಸಯ್ಯ । ವಿನಯದಿಂದ ಪೇಳ್ವ ಪ್ರವರವ ॥ ಜನನಿ ಸಂಜ್ಞೆ ಜನಕ ತಪನ । ವಿನುತ ತುರಗ ರೂಪಿನಿಂದ । ತನಯರೆಮ್ಮ ಪಡೆದರೆಮಗೆ । ಅನಘ ಬ್ರಹ್ಮವಿದ್ಯೆ ನೀಡು ॥ 1 ॥ ಬ್ರಹ್ಮನೊಲುಮೆ ಪಡೆದೆವಿಂದಿಗೆ । ಆಯುರ್ವೇದ । ನೆಮ್ಮಿಕೊಂಡೆವೆಮ್ಮ ಬಾಳ್ವೆಗೆ ॥ ಬ್ರಹ್ಮ ವಿದ್ಯೆ ಗಳಿಸಲೆಂದು । ಬ್ರಹ್ಮ ಪೇಳ್ದ ಮಾತಿಗಾಗಿ । ನಿಮ್ಮ ಸೇರ್ದೆವಯ್ಯ ದಯದಿ । ಸಮ್ಮತಿಸುತ ಕಲಿಸಿರೆಮಗೆ ॥ 2 ॥ ಬೇಡ ಬೇಡ ಸೂರ್ಯ ಬಾಲರೆ । ನೀವಿದಿನ್ನೂ । ನೋಡಲಿಂತು ಮುಗ್ಧ ತರಳರೆ ॥ ಗಾಢತರದ ಬ್ರಹ್ಮ ವಿದ್ಯೆ । ನೀಡಲದಕೆ ಸಾರ್ಥಕತೆಯು । ರೂಢಿಯೊಳಗೆ ನಿಮಗೆ ಸಿಗದು । ನಾಡ ಪ್ರಜ್ಞೆ ಮೂಡೆ ಕೊಡುವೆ ॥ 3 ॥

## ಆರ್ಯಸವಾಯಿ ಏಕತಾಳ (ಶರ ಷಟ್ಪದಿ)

ನಗುತಲಿ ಪೇಳಿದ । ಜಗಪರ್ಯಟನವ । ಮಿಗೆ ಕೈಗೊಳ್ಳಲು ನಿಮಗಿಂದು ॥ ಬಗೆಬಗೆಯಿಂದಲಿ । ಸಿಗುವಂಥನುಭವ । ಮಿಗಿಲೆನಿಪುದು ವಿದ್ಯೆಯನೆಂದು ॥ 1 ॥ ಗುರುವರ ಪೇಳ್ದುದ । ನರಿತಾ ಯಮಳರು । ಧರಣಿಯ ಸಂಚರಿಪುದ್ದೇಶ ॥ ಧರಿಸುತ ಬಂದರೆ । ಪರಿಕಿಸಿ ಕಂಡರು । ಮರುಕದ ಜತೆಯಲಿ ಸಂತೋಷ ॥ 2 ॥ ಅಳುವಾ ಗುಬ್ಬಿಯ । ತಳುವದೆ ನೋಡಲು । ಕಳವಳಗೊಂಡಿದೆ ಮರಿಯಲ್ಲಿ ॥ ನಿಲದಾಹಾರವ ।

ಮೆಲುವಹ ಗೃಧ್ರವು । ಸಿಲುಕಿಸಿ ತನ್ನಯ ಬಾಯಲ್ಲಿ ॥ 3 ॥ ತಾಯಿಯ ಗೋಳನು । ಆಯದಿ ಕೇಳುತು । ಪಾಯವ ಗೊಂಡಾ ಸುರವರರು ॥ ನೋಯದ ತೆರದಲಿ । ಸಾಯಕ ಬಿಡಲಾ । ಬಾಯನು ಮಿಡುಕದೆ ತೆರೆದಿರಲು ॥ 4 ॥ ಪಕ್ಷಿಯ ಮರಿಯು ಸು । ರಕ್ಷಿತ ತಾಣದ । ಕಕ್ಷೆಯ ಸೇರಿರೆ ಮೊದಲಾಗ ॥ ವೀಕ್ಷಿಸಿ ಬಾಣವ । ಲಕ್ಷಿಸಿ ತೆಗೆಯಲು । ತಕ್ಷಣ ಗೃಧ್ರವು ಸರಿದಾಗ ॥ 5 ॥ ಅಶ್ವಿನಿ ಕುವರರು । ಅಶ್ವವನೇರುತ । ವಿಶ್ವ ಪ್ರದಕ್ಷಿಣೆ ಗೈಯುತ್ತ ॥ ನಶ್ವರ ಶಾಶ್ವತ । ಪಾರ್ಶ್ವ ವಿಚಿತ್ರವ । ಹ್ರಸ್ವ ವಿರದೆತಾವೀಕ್ಷಿಸುತ ॥ 6 ॥

## ಭೈರವಿ ಝಂಪೆತಾಳ

ಇರಲಿತ್ತ ಸುರಪುರದಿ । ಪುರುಹೂತನೋಲಗದಿ ॥ ಸುರವರರ ಕೂಡುತ್ತ । ಮೆರೆದಿರ್ದನಾಗ ॥ 1 ॥ ಸುಭಗತಮ ಸುರಮುಖ್ಯ । ಸಭೆಯೊಳಗೆ ಸೌಂದರ್ಯ । ದಭಿವ್ಯಕ್ತಿ ಸಂಭ್ರಮಕೆ । ನಿಭವನ್ಯವಿಲ್ಲ ॥ 2 ॥ ಅಜಪುತ್ರ ನಾರದರು । ಕುಜನಹರ ನಾಮವನು । ಭಜಿಸುತ್ತ ಬರುತಿರಲು । ಗಜವಾಹ ನೋಡಿ ॥ 3 ॥

## ಕೇದಾರಗೌಳ ಝಂಪೆತಾಳ

ಬಂದೆಯಾ ಬಾ ನಾರದ । ಪೊಸವಿಷಯ । ವೊಂದಾದರಿಹುದೆ ಜಗದಾ ॥ ನಿಂದಿರದೆ ಚರಿಪೆ ನೀನು । ನವ್ಯದಾ । ನಂದವನು ತಂದೆಯೇನು ॥ 1 ॥

## ಬೇಗಡೆ ಏಕತಾಳ

ಎಲೆ ಪುರಂದರ ಲಾಲಿಸ್ಯೆ ನೀನು । ಅಭಿಮಾನ ಭಾವವ । ತಳೆದು ಪೇಳುವ ವಚನವೆಲ್ಲವನೂ ॥ ಗಳಿಸಿ ಮೂಲೋಕಾಧಿಪತ್ಯವ । ಚೆಲುವ ಛಲಬಲವಾಂತು ಮೆರೆದಿಹೆ । ಸಲುವ ಪೂರ್ಣತೆ ಹೊಳಹು ಬರಲಿಕೆ । ಕಲಿಯ ಬೇಕ್ಕೈ ಬ್ರಹ್ಮ ವಿದ್ಯೆಯ ॥ 1 ॥

## ಕೇದಾರಗೌಳ ಝಂಪೆತಾಳ

ನಿಶಿತಮತಿ ನಿನ್ನ ಮಾತು । ಸರಿಯಿಹುದು । ಋಷಿವರನೆ ಮನಕೆ ಬಂತು ॥ ವಸುಧೆ ಮೂರರಲಿ ಯೆನ್ನ । ಹಿರಿಮೆಯರಿ । ತುಸುರುವರು ಇಹರೆ ಮುನ್ನ ॥ 1 ॥

## ಸಾಂಗತ್ಯ ರೂಪಕತಾಳ

ಮಘವ ಕೇಳ್ ದಧ್ಯಂಚ ಋಷಿ ಬ್ರಹ್ಮ ವಿದ್ಯೆಗೆ । ಜಗದೊಳುತ್ತಮ ಗುರುವಹುದು ॥ ಲಗುಬಗೆಯಿಂದನುನಯದಿ ನೀ ಪಡೆಯೆಂದು । ನಗುತಲಿ ನಾರದ ನಡೆದ ॥ 1 ॥ ನಾರದನೆಂದುದ ಕೇಳುತ ಪುರುಹೂತ । ಭೂರಿ ಸಂತೋಷದೊಳಾಗ ॥ ಯಾರಾತ ಮುನಿಯವ ವಿದ್ಯೆಯ ಬೋಧಕ । ಸಾರಿ ತಿಳಿವೆನೆಂದು ಪೊರಟ ॥ 2 ॥

## ಕೇದಾರಗೌಳ ಅಷ್ಟತಾಳ

ಪರಮರ್ಷಿ ದಧ್ಯಂಚರಾಶ್ರಮ ಕಾಡಿನ । ತರುಲತೆ ಮಧ್ಯದಲಿ ॥ ನೆರೆ ಶಾಂತ ಪರಿಸರ ಹುಲಿಸಿಂಹ ಗೋವ್ಗಳು । ಹರಿಣ ಶಶಾದಗಳು ॥ 1 ॥ ಹುಟ್ಟಿನಿಂದಿಹ ಸಹಜ

ವಿರೋಧ ಭಾವವಂ । ಬಿಟ್ಟನುರಾಗಗಳು ॥ ದಟ್ಟಯಿಸಿದ ವಾತಾವರಣದೊಳುಪಸ್ಥಿತಿ । ಪಟ್ಟ ಶಿಷ್ಯರ ನಡುವೆ ॥ 2 ॥ ಸುರಪನ ಕಂಡಾಗ ಮುನಿವರನಿದಿರೆದ್ದು । ಕರವಿಡಿದಾಕ್ಷಣದಿ ॥ ಕರೆತಂದು ಮನ್ನಿಸಿ ಬಂದಿರ್ಪ ಕಾರಣ । ವರುಹೆಂದನವ ಮುದದಿ ॥ 3 ॥ ಮುನಿವರ ಕೇಳ್ ಬ್ರಹ್ಮ ವಿದ್ಯೆ ಸಾರವನೆಲ್ಲ । ಎನಗಿಂದು ಬೋಧಿಸಯ್ಯ ॥ ಘನವಾದ ವಿದ್ಯೆಯ ಶ್ರದ್ಧೆಯಿಂ ಕಲಿವೆ ವ । ಚನವಿದು ಸತ್ಯವಯ್ಯ ॥ 4 ॥

## ಮಧುಮಾಧವಿ ಏಕತಾಳ

ಪುರುಹೂತ ನಿನಗೇಕೆ ಪರವಿದ್ಯೆ ಚಿಂತೆ । ಸುರುಚಿರ ಶಚಿರಂಭೆ ಮೇನಕೆ ಮುಂತೆ ॥ ಸರಸದೊಳೋಲಾಡುತಧಿಕಾರದೊಳಗೆ ॥ ಮೆರೆವೆ ನೀನಧಿಕ ಕೀರ್ತಿಯ ತೇಜ ಬೆಳಗೆ ॥ 1 ॥

## ಘಂಟಾರವ ಅಷ್ಟತಾಳ

ನುಡಿಯ ಕೇಳುತ ಸುರಪಾಲ ಕುದಿದೆದ್ದು । ಸಿಡಿಲಿನಂತಾರ್ಭಟಿಸಿ ಪೇಳ್ದನು । ಕಡಿಮೆ ಯೆಣಿಪುದು ಯೇತಕೋ ॥ 1 ॥ ಸ್ಪಷ್ಟವಾಗಿಹ ಮಹದಾದೆನ್ನಿಷ್ಟವ । ತುಷ್ಟಿಗೊಳಿಸದೆ ದಿಟ್ಟತನದಲಿ । ಕೆಟ್ಟ ಗರ್ವವ ತೋರ್ಪೆಯ ॥ 2 ॥ ವಿದ್ಯೆಯಂ ಪರರಿಂಗಿತ್ತೆಯಾದರೆ । ಸುದ್ದಿಯಿಲ್ಲದೆ ಶಿರವ ಕಡಿದಪೆ । ವೃದ್ಧಶ್ರವನಾ ಮಾತಿದು ॥ 3 ॥

## ಘಂಟಾರವ ರೂಪಕತಾಳ

ಎಂದು ಮಘವನೂ । ಪೊರಡೆ ಮುನಿಪನು ॥ ನೊಂದು ಖಿನ್ನತೆ । ಹೊಂದುತೆಂದನು ॥ 1 ॥ ಆಧಿಪತ್ಯದ । ಮದವಿಕಾರದಿ ॥ ಬಾಧೆ ತಂದಪ । ಎನ್ನ ಬದುಕಿಗೆ ॥ 2 ॥ ಪೇಳಲಾರಿಗೆ । ಭಾರಿ ಸಂಕಟ ॥ ಶೂಲಿ ಶಂಕರ । ಪಾಹಿಮಾಂ ಶಿವ ॥ 3 ॥

## ಶಂಕರಾಭರಣ ತ್ರಿವುಡೆತಾಳ

ಎಂದು ಚಿಂತಿಸಲಶ್ವಿನೀಸುತ । ರಂದು ಬಂದು ತಾವತಿ । ಮಂದಹಾಸವ ಸೂಸಿ ಮುನಿಪನೊ । ಳೆಂದರಾಗ ॥ 1 ॥ ಪೇಳಿದಾಣತಿಯೊಪ್ಪಿ ಸೂಕ್ಷ್ಮವ । ತಾಳಿ ಜಗದಿ ನಿತ್ಯದಿ । ಆಲಸಿಕೆಯನು ತೊರೆದು ಕಂಡೆವು । ಮೂಲಗಳನೂ ॥ 2 ॥ ವೇಗದಿಂ ಜಗ ತಿರುಗಿ ಬಂದೆವು । ಈಗ ನೀಡು ವಿದ್ಯೆಯ ॥ ಯೋಗವೆಂದೇ ಸೇವೆ ಮಾಳ್ಪೆವು । ಸೋಗಿದಲ್ಲ ॥ 3 ॥

## ಕಾಂಬೋಧಿ ಝಂಪೆತಾಳ

ಮುಖವ ನೋಡುತಲಿ ಚಣ ಮೌನವಾಂತನು ಮುನಿಪ । ಅಕುಟಿಲರೊಡನೆ ಪೇಳ್ದನಾಗ ॥ ಮಿಕವಾದೆ ಬಲೆಯೊಳಗೆ ತಲೆಗಡಿವೆನೆಂದು ಶತ । ಮಖನು ನಿರ್ಬಂಧ ಹೇರಿದನು ॥ 1 ॥

## ಸಾರಂಗ ಅಷ್ಟತಾಳ

ಹೀಗೆಂದನೇನ್ ಸುರಪ । ಘನ ಚಿಂತೆಯ । ಹೋಗಲಾಡಿಸಿ ಮುನಿಪ ॥ ಲೋಗತನಕೆ ಮದ್ದಿಲ್ಲ ವಿವೇಕದೋಳ್ ನಾವು ॥ ಸಾಗುವೊಲು ಸುಚಿಕಿತ್ಸೆಗೈವೆವು । ಈಗ ಹಯಮುಖವಿರಿಸುವುದು ಹಿತ ॥ 1 ॥

## ದ್ವಿಪದಿ

ತುರಗ ಮುಖ ಸೇರಿಸಲು ಮುನಿಪ ಸರಿಯೆಂದ । ಸುರರು ಸುಚಿಕಿತ್ಸೆಯನು ಗೈದಿರಲು ಚೆಂದ ॥ 1 ॥ ವಿದ್ಯೆಯನು ಬೋಧಿಸುತ ಕುಳ್ಳಿರಲಿಕಂದು । ಸದ್ದದನುಕೇಳುತಲಿ ಸುರಪಾಲ ಬಂದು ॥ 2 ॥

## ಮಾರವಿ ಏಕತಾಳ

ಗುಡುಗುಡಿಸುತಲಾ ಜಂಭ ವಿನಾಶನ । ಕಿಡಿಗೆದರುತಲಾಗ ॥ ನುಡಿದ ನಿವಾಳಿಯೆ ದುರಹಂಕಾರವು । ಅಡರಿದೆ ಶಿರದೊಳಗೆ ॥ 1 ॥ ಸ್ವರ್ಗಾಧಿಪನಾದೆನ್ನಯ ನುಡಿಗಳ । ಕುಗ್ಗಿಸಿ ನೀ ನಡೆದೆ ॥ ಬಗ್ಗಡದಂತಿಹ ನಡತೆಯ ಮೆಚ್ಚೆನು । ಜಗ್ಗದೆ ಶಿಕ್ಷಿಸುವೆ ॥ 2 ॥ ಮೋರೆಯನೀಕ್ಷಿಸೆನೆನುತಲಿ ರೌದ್ರಾ । ಕಾರವ ತಾಳಿದನು ॥ ಮೀರಿದ ಕ್ರೋಧದಿ ತಲೆಗಡಿದುರುಳಿಸಿ । ಸಾರಿದ ಸುರಪುರಕೆ ॥ 3 ॥

## ಭಾಮಿನಿ

ಸುರ ಚಿಕಿತ್ಸಕ ಸೂರ್ಯಬಾಲರು । ಪರಿಕಿಸುತಲಾಕ್ಷಣದೊಳಗೆ ನಿಜ । ಶಿರವ ಸೇರಿಸೆ ನಗುತಲೆದ್ದನು ಮುನಿಪ ದಧ್ಯಂಚ ॥ ಪರಮ ವಿದ್ಯೆಯ ಮುಂದುವರಿಸುತ । ಪರಿ ಸಮಾಪ್ತಿಯ ಗೈಯಲಾದಿನ । ಎರಗಿ ನಿಂದರು ಘನ ವಿನೀತರು ಭಕ್ತಿಭಾವದಲಿ ॥ 1 ॥

## ಸಾವೇರಿ ರೂಪಕತಾಳ

ಕಾ । ರುಣ್ಯ ಸಿಂಧು ಪುಣ್ಯ ಪುರುಷ ಗುರುವರೇಣ್ಯನೆ । ಧನ್ಯರಾದೆವಯ್ಯ ನಾವು ಪೂರ್ಣ ಕಾಮನೆ ॥ 1 ॥ ನೆ । ಮ್ಮದಿಯ ಪಡೆದೆವಿಂದು ನಿಮ್ಮ ಕೃಪಾ ವರ್ಷದಿ। ಮಧುರ ಭಾವ ಸಮತೆಯೆಣಿಕೆ ಪ್ರಾಣಿ ವರ್ಗದಿ ॥ 2 ॥

## ಸಾಂಗತ್ಯ ರೂಪಕತಾಳ

ತೊಡಕ ನಿವಾರಿಸಿ ವಿದ್ಯೆಯ ಕಲಿತಿರಿ । ದಡಸೇರ್ದ ನಾವಿಕರಂತೆ ॥ ಪೊಡವಿ ಮೂರರಲಿ ನೀವುತ್ತಮ ವೈದ್ಯರು । ಮೃಢ ನಿಮ್ಮ ನಿರತ ರಕ್ಷಿಸಲಿ ॥ 1 ॥

ದಕ್ಷಯಜ್ಞ ( ಹವಿರ್ಭಾಗ್ದಾನ)

## ಸೌರಾಷ್ಟ್ರ ತ್ರಿವುಡೆತಾಳ

ಸುರಪನೋಲಗವಿತ್ತು ನುಡಿದನು । ಮೆರೆವ ಸಂಗಮದಲ್ಲಿ ನಡೆಯುವ । ಧರುಮ ಸತ್ರಕೆ ಭರ್ಗ ಮುಖ್ಯರ । ಕರೆಯಬೇಕು ॥ 1 ॥ ಎಂದು ನುಡಿದಾ ನಿರ್ಜರಾಧಿಪ । ನಂದಿವಾಹನನನ್ನು ಕರೆತರ । ಲೆಂದು ಬಂದನು ರಜತ ಪರ್ವತ । ಕಂದು ಬೇಗ ॥ 2 ॥ ಪತಿತ ಪಾವನ ಪುರವಿನಾಶನ । ಚತುರತೆಯ ಗತಿ ಲಾಸ್ಯ ತಾಂಡವ । ದತಿ ವಿನೋದದೊಳಿರ್ದ ಗಿರಿಯೊಳು । ಸತಿಯ ಸಹಿತ ॥ 3 ॥ ಕ್ಷೇಮವೇ ಸುರಪಾಲ ಮುಖ್ಯರೆ । ಪ್ರೇಮ ಭಾವದಿ ಬಂದುದೇತಕೆ । ನೇಮ ಮುರಿದರೆ ರಾಕ್ಷಸರು ಬಲು । ತಾಮಸದಲಿ ॥ 4 ॥

### ಕೇದಾರಗೌಳ ಅಷ್ಟತಾಳ

ಕರುಣಾಬ್ಧಿ ಕೇಳು ತ್ರಿವೇಣಿ ಸಂಗಮದಲ್ಲಿ । ಧರುಮ ಸತ್ರವ ಕೈಗೊಂಡು ॥ ಕರೆವರೆ ಬಂದಿಹೆವಧ್ಯಕ್ಷರಾಗುತ । ಹರಸುವುದೆಮ್ಮನೆಲ್ಲ ॥ 1 ॥ ವಾಸವ ಕೇಳಯ್ಯ ತೋಷವಾಂತೆನು ನಾನು । ಆಶಯುವಿದು ಸೊಗಸು ॥ ಭಾಷಿಪುದಿದಕೇನು ಏಳಿಪೋಗುವಯೆಂದ । ದೋಷನಿವಾರಕನು ॥ 2 ॥

### ಕಾಂಬೋಧಿ ಝಂಪೆತಾಳ

ಬ್ರಹ್ಮ ಮಾನಸಪುತ್ರ ದಕ್ಷನಾ ದಿನದಲ್ಲಿ । ದಿಮ್ಮನೆದ್ದನು ಸತ್ರಕೆನುತ ॥ ಒಮ್ಮೆ ನಾ ತೆರಳಿದರೆ ಮನ್ನಣೆಯು ದೊರೆಯುವುದು । ಹಮ್ಮುಬಿಮ್ಮಿಗೆ ಕೊರತೆಯಿರದು ॥ 1 ॥ ವಾಸವಾದ್ಯನಿಮಿಷರು ಸೇರಿ ಸಂಗಮದಲ್ಲಿ । ದೋಷಮರ್ದನನೀಶನನ್ನು ॥ ತೋಷದಿಂದಧ್ಯಕ್ಷ ಪದವಿಯಲಿ ಕುಳ್ಳಿರಿಸಿ । ಆಶಿಸಿದರೆಲ್ಲರಿಗೆ ಶುಭವ ॥ 2 ॥

### ಭಾಮಿನಿ

ಇಂದುಶೇಖರನಾ ಸಭಾಪತಿ । ಎಂದು ಗೌರವವೀಯುತಾಕ್ಷಣ । ಸಂದಿರುವ ಸಭೆಗಾಗಿ ಜವದಲಿ ದಕ್ಷನೈತಂದ ॥ ಕುಂದು ಬರದಿರಲೆಂದು ಸುಮನಸ । ವೃಂದವೆದ್ದಾದರದಿ ಸ್ವಾಗತ । ವಂದನೆಯನೀಯಲ್ಕೆ ಭರ್ಗನು ಕುಳಿತಿಹುದ ಕಂಡು ॥ 1 ॥

### ಸೌರಾಷ್ಟ್ರ ತ್ರಿವುಡೆತಾಳ

ಸುತ್ತ ನೋಡುತ ದಕ್ಷ ತಾ ಖತಿ । ವೆತ್ತು ನುಡಿದನು ಪೂರ್ಣ ಗೌರವ । ವಿತ್ತ ಸಭೆಯನು ಮೀರ್ದನೀಶನು । ಮತ್ತನಾಗಿ ॥ 1 ॥ ಈಶ ತಾನಿಹೆನೆಂಬ ಮದದಾ । ಪಾಶ ಬಿಗಿದಿದೆ ದೇಹವಂ ಪರಿ । ಹಾಸ ಗೈವನೆ ಎನ್ನನೀತನು । ರೋಷವಹುದು ॥ 2 ॥ ಏಳದಿರ್ದೊಡೆ ಕುಳಿತು ಕೊಳ್ಳಲಿ । ಪೇಳುತುಚಿತದ ಮಾತನಾಡನು । ನಾಲಿಗೆಗೆ ಗರ ಬಡಿಯಿತೇನದು । ತಾಳಲೆಂತು ॥ 3 ॥ ಪದ್ಮಪೀಠನ ಮಾತಮೀರದೆ । ಮುದ್ದು ಕುವರಿಯನಿತ್ತೆನಿವನಿಗೆ । ಶುದ್ಧ ಮರ್ಕಟ ಕರದ ಮಾಲೆ ವಿ । ರುದ್ಧವಾಯ್ತು ॥ 4 ॥ ಸ್ನಾನ ಜಪತಪ ನೇಮ ವಿಲ್ಲ ಸ್ಮ । ಶಾನ ವಾಸವು ಭಸ್ಮಲೇಪನ । ಲೀನ ಭೂತ ಪಿಶಾಚ ಬಳಗದಿ । ಹೀನನೈಸೆ ॥ 5 ॥ ಉಸುರಲೇನನು ಮಾಂಸಹಾರಿಗ । ಳಸುರ ಪಾಷಂಡಿಗಳ ದೇವರು । ವಸುಧೆಗಗ್ಗದ ವರಪ್ರದಾತನು । ಅಸಹನೀಯ ॥ 6 ॥ ಏಕೆ ಬಂದೆನು ಪಾತಕಿಗಳಿಹ । ಕಾಕು ಸ್ಥಳವೆಂದಾಗ ಸಭೆಯನು । ನೂಕಿ ತನ್ನಿಷ್ಟದೊಳು ಪೊರಟ ವಿ । ವೇಕತೊರೆದು ॥ 7 ॥

### ಕಾಂಬೋಧಿ ಅಷ್ಟತಾಳ

ನಗುತೆಂದ ಪರಶಿವನಾಗ । ಕರೆದು । ಮಘವ ಮುಖ್ಯರೊಳು ಸರಾಗ ॥ ಜಗದಲ್ಲಿ ಗೌರವ ಮನ್ನಣೆ ಇವಗಿಷ್ಟೆ । ಲಘುವಾಗಿ ನುಡಿವನು ಹೋಗಲಿ ಬಿಡಿಬಿಡಿ ॥ 1 ॥

## ವಾರ್ಧಿಕ

ಆದುದಂ ಮರೆತೆಲ್ಲ ಮುಂದರಿಯಿರೆಂದೆನಲು । ಸಾದರದಿ ಕಾರ್ಯಗಳ ಸಂಪೂರ್ಣವಂ ಗೊಳಿಸೆ । ಹ್ರಾದಿನೀಧರ ಮುಖ್ಯರನು ಬಿಟ್ಟು ಶಿವನು ಪೊರಮಟ್ಟ ರಜತಾದ್ರಿಗೆನುತ ॥ ಆ ದಿನದಿ ನಡೆದುದಕೆ ದಕ್ಷ ತಾ ಕುದಿದೆದ್ದ । ಆದರವ ತೋರದಿಹ ಶಂಕರನ ಮದವನ್ನು । ಶೋಧಿಸುವೆನೆನುತಾಗ ಬ್ರಹ್ಮನಲಿ ದೂರಲ್ಕೆ ಮನ್ನಿಸಿದ ಪರಿಣಾಮದಿ ॥ 1 ॥

## ಕೇದಾರಗೌಳ ಅಷ್ಟತಾಳ

ಧರಣಿ ಮೂರರಲಿ ಪ್ರಜೇಶ್ವರತ್ವವು ವಿಧಿ । ಕರುಣೆಯ ಕಾರಣದಿ ॥ ದೊರಕಿತೆನಗಹಹ ಸರಿದೊರೆ ಯಾರಿಲ್ಲ । ಹರನಹಂಕಾರವನು ॥ 1 ॥ ತಗ್ಗಿಪ ಮಾರ್ಗ ನಿರೀಶ್ವರ ಯಾಗವ । ಹಿಗ್ಗಿನಿಂ ಕೈಗೊಂಬೆನು ॥ ಸಗ್ಗದ ಗುರುವಿನ ಸಂತಸದಪ್ಪಣೆ । ಜಗ್ಗನೆ ಪಡೆದಿಹೆನು ॥ 2 ॥

## ಸುರುಟಿ ಆದಿತಾಳ

ನೇಸರ ಮೂಡುತಿರೆ । ಪೊರಟಿತು । ಭೂಸುರ ವ್ರಾತವುರೆ ॥ ದ್ವೇಷವನರಿಯದರು । ಪ್ರಾಜ್ಞತೆ । ಭೂಷಿತ ಬ್ರಾಹ್ಮಣರು ॥ 1 ॥ ವರಮಹ ಯಾಗದಲಿ । ವಿದ್ವತ್ । ಮೆರೆಸುವ ವಿಷಯದಲಿ ॥ ಸರಸದ ಮಾತುಗಳ । ಆಡುತ । ಸರಿದರು ದಾರಿಗಳ ॥ 2 ॥

## ಸೌರಾಷ್ಟ್ರ ತ್ರಿವುಡೆತಾಳ

ವರದೆ ದಾಕ್ಷಾಯಿಣಿಯು ಶಿಖರದಿ । ಸರಸದಿಂದಿರಲಂದು ಧರಣೀ । ಸುರರ ನೋಡುತ ಕರೆಸಿ ನುಡಿದಳು । ಹರುಷವೆರೆಸಿ ॥ 1 ॥

## ತೋಡಿ ರೂಪಕತಾಳ

ಶ್ರುತಿಯ ಸ್ಮೃತಿಯನರಿತ ಬ್ರಾಹ್ಮಣ । ಚತುರ ಮತಿಯ । ವಿತತಿಗೂಡಿ ಪೋಪಿರೀಕ್ಷಣ ॥ ಸತಿಯ ಸುತರ ಸೇರಿಕೊಂಡು । ಸ್ಥಿತಿಯ ಕುರಿತು ಸತತ ವಿಷಯ। ಮಥನ ಮಾಡುತಿಂತು ಪೊರಟ । ಕಥೆಯದೇನು ಪೇಳಿರೆನಗೆ ॥ 1 ॥

## ಶ್ರೀ ಏಕತಾಳ

ಯಾಗೋದ್ದೇಶಕೆ ನಾವೆಲ್ಲರು ಬಲು । ವೇಗದಿ ಪೊರಟಿಹೆವು ॥ ಯೋಗವ ಬಣ್ಣಿಪ ನಾಲಿಗೆ ಸೋಲ್ವುದು । ಬೀಗುವ ವಿಷಯವಿದು ॥ 1 ॥ ದಕ್ಷನು ಮಾಡುವ ಯಜ್ಞದ ವೈಭವ । ವೀಕ್ಷಿಪ ಕಾತರವು ॥ ಭಿಕ್ಷಕೆ ಲಕ್ಷ್ಯವೆ ಲಕ್ಷಕು ಮೀರಿದ । ದಕ್ಷಿಣೆ ದೊರೆಯುವುದು ॥ 2 ॥ ಪರಿಕಿಸಲವರ ಕುಮಾರಿಯು ನೀವಿರೆ । ಕರೆಯಿಲ್ಲವೆ ನಿಮಗೆ ॥ ಮರೆತಿರಬಹುದಾ ಕಾರಣ ಬನ್ನಿರಿ । ತೆರಳುವ ನಾವೀಗ ॥ 3 ॥ ಸತಿದೇವಿಯು ತಾ ಕೇಳುತಲೆಂದಳು । ಪೃಥುವಿ ಸುರರೆ ನಾನು ॥ ಅತಿ ಸಂತೋಷದ ಸಂಭ್ರಮದಿಂದಲಿ । ಪತಿಯ ಜತೆಗೆ ಬರುವೆ ॥ 4 ॥

### ಘಂಟಾರವ ರೂಪಕತಾಳ

ಪೃಥ್ವಿಯಮರರ । ನುಡಿಯ ಕೇಳುತ ॥ ನಿತ್ಯ ಮಂಗಲೆ । ನೋಯುತೆಂದಳು ॥ 1 ॥ ಅಮಮ ಚೋದ್ಯವು । ತವರು ಮನೆಯಲಿ ॥ ಅಮಿತ ಸಂಭ್ರಮ । ಯಜ್ಞಕಾರ್ಯವು ॥ 2 ॥ ಬಂಧು ಬಳಗವು । ಇಷ್ಟಮಿತ್ರರು ॥ ಬಂದು ಸೇರ್‍ವರು । ಹೊರತು ಯೆನ್ನನು ॥ 3 ॥ ಕರೆಯೆ ಮರೆತರೆ । ಕಾರ್ಯಭರದಲಿ ॥ ಅರಸಗರುಹುತ । ತೆರಳುವುದೆಸರಿ ॥ 4 ॥ ಮನದಿ ಯೋಚಿಸಿ । ಪತಿಯ ಪಾದಕೆ ॥ ವಿನಯ ಪೂರ್ವಕ । ಎರಗುತೆಂದಳು ॥ 5 ॥

### ಆರಭಿ ರೂಪಕತಾಳ (ಪೂರ್ವಿ ಅಷ್ಟತಾಳ)

ಜೀವಿತೇಶ ನೋಡಿ ಪೋಪ ವಿಪ್ರವರ್ಗವ । ನಿಮ್ಮ । ಮಾವ ಮಾಳ್ಪ ಯಾಗವಂತೆ ಆವಿನೋದವ ॥ ಸೋವ ತಿಳಿದು ತಾಳದೆನ್ನ ಮನವು ಪೋಗದೆ । ನಾನು । ನೀವು ಕೂಡಿ ತೆರಳುವಂಥ ಬಯಕೆ ಮೂಡಿದೆ ॥ 1 ॥

### ಸುರುಟಿ ಏಕತಾಳ

ಅಧಿಕೋತ್ಸಾಹವಿದು । ಉತ್ಸವ । ವಿದ ನೀ ಮರೆಯುವುದು ॥ ಚದುರೆ ನಿಮಂತ್ರಣ ವೊದಗದೆ ಪೋಪುದು । ಹೃದಯಾಂತರ್ಗತ ಮುದದ ವಿಚಾರವೆ ॥ 1 ॥

### ಮಧುಮಾಧವಿ ತ್ರಿವುಡೆತಾಳ

ಅರುಹದಿರ್ದರು ರಾಜನರಮನೆ । ಗುರುವು ರಮಣನ ಮನೆಗೆ ತವರಿಗೆ । ತೆರಳ ಬಹುದೆಂದಿರುವ ವಚನವು । ಅರಿಯದೇನೈ ನಿಮಗಿದು ॥ 1 ॥

### ಸಾಂಗತ್ಯ ರೂಪಕತಾಳ

ಅಕ್ಕತಂಗಿಯರೆಲ್ಲ ಸೊಬಗಿನೋಳ್ ಸೇರಿರೆ । ನಕ್ಕು ನಲಿಯುವಂಥ ಬಯಕೆ ॥ ಮಿಕ್ಕಿದ ಸಂಪದ ರಮಣನೊಳಿದ್ದರ್‍ಹೆ । ಮ್ಮಕ್ಕಳ್ಗೆ ತವರಾಸೆ ಸಹಜ ॥ 1 ॥

### ಸುರುಟಿ ಏಕತಾಳ

ಹಿಂದಿನ ಕಥೆಯನ್ನು । ಕೇಳ್ಸತಿ । ಅಂದಿನ ಪರಿಯನ್ನು ॥ ವೃಂದದ ಹಿರಿಮೆಯ ಚೆಂದದಿ ವಹಿಸಿರೆ । ಬಂದಿಹ ದಕ್ಷನ ಅಂದೆಣಿಸದಿರೇ ॥ 1 ॥

### ಖಮಾಚು ಏಕತಾಳ

ಏಳದಿರ್ದುದ ಕಂಡು ದಕ್ಷ ತಾ ಖತಿಗೊಂಡು । ಪೇಳಿದ ಬಿರು ಮಾತು ಕೇಳಿ ಸೈರಿಪುದೆಂತು ॥ ತಾಳಿ ದ್ವೇಷದಿ ಗೈವ ಯಾಗಕ್ಕೆ ಪರಿಭಾವ । ಕೇಳು ನಾ ಪೋಗೆನು ಗೊಡವೆಯ ಬಿಡು ನೀನು ॥ 1 ॥

### ಭಾಮಿನಿ

ಎಸೆವ ಯಜ್ಞವು ದೋಷಪೂರಿತ । ಉಸುರದಿರ್ದರು ಪೋದೆವಾದರೆ ।

ರಸಿಕನಲ್ಲದನೆದುರು ಕವಿತೆಯನುಸುರಿದಂತಹುದು ॥ ಬೆಸುಗೆಯಾಗದು ಯೆಮಗು ದಕ್ಷಗು । ಸುಷುಮೆ ಯಾಗ ವಿಚಾರ ಬಿಡೆನುತ । ತುಸು ಕಿನಿಸಿನಿಂ ನುಡಿಯೆ ಕಂಬನಿಗರೆದು ಸತಿಯಾಗ ॥ 1 ॥

## ಸಾರಂಗ ತ್ರಿವುಡೆತಾಳ

ಮೌನವಾಂತಿರೆ ರಮಣ । ತೊರೆದು ಕರುಣ । ಸ್ಥಾಣೂ ಪನ್ನಗ ಭೂಷಣ ॥ ಪ ॥ ಮೌನವಿದ ನಾನೆಂತು ಸಹಿಸಲಿ । ಸಾನುರಾಗದಿ ಬಂದು ಸೇರುವ । ನ್ಯೂನವಿಲ್ಲದ ಬಂಧು ಬಳಗವ । ಕಾಣ ಬೇಕೆಂಬಾಸೆ ಸಹಜವು ॥ ಅ.ಪ. ॥ ತಾಳದೆನ್ನಯ ಮನವು । ಇಂದಿದ್ದಲ್ಲಿ । ನಾಳೆ ಬಹೆನು ನಿಜವ ॥ ಆಲಯದಿ ಪಿತ ತಾನು ತನ್ನಯ । ಬಾಲೆಯಾದಳ ಮನ್ನಿಸದೆ ಬಿಡ । ಕಾಲಕಾಲನೆ ಪೋಗದುಳಿದರೆ । ಕೇಳದೆನ್ನಯ ಮನದ ನಿಜಸ್ಥಿತಿ ॥ 1 ॥

## ನಾದನಾಮಕ್ರಿಯೆ ಅಷ್ಟತಾಳ

ಮೌನ ಸಮ್ಮತಿಯೆನ್ನುತಾಗಲೆ । ಗೌರಿ । ತಾನೆ ಮನದಿ ನಿಶ್ಚೈಸುತ್ತಲೆ ॥ ಆನನವೆತ್ತಿ ಮುದ್ದಿಡುತಾಗ । ಈ । ತಾಣವ ಬಿಡುವೆನೆನ್ನುತ ಬೇಗ ॥ 1 ॥ ಪೀಠವಿಳಿದು ದ್ವಾರದೆಡೆ ಬಂದು । ನೋಡೆ । ನೋಟದ ನಿರ್ಲಿಪ್ತತೆಯ ಕಂಡು ॥ ದಾಟುವುದುಚಿತವಲ್ಲೆನುತಾಗ । ಮನ । ಮೀಟೆ ತಾ ತಿರುಗಿ ಮೂಲಕೆ ಬೇಗ ॥ 2 ॥ ತಾಯಿಯ ಕಾಣುವ ಕಾತರ । ನೀವು । ನೋಯದೆ ಕಳುಹೆನ್ನ ಶಂಕರ ॥ ಕಾಯವಲ್ಲಿದ್ದರೆನ್ನಯ ಮನ । ಇಲ್ಲಿ । ಸ್ಥಾಯಿಯಾಗಿರುವುದವಿಚ್ಛಿನ್ನ ॥ 3 ॥ ಬಾಗುತ ಪಾದಕೆ ವಂದಿಸಿ । ನಾನು । ಹೋಗುವೆನೆಂದಭವನರಸಿ ॥ ಯೋಗವ ನೆನೆದು ಚಿಂತಿಸುವಳು । ಹೇಗೆ । ಸಾಗುವೆನೆಂದು ಯೋಚಿಸುವಳು ॥ 4 ॥

## ಕಂದ

ಪ್ರೀಯನೊಲುಮೆಯಂ ಗಳಿಸಲು । ಆಯತದಳ ನೇತ್ರೆ ಸೋತು ಬಂಧು ನಿಚಯವಂ ॥ ಪ್ರೀಯದಿ ನೋಡುವೆನೆಂದು ನಿ । ಕಾಯವ ಬಿಟ್ಟಾಗ ಪೊರಟು ನಿಂದಳವಳು ತಾಂ ॥ 1 ॥ ಪುರಹರ ನೋಡುತ್ತಾಗಳ್ । ಕರೆದಂ ನಂದಿಪ್ರಮಥಾದ್ಯರಂ ಕಳುಹಿರ್ದಂ ॥ ಹರನಾಜ್ಞಾಪಿಸಲಾಕ್ಷಣ । ಹರಗಣ ಮಾತೆಯನು ಪೊರೆಯೆ ಪೊರಟಿತು ಬೇಗಂ ॥ 2 ॥

## ವೃಂದಾವನಸಾರಂಗ ಅಷ್ಟತಾಳ

ಕೇಳಿರಿ । ಮುಂಗಥೆ । ಕೇಳಿರಿ ॥ ಪ ॥ ನೀಲಕಂದರನ ಮಡದಿ ಪೋಪ ಬಗೆಯನು ॥ಅ.ಪ.॥ ಗೌರಿಯಾಕ್ಷಣ ನಡೆತಂದಳು । ಪಾಲಕಿ । ಯೇರುತ ಇನಿಯನ ನೆನೆವಳು ॥ ಜತೆ । ನೀರನಿಲ್ಲವು ನೋಯುತೆಂಬಳು । ಈ । ದಾರಿ ಸಾಗದಿದೇತಕೆಂಬಳು ॥ ಮನದಿ । ಹಿಗ್ಗುತ । ಬುದ್ಧಿಯಿಂ । ಕುಗ್ಗುತ ॥ ಭಾರಿ ಭಾರಿಗು ತಿರುತಿರುಗಿ ಕಾಂಬಳು ॥ ಬೇರೆ । ಬೇರೆ ಯೋಚನೆಯೋಳ್ ತೊಡಗುವಳು ॥ 1 ॥

## ಸೌರಾಷ್ಟ್ರ ತ್ರಿವುಡೆತಾಳ

ಸಾವಧಾನದೊಳೆಸಗುತಿರುವಾ । ಭಾವ ಚೋದಿತ ಮಂತ್ರತಂತ್ರವು । ಈವಿಧಾನದ ನೂತನಾಧ್ವರ । ಭೂ ವಲಯಕೆ ॥ 1 ॥ ಕಂಡು ಭಾವಕಿ ಕುಗ್ಗುತೆಂದಳು । ದಿಂಡನಾದನೆ ಪಿತನು ಮದದಲಿ । ಚಂಡ ಛಲದಾ ಯಜ್ಞ ರೀತಿಯ । ಕಂಡರಿವೆನೂ ॥ 2 ॥

## ಶ್ರೀ ಏಕತಾಳ

ಪೂರ್ವದಿ ಮಘವಾಗ್ನೇಯದೊಳಗ್ನಿಗೆ । ಗೀರ್ವಾಣರಿಗಲ್ಲಿ ॥ ಹೀರ್ವರೆ ಹವಿಗಳನಿತ್ತುದ ಕಂಡಳು । ಶರ್ವನ ಭಾಗವನು ॥ 1 ॥ ಈಶನಿಗೀಯುವ ಹವಿಗಳ ಭಾಗವ । ದ್ವೇಷದಿ ಕೊಡದಿಹರೆ ॥ ರೋಷಾವೇಷದೊಳೆಸಗಿದ ಕಾರ್ಯವು । ದೋಷ ಸನಾತನಕೆ ॥ 2 ॥

## ಜಂಜೂಟಿ ರೂಪಕತಾಳ

ಅರರೆ ಏನಿದೆನ್ನ ಪಿತ ವಿವೇಕ ಶೂನ್ಯನೆ । ಹರಗೆ ಹವಿಯ ನೀಡದಂತೆ ಯಾಗಗೈವನೆ ॥ ಹಿರಿಯರನ್ನು ನೋಳ್ಪ ಬಯಕೆಯಿಂದ ಬಂದೆನು । ಭರಿತ ಪ್ರೀತಿಯೊರತೆ ಕೊರತೆಯನ್ನು ಕಂಡೆನು ॥ 1 ॥ ಪತಿಯ ಮಾತ ಮೀರಿದುದಕೆ ಕ್ರಮ ವಿಹೀನದ । ಕ್ರತುವ ನೋಳ್ಪ ಶಿಕ್ಷೆಯಾಯ್ತು ಮರೆಯಲೇನದ ॥ ಪಿತನು ಮಾತೆ ದೇವ ವ್ರಾತ ತೊರೆದರಾದರ । ವ್ಯಥಿಸಲೇನು ಶಿವನವೈರ ನರಕಕಾಸರ ॥ 2 ॥

## ಕಾಂಬೋಧಿ ಝಂಪೆತಾಳ

ಭೃಗು ಭಗನೆ ಮುಂತಾದ ವಿಗಡ ಮುನಿ ನಿಕರ ಮೇಣ್ । ಅಗಡುತನದಿಂ ಸುರರು ನಗಲು ॥ ಬಗೆಯರಿತ ಸತಿದೇವಿ ನಗುತಿರುವ ಸಭೆನೋಡಿ । ತೆಗಳುತೆಂದಳು ಪಿತನ ಕುರಿತು ॥ 1 ॥

## ಭೈರವಿ ಏಕತಾಳ

ದುರ್ಮತಿ ದಕ್ಷನೆ ಕೇಳೂ । ತವ । ಕರ್ಮವನುಂಬೆಯ ತಾಳೂ ॥ ಧರ್ಮವ ನಿರ್ಲಕ್ಷಿಸಿದೆ । ಬಲು । ವರ್ಮವ ಸಂರಕ್ಷಿಸಿದೆ ॥ 1 ॥ ಕಾಲಾಂತಕನ ವಿರೋಧ । ಸರಿ । ಹೋಲಿಕೆ ಮೃತ್ಯು ವಿನೋದ ॥ ಬಾಲಿಶ ಬುದ್ಧಿಯ ಸುರರೆ । ಆ । ಶೂಲಿಯು ಶಿಕ್ಷಿಪನರರೆ ॥ 2 ॥ ತನುಜೆಯ ಶಂಕರಗಿತ್ತೆ । ಎಂ । ದೆನುತಲಿ ಜಂಭವ ಹೊತ್ತೆ ॥ ಘನ ಬೆಲೆಯನು ನೀ ತೆರುವೆ । ಈ । ತನುವನು ಕೊನೆಗಾಣಿಸುವೆ ॥ 3 ॥ ನೀ ಹಡೆದೀ ಕಾಯವಿದು । ಪತಿ । ನೋಹಿಗೆ ಮಲಿನತೆಯಹುದು ॥ ದೇಹದಿ ಶಿವಗುಪಚಾರ । ಕ್ರಮ । ಬಾಹಿರವಾದ ವಿಚಾರ ॥ 4 ॥ ಯೋಗದೊಳಗ್ನಿಯ ಸೃಜಿಸಿ । ಆ । ನಾಗಾಭರಣನ ನೆನೆಸಿ ॥ ವೇಗದಿ ದಹಿಸುತ ತನುವ । ತಾ । ಸಾಗಿದಳಾ ಶಿವಪದವ ॥ 5 ॥

## ಭಾಮಿನಿ

ಒಡತಿಯಾಹುತಿ ಕಂಡು ಪ್ರಮಥರು । ಒಡನೆ ಕೋಪದಿ ಯಾಗ ಮಂಡಪ । ಸುಡುಸುಡೆನುತಲಿ ಒಳಪ್ರವೇಶಿಸಿ ಧ್ವಂಸಗೈಯುತಿರೆ ॥ ಕೆಡುಕ ಕಂಡಾ ಭೃಗುಮುನೀಶ್ವರ । ತಡೆದು ದಿಗ್ಬಂಧನವ ವಿರಚಿಸೆ । ನಡುಗಿತಾ ಪ್ರಮಥಾದಿ ಹರಗಣ ಸ್ತಂಭಿಸುತ್ತಾಗ ॥ 1 ॥

## ಸಾಂಗತ್ಯ ರೂಪಕತಾಳ

ಪ್ರಾಯಶ್ಚಿತ್ತಾದಿ ಹೋಮವ ಗೊಂಡಾ ದಕ್ಷನು । ನೋಯದೆ ಯಾಗ ಕರ್ಮಗಳ ॥ ಆಯದಿ ಮುಂದುವರಿಸುತಿರೆ ನಾರದ । ತೋಯಜಾಕ್ಷನ ಮಿತ್ರನಿಂಗೆ ॥ 1 ॥ ಉಸುರುವೆನೆನ್ನುತ ಮಹದೇವ ಸಲಹೆಂದು । ವಿಷಕಂಠಗೊಂದಿಸುತ್ತಿರಲು ॥ ಶಶಿಧರ ಮನ್ನಿಸಿ ನಾರದಮುನಿಯನ್ನು । ಬೆಸಗೊಂಡ ತನ್ನಿರವಾಗ ॥ 2 ॥

## ಕೇದಾರಗೌಳ ಝಂಪೆತಾಳ

ಮುನಿಪ ನಾರದನೆ ಕೇಳು । ಎನ್ನರಸಿ । ಜನಕನಲ್ಲಿಗೆ ಪೋದಳು ॥ ತನುಜೆಯನು ಮನ್ನಿಸಿದನೆ । ತೊರೆದನೇಂ । ಅನುವ ನೀ ತಿಳಿದರುಹೆನೆ ॥ 1 ॥ ದೇವ ದೇವನೆ ತಿಳಿಯೆಯಾ । ನಿನ್ನ ಸತಿ । ದೇವಿ ಗೈದಿಹ ಕಾರಿಯ ॥ ಕೋವಿದೆಯ ಮನ್ನಿಸದಿರೆ । ತನುವನ್ನು । ಪಾವಕಗೆ ಅರ್ಪಿಸುತಿರೆ ॥ 2 ॥

## ಸೌರಾಷ್ಟ್ರ ತ್ರಿವುಡೆತಾಳ

ನಾರದಾಂಕನು ಪೇಳ್ದ ಮಾತನು । ಗೌರಿಕಾಂತನು ಕೇಳುತಾಕ್ಷಣ । ಭಾರಿ ಕ್ರೋಧವ ತಾಳಿ ಹಳಿದನು । ಕ್ರೂರತನವ ॥ 1 ॥ ಪ್ರಳಯವಾಗಲಿ ಬಿಡೆನು ವಿಶ್ವವ । ಕಲಹ ಕಾರಣ ಗುಣ ಸ್ವಭಾವದ । ಕಲುಷ ಮನದಾ ವ್ಯಕ್ತಿನಿಷ್ಠುರ । ತುಳಿವೆನೀಗ ॥ 2 ॥ ಜಲಜಸಂಭವ ಸುರಪ ಮುಖ್ಯರು । ನಿಲುತ ದಕ್ಷನ ಯಾಗ ಕಾರ್ಯಕೆ । ಮಲೆತು ಸಹಕಾರವನು ಕೊಟ್ಟರು । ಬಲಿತ ಮದದಿ ॥ 3 ॥ ದಂಡಿಸದೆ ಬಿಡೆನೆನುತ ತನ್ನಯ । ಮಂಡೆ ತುಡುಕುತ ಜಟೆಯ ಬಡಿಯಲು । ಕಂಡು ಕೇಳರಿಯದಿಹನುದಿಸಿದ । ಗಂಡುಗಲಿಯು ॥ 4 ॥ ಹುಟ್ಟಿದನು ಭೀಕರದ ದೇಹದಿ । ಸಿಟ್ಟು ಮೂರ್ತೀ ಭವಿಸಿದಂತೆಯೆ । ಅಟ್ಟಹಾಸದಿ ಕಂಗೊಳಿಸಿದನು । ಥಟ್ಟನಲ್ಲಿ ॥ 5 ॥

## ಮಾರವಿ ಏಕತಾಳ

ಸೃಷ್ಟಿಯೊಳೆನ್ನನು ಸೃಷ್ಟಿಸಿದೇತಕೆ । ಸೃಷ್ಟೀಶನೆ ಪೇಳು ॥ ಕೊಟ್ಟಪ ಕಾರ್ಯವ ಥಟ್ಟನೆ ಮಾಡಲು । ತೊಟ್ಟಪೆ ದೀಕ್ಷೆಯನು ॥ 1 ॥

## ಕೇದಾರಗೌಳ ಝಂಪೆತಾಳ

ಮುದ್ದು ಕಂದನೆ ಬಾರೆಲೊ । ಸಂಕ್ಲೇಶ । ಸುದ್ದಿಯನು ನೀ ಕೇಳೆಲೊ ॥ ಶುದ್ಧ ಮೂರ್ಖನು ದಕ್ಷನು । ಧರ್ಮ ವಿ । ರುದ್ಧ ಕಾರ್ಯವ ಗೈದನು ॥ 1 ॥ ಬಿಡು ಜನಕ

ಯೋಚನೆಯನು । ದಕ್ಷನೇನ್ । ಕಡುಗಲಿಯು ತಿಳಕೊಂಬೆನು ॥ ತಡೆಯದೇ ಸಹಕಾರವ । ಕೊಟ್ಟವರ । ಬಡಿದಪೆನು ನಡು ಹಾಯ್ವರ ॥ 2 ॥

## ಸೌರಾಷ್ಟ್ರ ತ್ರಿವುಡೆತಾಳ

ಅರಿ ಭಯಂಕರ ವೀರಭದ್ರನೆ । ತರಿಯೊ ಧರ್ಮ ವಿರೋಧಿ ಮೊತ್ತವ । ಜರಿಯೊ ಸೊಕ್ಕಿನ ಸುರಪ ಮುಖ್ಯಾ । ಮರರ ಬಿಡದೆ ॥ 1 ॥

## ತೋಡಿ ತ್ರಿವುಡೆತಾಳ

ಈಶನಾಜ್ಞೆಯ ಶಿರದಿ ಪೊತ್ತಾ । ಭೀಷಣಾಕೃತಿ ವೀರಭದ್ರನು । ದೋಷರಹಿತನ ಪದಕೆ ವಂದಿಸುತ ॥ ನಾಶ ಕಾಲದ ಪರಮಶಿವನಾ । ವೇಶದಿಂ ಗುಡುಗುಡಿಸಿ ಭುವಿಯಾ । ಕಾಶ ಸೇರಿಸುವಂತೆ ಪೊರಮಟ್ಟ ॥ 1 ॥ ಯಾಗ ಶಾಲೆಯೊಳಗೆ ಕುಳಿತ ಶತ । ಯಾಗ ಮುಖ್ಯರು ನೋಡಿ ಗಜರುತ । ತಾಗಿ ತಡೆದರು ವೀರಭದ್ರನನು ॥ ಆಗ ಮಾರುತ ಸಮರಗೈಯಲು । ಸಾಗದಾಗಿ ಕುಬೇರ ಸೋತಿರೆ । ತೂಗುತಾಯುಧವಗ್ನಿ ತಡೆದೆಂದ ॥ 2 ॥

## ಮಾರವಿ ಏಕತಾಳ

ಅಮಮ ಪವಿತ್ರದ ಅಧ್ವರಶಾಲೆಯ । ಸಮರಾಂಗಣ ಗೈದೆ ॥ ಭ್ರಮೆಯನು ತೊಲಗಿಪೆನೆನುತಲಿ ಬಾಣವ । ಕ್ರಮಶಃ ತೆಗೆದೆಚ್ಚ ॥ 1 ॥ ಮಾತುಗಳೇತಕೊ ವಿಭ್ರಮೆ ತುಂಬಿದೆ । ಜಾತವೇದ ನಿನಗೆ ॥ ಭೂತ ಪತಿಯ ಹೊರತಾಗಿಹ ಯಜ್ಞವ । ಘಾತಿಪೆನೀಕ್ಷಣದಿ ॥ 2 ॥ ಉರಿಯುಗುಳುತ ಸಪ್ತಾರ್ಚಿಯು ಭದ್ರನ । ಶಿರಕೆರಗಿದನಾಗ ॥ ತರಳನ ಹೂಂಕಾರಕೆ ಬೆದರಿದನಲ । ಸರಿದರೆ ಸುರಪಾಲ ॥ 3 ॥

## ಕಲ್ಯಾಣಿ ಮಟ್ಟೆತಾಳ

ಬಿಟ್ಟ ಮಂಡೆ ಭೀಕರಾಕೃತಿ । ಕೆಂಗಣ್ಣು ಕೋರೆ । ಸಿಟ್ಟು ಸೆಡವು ರೌದ್ರಮೂರುತಿ ॥ ಧೃಷ್ಟ ದೇಹದಿಂದ ಕೂಡಿ । ನಷ್ಟಗೈವೆ ಯಾಗಗಳನು । ಕಷ್ಟಕೊಡುವೆ ಸಾಧು ಮುನಿಗಳ । ಹಿಂಸಿಸುವ ಧೈರ್ಯ । ಕೊಟ್ಟ ಮಹಿಮನಾರು ಪೇಳೆಲಾ ॥ ಶೌರ್ಯಾಧಿಪತಿ ನಾ । ಕುಟ್ಟಿ ಕಳೆವೆ ನಿನ್ನ ತಿಳಿಯೆಲಾ ॥ 1 ॥ ಈಶನಿಂಗೆ ಹವಿಯ ನೀಡದೆ । ಆಕ್ರೋಶದಿಂದ । ದೋಷಪೂರ್ಣ ಯಾಗ ಗೈವುದೆ ॥ ದ್ವೇಷವಾಂತ ಕಾರ್ಯವನ್ನು । ಹೇಸದಂತೆ ಗೈದುದಕ್ಕೆ । ನೀ ಸಹಾಯಮಾಳ್ಪುದೀತೆರ । ಅಪರಾಧಿಗಳನು । ಘಾಸಿಮಾಡಲೆಂದು ಶಂಕರ । ಜಟೆಯಿಂದಲೆನ್ನ । ಲೇಸಿನಿಂದ ಪಡೆದ ಶುಭಕರ ॥ 2 ॥

## ಭೈರವಿ ಏಕತಾಳ

ಮಂತ್ರಾಧೀನತೆ ಯೆಮಗೆ । ಸ್ವಾ । ತಂತ್ರ್ಯ ನಕಾರದ ಬಗೆಗೆ ॥ ತಂತ್ರ ತಿಳಿಯೆ ಮತಿಹೀನ । ಅನಿ । ಯಂತ್ರಿತ ನಡೆವುದು ಸವನ ॥ 1 ॥ ಹಿಡಿತ ರಹಿತನೆನ್ನುವೆಯ । ಆ । ಮೃಡನೊಡಲುರಿಯರಿತಿಹೆಯಾ ॥ ಕೆಡುಗಾಲವು ನಿಜ ನಿನಗೆ । ಮದ । ವಡರುತ ನುಡಿಯುವೆ ಹೀಗೆ ॥ 2 ॥

## ನಾದನಾಮಕ್ರಿಯೆ ಅಷ್ಟತಾಳ

ಜಯದಾಸೆ ತೊಲಗೆ ಸ್ವರ್ಗಾಧಿಪ । ನಯವಿ । ನಯದಿ ಪಲಾಯನ ಗೈದಿಪ್ಪ ॥ ಭಯದಿಂದೋಡುವ ಮೌನಿ ವರ್ಗವ । ಶಿವ ತ । ನಯ ಬೆನ್ನಟ್ಟುತ ಹಿಂಸೆ ನೀಡುವ ॥ 1 ॥

## ಭಾಮಿನಿ

ಭೃಗು ಮುನಿಯ ಕಂಗಳನು ಕಿತ್ತನು । ಭಗನ ಹಲ್ಲುಗಳನ್ನು ಕಳಚಿದ । ವಿಗಡರಿವರೆಂದಾ ಮುನಿ ವಿತತಿಯಂ ಪ್ರವೇಶಿಸಿದ ॥ ಅಗಡುಗಳನೆಳೆದಾಡಿ ಹಿಂಸಿಸಿ । ಬಗೆಬಗೆಯ ಸೋಪಸ್ಕರವ ತಿಂ । ದಗಿಯು ತಿರಲಾ ದಕ್ಷ ಕಂಡದ ಗರ್ಜಿಸುತಲೆಂದ ॥ 1 ॥

## ಘಂಟಾರವ ಅಷ್ಟತಾಳ

ನಿಲ್ಲು ಮೂರ್ಖನೆ ಘನತರ ಯಾಗವ । ಭಿಲ್ಲನಂದದಿ ನಾಶಗೈವೆಯ । ಖುಲ್ಲ ನಿನ್ನನು ಶಿಕ್ಷಿಪೆ ॥ 1 ॥ ಎಲವೋ ದಕ್ಷ ನಿರೀಶ್ವರ ಯಾಗವ । ಛಲದಿ ಮಾಳ್ಪೆಯ ಆದ್ಯ ಧರ್ಮಕೆ । ಕಲುಷ ಕಾರಣ ಕಾರ್ಯವು ॥ 2 ॥ ನೀತಿ ಪೇಳ್ವೆಯ ಧರ್ಮ ಸನಾಶತನ ॥ ಮಾತ ತಿಳಿದೂ ಮೌನಿ ವರ್ಗವ । ಘಾತಿಸಿರ್ಪುದು ಯೇತಕೋ ॥ 3 ॥

## ಮಾರವಿ ಏಕತಾಳ

ಶಿವನ ವಿರೋಧದ ಕಾರ್ಯಕೆ ಸಹಕಾ । ರವನಿತ್ತವರನ್ನೂ ॥ ಸವರಿಪ ದೀಕ್ಷೆಯ ತೊಟ್ಟಿಹೆ ನಾ ಕೈ । ತವ ನಡೆಯದು ಕೇಳೂ ॥ 1 ॥ ಸರಿಪೂರ್ಣಾಹುತಿ ಕಾಲಕೆ ಬಂದಿಹೆ । ಉರಿಯುವ ಪಾವಕಗೆ ॥ ಗರುವಿಯೆ ಈ ಕರವಾಳದಿ ನಿನ್ನಯ । ಶಿರ ಕಡಿದರ್ಪಿಸುವೆ ॥ 2 ॥

## ಕಂದ

ಜಗವೀವರೆಗಂ ಅರಿಯದ । ಬಗೆಯ ಸಮರ ಸಂಘಟನೆಯು ಮೇಲಾಗುತಿರಲ್ ॥ ಅಘಮರ್ಷಣನ ಮಗನು ತಾಂ । ಮೊಗದಿರುವಿರುವಾ ಗರುವಿತ ದಕ್ಷನ ಶಿರವಂ ॥ 1 ॥

## ದ್ವಿಪದಿ

ಕತ್ತರಿಸಿ ಹೋಮಿಸಿದ ಯಜ್ಞಕುಂಡದಲಿ । ಬತ್ತದುತ್ಸಾಹದಿಂ ನಲಿದ ತೋಷದಲಿ ॥ 1 ॥ ಆಜ್ಞಾಪಿಸಿದ ಕಾರ್ಯ ಪೂರೈಸಿ ಪೊರಟ । ಸುಜ್ಞಾನಿ ನೆಲೆಸಿರುವ ಕೈಲಾಸಕೆನುತ ॥ 2 ॥ ಪುರುಹೂತ ಸೇರಿಸುತ ದೇವರ್ಕಳನ್ನು ॥ ಅರುಹಿದನು ವ್ಯಥಿಸುತ್ತ ಸಂಗತಿಗಳನ್ನು ॥ 3 ॥

## ಸಾಗತ್ಯ ರೂಪಕತಾಳ

ನೋಡಿದಿರೇಂ ತ್ರಿದಶರೆ ವೀರ ಭದ್ರನು । ಮಾಡಿದವಾಂತರಗಳನು ॥ ಬೇಡ ಬೇರೆಯ ಚಿಂತೆ ಸರಸಿಜಭವನೊಳು । ತೋಡಿಕೊಂಬುದು ಏಳಿರೆನುತ ॥ 1 ॥ಸತ್ಯಲೋಕಕೆ ಬಂದು ಬ್ರಹ್ಮನ ಪದವನ್ನು । ಅರ್ತಿಯೋಳ್ ಸ್ತುತಿಸುತ್ತಲೆರಗೆ ॥ ಉತ್ತಮನವರನ್ನು ಮನ್ನಿಸುತಾಕ್ಷಣ । ಎತ್ತಿ ನುಡಿಸಿದನು ದಯದಿ ॥ 1 ॥

### ಸೌರಾಷ್ಟ್ರ ತ್ರಿವುಡೆತಾಳ

ಏನಿದೇನೈ ಸುರಪತಿಯೆ ನಿ । ನ್ನಾನನದೊಳಾತಂಕ ತುಂಬಿದೆ । ಶೋಣಿತವು ಹರಿವುತಿದೆ ದೇಹದಿ । ಮಾಣದುಸಿರು ॥ 1 ॥ ರಕ್ಷಿಸೆಮ್ಮನು ಸಾರಸೋದ್ಭವ । ತ್ರ್ಯಕ್ಷನಿಂಗೆ ಹವಿಸ್ಸ ನೀಡದೆ । ದಕ್ಷ ಮಖ ಗೈದಿರಲು ಬಂದಾ । ದಕ್ಷ ಸುತೆಯ ॥ 2 ॥ ಮನ್ನಿಸದಿರಲು ಕಂಡು ಕ್ರೋಧದಿ । ತನ್ನೊಡಲ ಯೋಗಾಗ್ನಿಗರ್ಪಿಸೆ । ಮುನ್ನ ಮೃಢನಿದ ತಿಳಿವುತಾಕ್ಷಣ । ಸನ್ನುತಾಂಗ ॥ 3 ॥ ಸಿಟ್ಟಿನಿಂ ಜಟೆ ಬಡಿಯೆ ಹುಟ್ಟಿದ । ಗಟ್ಟಿ ದೇಹದ ವೀರಭದ್ರನು । ಕಟ್ಟಳವಿಯೊಳಗೆಮ್ಮ ವರ್ಗವ । ಕುಟ್ಟಿ ಕಳೆದ ॥ 4 ॥ ಹಾನಿ ಗೈದನು ಯಜ್ಞಶಾಲೆಯ । ಮೌನಿಗಳ ಹಿಂಸಿಸುತ ದಕ್ಷನ । ಗೋಣಿ ಕೊಯ್ದತಿ ಹೋಮಿಸಿದನಾ । ತಾಣದಲ್ಲಿ ॥ 5 ॥ ಮುಂದೆ ಮಾರ್ಗವು ಕಾಣದಂತಿದೆ । ಅಂಧಕಾರವು ತೊಲಗುವಂದದಿ । ಕುಂದನಳಿಸುತ ಕಾಯ ಬೇಕೈ । ಇಂದು ನೀವು ॥ 6 ॥

### ಭಾಮಿನಿ

ಅಕಟಕಟ ನೀವಿಂದು ಸರ್ವಾ । ತ್ಮಕನೊಳಗೆ ಹಗೆತನವ ಸಾಧಿಸಿ । ಮಖವ ಗೈದಿರೆ ಮಕ್ಕಳಾಟಿಕೆಯಾಯ್ತು ಹಾಳಾಯ್ತು ॥ ಭಕುತ ಪ್ರೇಮಿಯ ಆಳವರಿಯುವ । ಶಕುತಿ ನಿಮಗೆಲ್ಲಿಹುದು ತಿಳಿಯಿರಿ । ಸಕಲವನು ಕಮಲಾಕ್ಷ ಬಲ್ಲನು ಅರಿವಿರುವುದೆನಗೆ ॥ 1 ॥

### ಕಾಂಬೋಧಿ ಝಂಪೆತಾಳ

ಹಲುಬಿದರೆ ಏನಹುದು ಸವನ ಸಂಪೂರ್ಣವಹ । ಕೆಲಸವನು ಕೈಗೊಳ್ಳ ಬೇಕು ॥ ಛಲದೊಳಿಹ ಶಿವನುಗ್ರ ಕ್ರೋಧವನು ತಣಿಸಲಿಕೆ । ತಳುವದೈದುವ ರಜತ ಗಿರಿಗೆ ॥ 1 ॥ ಜಯತು ಜಗದೀಶ ಜಯ ಭಕ್ತ ವತ್ಸಲ ಶಂಭು । ಜಯ ದಿಗಂಬರ ನೀಲಕಂಠ ॥ ಲಯಕರ್ತೃ ಪುರಹರನೆ ಕ್ರೋಧವನು ತ್ಯಜಿಸುತ್ತ । ದಯೆ ದೋರಿ ರಕ್ಷಿಸೆಮ್ಮನ್ನು ॥ 2 ॥ ಕ್ರೋಧವನು ಬೆಳೆಸುವಾ ಧ್ಯೇಯಂಗಳೆನಗಿಲ್ಲ । ಬಾಧಿಸಿತು ಬೇಧವೆಣಿಸಿದರ॥ ಆದುದನು ಬಿಡಿರಲ್ಲಿ । ಮೊದಲಿದ್ದ ತೆರನಂತೆ । ಗೈದಪುದು ತೆರಳಿರೆಂದಾಗ ॥ 3 ॥ ಕಂಜಭವ ಸುರಪ ಮುಖ್ಯಾಮರರು ಸದ್ಭಕ್ತ । ಸಂಜೀವರೊಂದಾಗಿ ಬಂದು ॥ ಜಂಜಡದ ಯಾಗಶಾಲೆಯೊಳಾಗ ಸತ್ತವರ । ವ್ಯಂಜಿತದಿ ಬದುಕಿಸಲ್ಕೆಂದು ॥ 4 ॥ ಜಾತವೇದನಿಗರ್ಪಿಸಿದ ದಕ್ಷ ಶಿರವದಕೆ । ಆತನನು ಬದುಕಿಸಲು ಅಜದ ॥ ಆ ತಲೆಯ ಕತ್ತರಿಸಿ ಸೇರಿಸಲು ಸುರಪ ಖ । ದ್ಯೋತಸುತರನ್ನು ಕರೆದೆಂದ ॥ 5 ॥ ಸುಮ್ಮನಿಹಿರೇಕೆಂಬುದೆನಗರ್ಥವಾಯ್ತು ಮನ । ದುಮ್ಮಳಿಕೆ ಬಿಡಿರಯ್ಯ ನೀವು ॥ ಎಮ್ಮಸಮ ಹವಿಗಳನು ನಾನಿಮಗೆ ಕೊಡಿಸುವೆನು । ನೆಮ್ಮಿಕೊಳ್ಳಿರಿ ದಿಟದ ನುಡಿಯ ॥ 6 ॥

### ಸುರುಟಿ ಏಕತಾಳ

ನುಡಿ ಬದ್ಧತೆ ನಿನಗೆ। ವೃತ್ತಿಯ । ಗಡಿ ಶುದ್ಧತೆ ಯೆಮಗೆ ॥ ಬಿಡು ನೀ ಚಿಂತೆಯ

। ತೊಡಕನು ತೊಲಗಿಸಿ ॥ ಕಡಿದೀ ಕಂಠವ । ದೃಢದಲಿ ಬೆಸೆವೆವು ॥ 1 ॥

### ಕೇದಾರಗೌಳ ಅಷ್ಟತಾಳ

ಆಡಿನ ರುಂಡವ ದಕ್ಷನ ಮುಂಡಕ್ಕೆ । ಜೋಡಿಸಿ ಭೃಗು ಮುನಿಯ ॥ ಕಾಡಿಪ ಕಂಗಳ ನೋವ ನಿವಾರಿಪ । ಗಾಢ ಚಿಕಿತ್ಸೆಯನು ॥ 1 ॥

### ಶಂಕರಾಭರಣ ಏಕತಾಳ

ಚೆಲ್ವ ಭಗನ ಭಗ್ನಗೊಂಡ । ಹಲ್ಲುಗಳಿಗೆ ವಿಶ್ವಕೆಲ್ಲ । ದುರ್ಲಭದ ಚಿಕಿತ್ಸೆ ಗೈದ । ರಲ್ಲಿ ತೋಷದಿ ॥ 1 ॥ (ಜಗಕೆ ನವ್ಯವಹ ಚಿಕಿತ್ಸೆ । ನಗುತ ಗೈದರಾಗ ಮೌನಿ । ಭಗನ ಮುರಿದ ಹಲ್ಲುಗಳ್ಗೆ । ಸೊಗಸಿನಿಂದಲಿ ॥) ಕ್ಲೇಶಗೊಂಡರಿಂಗೆ ತಕ್ಕ । ಔಷಧೋಪಚಾರಗಳನು । ತೋಷದಿಂದಲೆಸಗುತಿಹರು । ಏಸು ಪ್ರೇಮವೊ ॥ 2 ॥ ಅನಿತರೊಳಗೆ ನಾರಾಯಣನು । ವಿನತೆಸುತನ ಹೆಗಲನೇರಿ । ಘನ ಶುಭಾಂತ ಬಯಸಿ ಬಂದ । ಚಿನುಮಯಾತ್ಮಕ ॥ 3 ॥ ಶರಣೆನುತ್ತ ಕೈಯ ಮುಗಿದು । ಎರಗಿ ನಿಂದ ಸರ್ವರನ್ನು । ಕರುಣನಿಧಿಯು ಮನ್ನಿಸಿದನು । ಹರುಷದಿಂದಲಿ ॥ 4 ॥

### ಭೋಗ ಷಟ್ಪದಿ

ಸುಮತಿಯಾಗಿ ದಕ್ಷನೆದ್ದು । ವಿಮಲ ಹೃದಯ ಭಾವದಿಂದ । ಪ್ರಮಥ ಪತಿಯ ಸ್ತವನ ಗೈದ । ಚಮೆಯ ನಾಮದಿ ॥ ದ್ಯುಮಣಿಸುತರ ವೈದ್ಯ ಕ್ರಮಕೆ । ಕಮಲಜಾತ ಕಮಲನೇತ್ರ । ಢಮರುಧರರು ಪೊಗಳುತೈದರಮಿತ ಹರ್ಷದಿ ॥ 1 ॥

### ಮಧುಮಾಧವಿ ತ್ರಿವುಡೆತಾಳ

ಪೊಗಳುತೈದಿದ ದೇವತೆಯರನು । ನಗುತ ಬೀಳ್ಗೊಂಡಾ ತರಣಿಜರು । ಗಗನ ಮಾರ್ಗವ ಪಿಡಿದು ಪೊರಟರು । ಜಗವನೀಕ್ಷಿಪ ಧ್ಯೇಯದಿ ॥ 1 ॥

## ಹವಿರ್ಮಾನ್ಯತೆ (ಸತಿ ಸುಕನ್ಯಾ)

### ಆರ್ಯಸವಾಯಿ ಏಕತಾಳ

ದೊರೆ ಶರ್ಯಾತಿಯ ತರಳೆ ಸುಕನ್ಯೆಯು । ಎರಗುತ ತನ್ನಿನಿಯನ ಪದಕೆ ॥ ಸರಸಿಯೊಳಿಳಿಸುತ ವಿರಚಿಸಿ ಸ್ನಾನವ । ಕರೆ ತಂದಿಹೆ ನಿಮ್ಮನು ಗೃಹಕೆ ॥ 1 ॥ ಸ್ವಚ್ಛಾಂಗಿಯೆ ನಿನ್ನಿಚ್ಛಾ ಶಕ್ತಿಯ । ಮೆಚ್ಚದ ಮನವೆಂದಿಗು ಬರದು ॥ ನೆಚ್ಚಿದರನು ತೊರೆದಚ್ಚರಿದೋರಿದ । ನಿಚ್ಚಟ ತ್ಯಾಗಿಯು ನೀನಹುದು ॥ 2 ॥

(ಬೇಗಡೆ ಏಕತಾಳ : ಸತಿಯರೊಳು ನಿನ್ನಸರಿ ಯಾರಿಹರೆ । ನಿರ್ವ್ಯಾಜ ತ್ಯಾಗಕೆ । ಪ್ರತಿಮೆಯಹುದೆಲೆ ಜಾಣೆ ಗಂಭೀರೆ ॥ ಕ್ಷಿತಿ ಪತಿಯ ಸುತೆಯಾಗಿ ನಿನ್ನಯ । ಹಿತವಲಕ್ಷಿಸಿ ಹೆರವರೊಳಿತಿಗೆ । ಸತತ ನಿರ್ಮಲ ಹೃದಯ ಭಾವದಿ । ಪತಿಯ ಸೇವೆಯ ಮಾಳ್ಪೆ ನಿಶ್ಚಯ ॥ 1 ॥)

## ಕಾಂಬೋಧಿ ಏಕತಾಳ

ವಲ್ಲಭ ಕೇಳಿಷ್ಟು ಕಾರ್ಯಕೆನ್ನ ಪೊಗಳಲೇಕೆ । ಎಲ್ಲ ನಿಮ್ಮಆಶೀರ್ವಾದ ಕಲ್ಯಾಣಾಂಗ ನಿಜಕೆ ॥ 1 ॥ ನದಿಗೆ ಪೋಗಿ ನಿತ್ಯಾನುಷ್ಠಾನಂಗಳಿಗೆ ಬೇಗ । ಒದಗಿ ಶುದ್ಧೋದಕವ ತಹೆನೆಂದು ಸತಿಯಾಗ ॥ 2 ॥

## ಶ್ರೀ ಏಕತಾಳ

ಚೆಂದದೊಳನುಮತಿ ಪಡೆದು ಸುಕನ್ಯೆಯು । ಬಂದಳು ಜಲದೆಡೆಗೆ ॥ ಮಿಂದು ಸಲಿಲ ಸಹಿತಲೆ ಮುನ್ನಡೆದಳು । ಮಂದಿರಕೆನುತಾಗ ॥ 1 ॥ ಸ್ವೇಚ್ಛಾಚಾರದೊಳಶ್ವಿನಿ ಕುವರರು । ಉಚ್ಚವಿಹಾರದಲಿ ॥ ಚಚ್ಚರಿಸುತ ನಡೆತರಲಾಕೆಯ ಕಂ । ಡಚ್ಚರಿ ಗೊಳುತಾಗ ॥ 2 ॥

## ಯಮನ್ ಕಲ್ಯಾಣಿ ಅಷ್ಟತಾಳ

ಅಮಮ ಯಾರಿವಳು ಮೋಹಿನಿ ಚೆಲುವೆ । ಎಮ್ಮ । ಸುಮನ ಸೂರೆಯ ಪೇಳಲೇನಳವೆ ॥ ಪ ॥

ರತಿಯ ಮೀರಿದ ಸೌಂದರ್ಯದ ಪ್ರತಿಮೆ । ಸರ್ವ । ಸತಿಯರೋಳ್ ವರಶಿಖಾ ಮಣಿಯುಪಮೆ ॥ ಲತೆಯ ನಾಚಿಸುವ ಥಳಕು ಬಳಕು । ಹಂಸ । ಗತಿಯ ವರ್ಣಿಪುದೇನು ಮನಸೆಳಕು ॥ 1 ॥ ಶೋಭೆಯೋಳ್ ಪ್ರತ್ಯಕ್ಷ ವೀಣಾಪಾಣಿ । ಇನ್ನು । ಸೌಭಾಗ್ಯದೊಳು ನಾರಾಯಣನ ರಾಣಿ ॥ ಶೋಭನೆ ಗಿರಿಜಾತೆಯಂತಿಹಳು । ನಿಜನಿ । ರಾಭರಣದಲಿ ಕಂಗೊಳಿಸುವಳು ॥ 2 ॥

## ಕಂದ

ಆಹಾ ಚಿತ್ತಾಕರ್ಷಕ । ಮೋಹನೆಯಿವಳಂಗ ಸೌಷ್ಠವವಿದನ್ಯತ್ರಂ ॥ ಊಹಿಸಲಸಾಧ್ಯ ಮನದ ಕು । ತೂಹಲ ತಣಿಸಲ್ಕೆ ಹಿತದಿ ನುಡಿಸುವೆವೆಂದಂ ॥ 1 ॥

## ಮೋಹನ ಏಕತಾಳ

ತರುಣಿ । ಹೃನ್ಮನ ಮೋಹಿನಿ ಶುಭ ರಮಣಿ ॥ ಸರಸಿಜ ಮುಖಿ ನೀ । ವರಿಸೆಮ್ಮನು ಪರಿ । ಪರಿ ಭಾಗ್ಯವ ನಾವ್ । ಕರುಣಿಪೆವೀಗಲೆ ॥ 1 ॥ ಚದುರೆ । ಮದಗಜಗಾಮಿನಿ ನವ ಮಧುರೆ ॥ ಮುದದಿಂದೀ ಮನ । ಕೊದಗುತ ಬೇಗನೆ ॥ ಸದಭಿಪ್ರಾಯದಿ । ಮದುವೆಯ ಮಾಡಿಕೊ ॥ 2 ॥

## ಶಂಕರಾಭರಣ ಏಕತಾಳ

ಏತಕಿಂತು ಪಾತಕದಲಿ । ಮಾತ ಪೇಳ್ವಿರಣ್ಣಗಳಿರ ॥ ಪ್ರೀತಿಯಿಂದೋರ್ವೋರ್ವಳಿಂಗೆ । ನಾಥರಾಗಿರಿ ॥ 1 ॥

### ಗೌಳ ಆದಿತಾಳ

ಕೀರವಾಣಿಯೆ ಬಾರೆ ಸುಭಗೆ ಶೃಂಗಾರೆ । ತೋರದೆ ಕೋಪವ ಮನ್ನಿಸುತ್ಸಾಹವ ॥ಪ॥ ತಪನ ಬಾಲರು ನಾವು ನೀ ಪದುಮದ ಹೂವು । ವಿಪುಲ ಮಾತುಗಳೇಕೆ ಸಫಲಗೊಂಬುದಕೆ ॥ 1 ॥

### ಶಂಕರಾಭರಣ ಏಕತಾಳ

ಸಭ್ಯತೆಯನು ಮೀರುತೀಗ । ಇಬ್ಬರೊಬ್ಬಳನ್ನು ಬಯಸಿ । ಕುಬ್ಜರಾಹಿರಯ್ಯ ನೀವು । ಕೊಬ್ಬಿನಿಂದಲಿ ॥ 1 ॥

### ಗೌಳ ಆದಿತಾಳ

ಅವಳಿಗಳೆಮ್ಮೊಳು ಕವಲೆಣಿಸದೆ ತಾಳು । ಅವಿರತ ಸುವಿಲಾಸ ದಿವಿಯೊಳು ವಾಸ ॥ 1 ॥

ಬದಲು ಯೋಚನೆ ಬೇಡ ಮದುವೆಯಾಗೌ ಗಾಢ । ಕದಲದ ಸಂಪದ ವೊದಗಿತ್ತಪೆವದ ॥ 2 ॥

### ನಾಟಿ ತ್ರಿವುಡೆತಾಳ

ಹೇಸದಂದದಿ ಪರ ವನಿತೆಯನು । ಆಸೆ ಪಡುವುದು ನೀತಿಯೆ ॥ ಆಸನಾತನ ಧರ್ಮ ಕ್ರಮಗಳಿ । ಗೇಸು ಹಾನಿಯು ತಿಳಿಯಿರಿ ॥ ನೀವ್ ತೆರಳಿರಿ ॥ 1 ॥

### ಮಾರವಿ ಏಕತಾಳ

ಸೋತಿಹೆವೆಂದರೆ ನೀತಿಯ ಪೇಳ್ವೆಯ । ಓ ತರುಣಿಯೆ ನಿನ್ನ ॥ ಖಾತಿಯೊಳೆಮ್ಮಯ ಪುರಿಗೆಳೆದೊಯ್ದರೆ । ಕೌತುಕವೇನಿಲ್ಲ ॥ 1 ॥ ವಶವಾಗದಳನು ಪಿಡಿದೆಳೆದೊಯ್ವರೆ । ಪಶುವೆಂದರಿತಿಹಿರೆ ॥ ಕೃಶಳೇಂ ಸಾಧ್ವಿಯು ತೋರುವೆ ಶಾಪದಿ । ವಿಷಮಿತ ಮಾನಸರೆ ॥ 2 ॥

### ಭಾಮಿನಿ

ಕರದಿ ಜಲವಂ ಪಿಡಿದು ನಿಂತಾ । ತರುಣಿಯನು ಕಂಡಾಶ್ವಿನೇಯರು । ಭರಿತ ಭಯದಿಂ ನಡನಡುಗಿ ಕೈಮುಗಿದು ಬೇಡಿದರು ॥ ಕರುಣೆ ತೋರೌ ತಾಯೆ ಕೆಟ್ಟೆವು । ಸರುವ ತಪ್ಪನು ಒಪ್ಪಿಕೊಂಬೆವು । ವರವ ಬೇಡಿಕೊ ಖಂಡಪರಶುವಿನಾಣೆ ನೀಡುವೆವು ॥ 1 ॥

### ಕಂದ

ಸೌರಿಗಳೆಂದುದ ಕೇಳುತ । ಮೇರು ಮುನಿಪನ ಸತಿ ಸ್ವೈರಣೆಯ ತಾಳುತಲೀ ॥ ಗೌರವವಾಂತಾ ಸುರರಿಂ । ಕೋರಿಕೆಯಂ ಮಂಡಿಸಿದಳು ತಾಂ ಮುದವೆತ್ತುಂ ॥ 1 ॥

### ಸಾಂಗತ್ಯ ರೂಪಕತಾಳ

ಅವನೀಶ ಶರ್ಯಾತಿ ತರಳೆ ಸುಕನ್ಯೆ ನಾ । ಚ್ಯವನ ಮಹರ್ಷಿಯ ಸತಿಯು ॥ ಸವನಿತ ವೃದ್ಧಾಪ್ಯ ಮೇಣಂಧ ಪತಿಸೇವೆ । ಬವಣೆಯೆಂದೆಣಿಸದೆ ಮಾಳ್ಪೆ ॥ 1 ॥ ಮಹದನುಗ್ರಹ ಬೀರ್ವುದೇ ನಿಜವಾದರೆ । ಕಹಿಯನುಭವಿಸುವ ಪತಿಗೆ ॥ ಬಹು ರೂಪ ಯೌವನ ಕಂಗಳನಿತ್ತತಿ । ಸುಹಿತಗೊಳಿಸಿರೆನ್ನ ಬದುಕ ॥ 2 ॥ ಪತಿವ್ರತೆಯಹುದಮ್ಮ ಮನಕೆ ಮೆಚ್ಚುಗೆಯಾಯ್ತು । ಸತಿಧರ್ಮದಂತೆ ನೀ ನಡೆದೆ ॥ ಪತಿಯ ತೋರಿಸು ನಡೆಯೆಂದು ಬಂದರು ಭೃಗು । ಸುತನಾದ ಚ್ಯವನನಿದ್ದೆಡೆಗೆ ॥ 3 ॥ ಮುನಿರಾಯ ಕೇಳ್ನಿನ್ನ ಸತಿಸುಕನ್ಯೆಯ ಧರ್ಮ । ಕನುವಾದ ನಡತೆಗೆ ಮೆಚ್ಚಿ ॥ ತನುವಿಂಗೆ ಕಲ್ಪವನೆಸಗೆ ಬಂದಿಹೆವೆನೆ । ಅನುಮತಿಯಿತ್ತನಾ ಮುನಿಯು ॥ 4 ॥

### ಕಾಂಬೋಧಿ ಝಂಪೆತಾಳ

ನೋಡುತಲಿ ಸುರವೈದ್ಯರಾ ವೃದ್ಧ ಚ್ಯವನನನು । ಕೂಡಿ ಸರಸಿಯೊಳಿಳಿದು ಬೇಗ ॥ ರೂಢಿಗತಿ ನೂತನದ ಕಾಯಕಲ್ಪವನೆಸಗೆ । ಪ್ರೌಢ ರೂಪಾತಿಶಯವೊದಗೆ ॥ 1 ॥ ಕಂಗೊಳಿಸಿ ಮೆರೆಯುತಿರೆ ಸತಿಸುಕನ್ಯೆಯ ಮನಕೆ । ಕಂಗೆಟ್ಟು ಬಲು ಚಿಂತೆಯಾಯ್ತು ॥ ವಿಂಗಡಿಸಲಸದಳದ ರೂಪ ಮೂರನು ನೋಡಿ । ಮಂಗಳೆಯು ದಿಕ್ಕೆಟ್ಟಳಾಗ ॥ 2 ॥ ಸುಮ್ಮನೇತಕೆ ನಿಂತೆ ನಿನ್ನ ಪತಿಯಾರೆಂದು । ಎಮ್ಮೊಳಗೆ ಪರಿಶೀಲಿಸೆನಲು ॥ ಸಮ್ಮತಿಸಿ ಮುಂಬರಿದು ಪತಿಕರವ ಪಿಡಿಯೆ ತಾ । ನೆಮ್ಮಿರುವ ಸದ್ಧರ್ಮದಿಂದ ॥ 3 ॥

### ಕಂದ

ಎರಗಿದ ಸತಿಯಂ ತಳ್ಕಿಸಿ । ಸುರಭೇಷಜರೊಡನುಸುರ್ದನಾ ಮುನಿ ಚ್ಯವನಂ ॥ ಬರಡು ಹಯನಾಯ್ತು ಕೊರಡು ಕೊ । ನರಿಹುದು ಪ್ರತಿಯಾಗಿ ಗೈಯಲೇಂ ಪೇಳುವುದೂ ॥ 1 ॥

### ಭೂಪಾಳಿ ಏಕತಾಳ

ಯತಿಯೆ ಕೇಳು ವೈದ್ಯಕೆಂದು । ಪ್ರತಿಯ ಪಡೆವುದುಚಿತವಲ್ಲ । ಪೃಥುವಿಯಮರ ನಿನ್ನ ನುಡಿಯು । ಪಥದಿ ಪತನವಾಗೆ ಸಲ್ಲ ॥ 1 ॥ ಅದಕೆ ಕಾರ್ಯ ಪೇಳ್ವೆವೊಂದು । ತ್ರಿದಶಪತಿಯು ಎಮ್ಮನಿಂದು ॥ ಅದಿತಿಸುತರೊಳ್ ಶೂದ್ರರೆಂದು । ಪದ ಸಮಾನ ಹವಿಯ ತಡೆವ ॥ 2 ॥ ಯತಿ ಸಂಕಲ್ಪ ಶಕ್ತಿಯೆದುರು । ಪೃಥುಲ ಶಕ್ತಿಯನ್ಯವಿಲ್ಲ । ಕ್ರತುಗಳಲ್ಲಿ ಹವಿಗಳನ್ನು । ಸತತ ಕೊಡುವ ಕ್ರಮವ ವಿಧಿಸು ॥ 3 ॥

### ನಾದನಾಮಕ್ರಿಯೆ ಅಷ್ಟತಾಳ

ಇಷ್ಟಕ್ಕೆ ಯೋಚಿಪುದೇತಕೆ । ನಡೆ । ವಿಷ್ಟಿಯೋಳ್ ಹವಿಯ ನೀಡುವುದಕೆ ॥ ದಿಟ್ಟ ಪ್ರತಿಜ್ಞೆಯ ಕೇಳಿರಿ । ಸಂ । ತುಷ್ಟಿಯ ಸರ್ವದಾ ತಾಳಿರಿ ॥ 1 ॥ ತಡೆದರೆ ಪಾಕಶಾಸನನೇನು । ಬಿಡಿ । ಜಡಜಸಂಭವ ಹರಿ ಮೃಢರನು ॥ ಕಡೆಗಣಿಸುವೆ ಬಾಹ್ಯ ಶಕ್ತಿಯ । ಮೇಣ್ ।

ಮುಡುಪಾಗಿಡುವೆನೆನ್ನ ಸಿದ್ಧಿಯ ॥ 2 ॥ ಎನೆಕೇಳಿ ಸಂತಸ ಹೊಂದುತ । ಸೂರ್ಯ । ತನಯರು ಶುಭವ ಹಾರೈಸುತ ॥ ಕನಕದ ರಥವೇರ್ದು ಬಾನಿನ । ಪಥ । ವನುಸರಿಸಿದರು ತಾವಾದಿನ ॥ 3 ॥

## ಮಧ್ಯಮಾವತಿ ಅಷ್ಟತಾಳ

ಓ ಮನಸ್ವಿನಿ ಕೋಮಲೆ । ಸನಿಸನಿಹ ಬಾ । ಪ್ರೇಮಪುತ್ಥಳಿ ಸುಶೀಲೆ ॥ ವಿಕಸಿತ ಪೂಮಾಲೆ ॥ ಕಾರ್ಯ ಕರಣದಿ ರೂಪ ಶಯನಾ । ಹಾರ್ಯ ಕ್ಷಮೆಯಲಿ ನ್ಯೂನವಿಲ್ಲದ । ಚರ್ಯೆಗಳು ಶಾಸ್ತ್ರೋಕ್ತ ಷಡ್ಗುಣ । ಆರ್ಯ ಸತಿಯರಿಗೊಪ್ಪುವಂತಿದೆ ॥ 1 ॥

## (ಕಾನಡಾ) ಆನಂದಭೈರವಿ ಏಕತಾಳ

ನಿಮ್ಮ ಸೇವೆಗಿಂತಲನ್ಯ । ಸಮ್ಮತದ ಕಾರ್ಯವಿಲ್ಲ । ಸುಮ್ಮನೇಕೆ ಪೊಗಳುತಿಹಿರಿ । ಎಂದಳು । ನಾಚಿ । ನಿಂದಳು ॥ 1 ॥

## ಯಮನ್‌ಕಲ್ಯಾಣಿ ತ್ರಿವುಡೆತಾಳ

ಮಲ್ಲಿಕಾಸ್ಮಿತ ರುಚಿರೆ ಕೇಳೆಲೆ । ಕಲ್ಲು ಹೃದಯದ ಶುಂಠನು ॥ ಅಲ್ಲವೆಲೆ ನಾ ನಿನ್ನ ಬಯಕೆಯ । ನೆಲ್ಲವನು ಸಲ್ಲಿಸುವೆನು ॥ 1 ॥ ಧೀರ್ಘ ತಪಸಿನೊಳರ್ಧ ಭಾಗದಿ । ಸ್ವರ್ಗ ಭೋಗವ ಕಲ್ಪಿಸಿ ॥ ವೆಗ್ಗಳದ ಸುಖ ಕೊಡುವೆನೆಂದನು । ಭಾರ್ಗವಾಖ್ಯನು ಮೋದದಿ ॥ 2 ॥

## ಕುಸುಮ ಷಟ್ಪದಿ

ತ್ರಿದಶಾಯಲವ ಮೀರಿ । ಸದನವನು ನಿರ್ಮಿಸುತ । ಮೊದಲ ಮಧುಚಂದ್ರದೋಲ್ ಸಂತೋಷದಿ ॥ ಒದಗಿನಿಂ ಪುಷ್ಪಕದಿ । ವಿಧವಿಧದ ತಿರುಗಾಟ । ಮೊದಲಾಗಿ ಸಕಲಸುಖ ಲೀನರಾಗಿ ॥ 1 ॥ ಆಕಾಶ ಸುತ್ತುತ್ತ । ಆಕಾಡ ಸೊಗಸವಿದು । ನೌಕೆಯೇರಿಳಿದು ಜಲಕ್ರೀಡೆಯಲ್ಲಿ ॥ ನೂಕಿದರು ಕೆಲವರ್ಷ । ಲೋಕಲೋಕಂಗಳಲಿ । ಲೌಕಿಕಾನಂದವನುಭವಿಸುತ್ತಲಿ ॥ 2 ॥

## ಕಾನಡಾ ಝಂಪೆತಾಳ (ಝಂಪೆ ಷಟ್ಪದಿ)

ಉತ್ತಮದ ಸಾಕೇತ ಪತ್ತಣದೊಳೊಂದು ದಿನ । ಮಿತ್ರಸುತ ವೈವಸ್ವತಾಖ್ಯ ಭವ ಶರ್ಯಾತಿ । ಸಪ್ತಾಂಗಕೊಪ್ಪಿರುವ ಸಭೆಯೋಳಂ ಮಂಡಿಸುತಲಿ ॥ ಆಸ್ಥಾನಿಕರನ್ಮಚಿತ ತರತರದಿ ಮನ್ನಿಸುತ । ನಿತ್ಯದಲಿ ಹೃದಯವನು ಬೇಧಿಸುತ್ತಿಹ ಮಹಾ । ಚಿತ್ತದುಮ್ಮಳಿಕೆಗಳ ಮನಕರಗಿ ಬಿತ್ತರಿಸಿದ ॥ 1 ॥

## ಹಂಸಾನಂದಿ ತ್ರಿವುಡೆತಾಳ

ಸತಿಸುಕನ್ಯೆಯು ವಿಧಿಯ ಭೀಕರ । ಹತಿಯನುಣ್ಣುತ ತ್ಯಾಗ ಭಾವದಿ । ಯತಿಯನುರೆ ವೈವಾಹವಾದಳು । ಸುತರ ಪಡೆಯದ ಮುಂದೆನಗೆ ಸ । ದ್ಗತಿಯು ಸಿಗದು । ದಿನದ್ದಿನ । ವ್ಯಥಿಪುದಾಯ್ತು ॥ 1 ॥

### ಪಂತುವರಾಳಿ ಏಕತಾಳ

ಗುರು ವಸಿಷ್ಠರು ಆಶೀರ್ವದಿಸಿ । ಪೇಳಿದರಾಗ । ಗುರುತರ ವ್ಯಥೆಯೇಕೆ ಸಹಸಿ ॥ ಧರಣಿಪ ಕೇಳ್ಸುತ ಕಾಮನೆಯನು ನೀ । ತೊರೆವುತ ಸರ್ವಸಮರ್ಪಣ ಭಾವದಿ । ವರಸುತ ಕಾಮೇಷ್ಟಿಯ ಕೈಗೊಳ್ಳಲು । ಕರುಣದಿ ಪೊರೆವನು ಹರಿಸರ್ವೋತ್ತಮ ॥ 1 ॥ ನುಡಿ ಕೇಳಿ ಧಾರುಣಿಪಾಲ । ಪುರೋಹಿತ । ರಡಿಗೆ ವಂದಿಸುತೆಂದ ಶೀಲ ॥ ಒಡಲುರಿಯಾಳವನರಿತಿಹ ಮಹಿಮರೆ । ದೃಢಸಂಕಲ್ಪವ ಗೈದಪೆನೀಗಲೆ । ಅಡವಿಯೊಳಿಹ ಸುತೆ ಸಹ ಜಾಮಾತರ । ಸಡಗರದಲಿ ಪಾಲ್ಗೊಳ್ಳಲು ಕರೆತಹೆ ॥ 2 ॥

### ಕಂದ

ಸುತೆಯಂ ಕಾಂಬುತ್ಸಾಹದಿ । ಪೃಥುವಿಪ ಶರ್ಯಾತಿ ಬಲು ತರದ ಸಂತಸದಿಂ ॥ ಮಿತ ಪರಿವಾರವ ವೆರಸುತ । ಪಥವಿಡಿದು ಪೊರಟ ವನಾಂತರಕೆ ಸಂಭ್ರಮದಿಂ ॥ 1 ॥

### ಸೌರಾಷ್ಟ್ರ ತ್ರಿವುಡೆತಾಳ

ವಿಪಿನ ಮಧ್ಯಕೆ ಭರದೊಳೈತರೆ । ವಿಪುಲ ಸಂಭ್ರಮದಿಂದಲಿಹ ಯುವ । ತಪಸಿಗಳ ಕಂಡಾಗ ಮನದಲಿ । ಕುಪಿತನಾದ ॥ 1 ॥ ಏನಿದಚ್ಚರಿ ಸುತೆ ಸುಕನ್ಯೆಯು । ಹೀನ ಕಾರ್ಯಕೆ ಮನವಗೊಟ್ಟಳೆ । ಹಾನಿಯಿದು ಸದ್ಧರ್ಮ ರೀತಿಗೆ । ಮಾಣಿಸುವೆನು ॥ 2 ॥ ತಂದೆಯನು ಕಂಡಾಗಲೋಡೊತ । ಬಂದು ಸಾಧ್ವಿಯು ಪಾದ ಕಮಲಕೆ । ವಂದಿಸಿರಲದ ನೋಡಿ ಕೋಪದೊ । ಳೆಂದ ಜನಪ ॥ 3 ॥ ಎಲೆಲೆ ಮೂರ್ಖಳೆ ಯೌವನದ ಮದ । ತಳುವದುಕ್ಕಿತೆ ಹದಿಬದೆಯ ಸಂ । ಕಲಿತ ಧರ್ಮವ ತೊರೆದೆ ನಿಜಕುಲ । ಮಲಿನವಾಯ್ತು ॥ 4 ॥ ಕಂಗಳಿಲ್ಲದ ವೃದ್ಧ ಪತಿಯು । ಲ್ಲಂಘಿಸುತ್ತಲಿ ಯೌವನದ ಯತಿ । ಸಂಘ ಸೊಗಸಿತೆ ದುರ್ನಡತೆಯನು । ಭಂಗಿಸುವೆನು ॥ 5 ॥

### ತುಜಾವಂತು ಝಂಪೆತಾಳ

ಎಂದನುಡಿ ಕೇಳುತಲಸಮ ಮುಗುಳ್ನಗೆಯಿಂದ । ಲೆಂದಳಾ ವೃತ್ತಾಂತ ವಿವರವೆಲ್ಲವನು ॥ ತಂದೆ ಕೇಳ್ ನಡತೆಗೆಟ್ಟವಳಲ್ಲ ನಿಮ್ಮಸುತೆ । ಅಂದಶ್ವಿನೀ ಸುತರ ಕರುಣ ಕಾರಣದಿ ॥ 1 ॥ ಮಾವ ಕೇಳಿಂದೆನಗೆ ದೊರಕಿರುವ ದೃಷ್ಟಿ ಮೇಣ್ । ಯೌವನಕೆ ತರಣಿಜರನುಗ್ರಹಂಗಳಿಗೆ ॥ ಈ ವನಿತೆ ಭಾವ ಶುದ್ಧಿಯೊಳು ಗೈದಿರುವ ಪತಿ । ಸೇವೆ ನಿಚ್ಚಟದ ಕಾರಣಗಳಾಗಿಹುದು ॥ 2 ॥ ನುಡಿಯ ಕೇಳುತಲಾಗ ಪೊಡವಿಪಾಲನು ಪೇಳ್ದ । ದುಡುಕಿನಿಂ ಕೆಡುಕೆಂಬ ಮಾತು ನಿಜವಾಯ್ತು ॥ ಒಡವರಿಕೆ ಹಸನಾಯ್ತು ಪುತ್ರಕಾಮೇಷ್ಟಿಯನು । ತೊಡಗಲಿಹೆ ಪೋಪುದೇಳಿರಿ ನಗರಕೆಲ್ಲ ॥ 3 ॥ ಧರಣಿಪಾಲನೆ ಕೇಳು ಸಂತಾನ ಪ್ರದವಾದ । ವರ ಪುತ್ರಕಾಮೇಷ್ಟಿಯನು ಗೈವುದುಚಿತ ॥ ಗುರು ವಸಿಷ್ಠರನುಜ್ಞೆಯಂ ಪಡೆದು ಯಾಗದಲಿ । ಹಿರಿತನವ ವಹಿಸಿಕೊಂಬೆನು ಸಂತಸದಲಿ ॥ 4 ॥

## ದ್ವಿಪದಿ

ಚ್ಯವನ ಮುಖ್ಯರು ಪೊರಟು ಪುರವ ಸೇರಿದರು । ಅವರವರ ಕಾರ್ಯದಲಿ ಸತತ ತೊಡಗಿದರು ॥ 1 ॥ ಸಕಲ ಸಾಂಭಾರವನು ಸೇರಿಸಿದ ಜನಪ । ಆಖಿಲ ಮುನಿನಿಕರದಿಂ ಶೋಭಿಪ ಕಲಾಪ ॥ 2 ॥ ಜಡಜಾಪ್ತ ವಂಶದ ಲಲಾಮ ಶರ್ಯಾತಿ । ಮಡದಿಸಹ ದೀಕ್ಷೆ ಹೊಂದಿದ ಭಕ್ತಿ ಪೂರ್ತಿ ॥ 3 ॥ ಮಂತ್ರಘೋಷವದು ಗಗನಾಂತರಕೆ ಮೊಳಗೆ । ತಂತ್ರಾಗಮಾದ್ಭುತದ ಕರ್ಮ ಜಗದೊಳಗೆ ॥ 4 ॥ ಇಂದ್ರಾದಿಗಳ್ಗೆ ಕ್ರಮದಂತೆ ಹವಿಗಳನು । ಗಂಧವಹ ಸಖನಮುಖದಿಂದರ್ಪಿಸಿದನು ॥ 5 ॥ ವಚನವಿತ್ತಂತಶ್ವಿನೀ ಸುತರ ಕರೆಯೆ । ಶಚಿಪತಿಯು ಕೇಳಿ ಕೆರಳುತ್ತೆಂದ ಮುನಿಯೆ ॥ 6 ॥

## ಸೌರಾಷ್ಟ್ರ ತ್ರಿವುಡೆತಾಳ

ನೋಡಿದಿರೆ ಸುಮನಸರು ಭುವಿಯಾ । ಕಾಡು ಮುನಿಪತಿ ಚ್ಯವನನೆಸಗಿದ । ಮೂಢ ಕರ್ಮಗಳಿಗೆ ವಿರೋಧವ । ಮಾಡಬೇಕು ॥ 1 ॥ ಸುರರೊಳಂತ್ಯಜರಾಶ್ವಿನೇಯರು । ನೆರೆ ಬಹಿಷ್ಕೃತರಿಂಗೆ ಹವಿಗಳ । ಕರೆದು ಕೊಡುತಿಹನುದ್ಧಟನ ದಿಃ । ಕ್ಕರಿಸಬೇಕು ॥ 2 ॥ ಕೊಂದು ಕಳೆವೆನು ನೀತಿ ರಹಿತನ । ಮಂದಮತಿಗಿದು ತಕ್ಕ ಶಿಕ್ಷೆಯು । ಎಂದು ಕರದೊಳು ವಜ್ರವೆತ್ತಿದ । ಇಂದ್ರತಾನು ॥ 3 ॥ ಕಂಡು ಭಾರ್ಗವನಮಿತ ಕ್ರೋಧದಿ । ದಂಡಿಪನ ದಂಡಿಸುವೆ ನೆಂದಾ । ಖಂಡಲನ ಕರ ಸ್ತಬ್ದಗೊಳಿಸಿದ । ಚಂಡ ಛಲದಿ ॥ 4 ॥ ತಿಣುಕಿದನು ಸುರರಾಯ ಕದಲದೆ । ಕುನಿತ ದೇಹದೊಳವನು ವ್ಯಥಿಸಿ ವ । ದನವದೋರಲರಿಯದೆ ಲಜ್ಜಾ । ಮನದಿನಿಂತ ॥ 5 ॥

## ನಾದನಾಮಕ್ರಿಯೆ ರೂಪಕತಾಳ

ನೀತಿ ತಪ್ಪಿದವರದಾರಯ್ಯ । ಮೂಲೋಕದಧಿ । ನಾಥ ತಿಳಿಯೊ ನಿನ್ನ ನಡತೆಯ ॥ ಪ ॥ ಧಾತಜಾತ ದಕ್ಷನಿಂಗೆ । ನೂತನಶಿರ ವೈದ್ಯಗೈವ । ಸಾತಿಶಯದ ಕಾಲದಲ್ಲಿ । ಮಾತಕೊಟ್ಟು ಮರೆತೆಯೇನು ॥ ಭೂತ ವೈರವೆಮ್ಮೊಳಿಲ್ಲವು । ಅರವಿಂದಮಿತ್ರ । ಜಾತರಿಂಗೆ ಸರಿಸಮಾನವು ॥ ಹವಿರ್ಭಾಗ ಸಿಗಲು । ಪ್ರೀತಿಯಿಂದ ಕಾರ್ಯ ಸುಗಮವು ॥ 1 ॥

(ನಾದನಾಮಕ್ರಿಯೆ ಅಷ್ಟತಾಳ:– ನೀತಿ ತಪ್ಪಿದನಾರು ಪೇಳಯ್ಯ । ಮಖದಿ । ಮಾತನಿತ್ತುದನೆಲ್ಲ ಮರೆತೆಯ ॥ ಈ ತೆರ ಭಿನ್ನತೆಯೇಕಯ್ಯ । ಪುರು । ಹೂತ ನಿನ್ನಾನನವೆತ್ತಯ್ಯ ॥ 1 ॥)

## ಮಧ್ಯಮಾವತಿ ಏಕತಾಳ

ಆ ಸಮಯದೆ ಬೃಹಸ್ಪತಿಯೆಂದ ಭೃಗುಜನೆ । ಘೋಷಣಾ ವಾಕ್ಯವನೊಪ್ಪಿದೆನಯ್ಯ ॥ ಪೂಷಜರಿಂಗೆ ಹವಿರ್ಭಾಗ ದೊರಕಲಿ । ವಾಸವ ಮುಖ್ಯರ ಸಮನಾಗಿ ನಿರುತ ॥ 1 ॥ ಸಾಂಬನಾಣೆಯು ಕೇಳು ಮಾನ್ಯತೆ ಕುರಿತಾಗಿ । ನಂಬುಗೆಯನ್ನೀವೆ ನುಡಿಗೆಡರಿಲ್ಲ ॥

ಜಂಭವೈರಿಯು ಮೀರನೆನ್ನಯ ವಾಕ್ಯವ । ತುಂಬು ನೊಂದಿಹನನ್ನು ಬಿಡುಗಡೆಗೊಳಿಸು ॥ 2 ॥

## ಕೇದಾರಗೌಳ ಅಷ್ಟತಾಳ

ಗುರುವೆ ನಿಮ್ಮುಕ್ತಿಯನತಿಕ್ರಮಿಸಲರಿಯೆ । ಸುರಪನ ಸ್ತಂಭನವ ॥ ತರಿದಿಹೆ ನೋಡಿರಿ ಯಾಗಸಮಾಪ್ತಿಗೆ । ತೆರವುಗೊಳಿಸಿ ತೋಷದಿ ॥ 1 ॥ ಭಾರ್ಗವ ನಮಿಪೆ ವಿರೋಧಿಸಿ ತಪ್ಪಿದೆ । ಸ್ವರ್ಗದಿ ಯಮಳರಿಂಗೆ ॥ ಯೋಗ್ಯ ಸ್ಥಾನವಿಹುದು ಸರಿಸಮ ಹವಿಯುಂಬೆ । ಧೀರ್ಘ ಪ್ರಮಾಣವಿದು ॥ 2 ॥ ಜಗವು ದೈವಾಧೀನವಾಗಿರೆ ಆ ದೈವ । ನಿಗಮ ಮಂತ್ರಾಧೀನವು ॥ ಮಿಗಿಲಾದ ಮಂತ್ರವು ಬ್ರಾಹ್ಮಣಾಧೀನವು । ಸೊಗದಿ ವಿಪ್ರರು ಪೂಜ್ಯರು ॥ 3 ॥ ಹವಿಗಳನರ್ಪಿಸಿ ಯಜ್ಞ ಪೂರ್ಣಾಹುತಿ । ಚ್ಯವನ ಪೂರಯಿಸುತ್ತಿರೆ ॥ ಸವನ ಪುರುಷ ಮೈದೋರುತ ಪಾಯಸ । ಭುವನಪಾಲಕಗಿತ್ತನು ॥ 4 ॥ ಸಂತಸ ತಾಳುತ ತೆರಳಿದರೆಲ್ಲರು । ಪಂಥ ಪೌರುಷ ಪೊಗಳಿ ॥ ಮುಂತೆ ಪೇಳುವೆ ರವಿಜಾತರು ದೀನರ । ಸಂತಯಿಸಿದ ಕಥೆಯ ॥ 5 ॥

ಅಶ್ವಿನ್ಯಾನುಗ್ರಹ (ವೀರ ವನಿತೆ ವಿಶ್ವಲೆ)

ವಚನ:– ಖೇಲ ನಾಮಕ ರಾಜ್ಯದಲಿ ಐಳ ಚಕ್ರವರ್ತಿಯೋಡ್ಡೋಲಗದಿ ಮೆರೆವ ಪರಿಯೆಂತೆನೆ.............

## ಸೌರಾಷ್ಟ್ರ ತ್ರಿವುಡೆತಾಳ

ಧರೆಯೊಳೆಸೆಯುವ ಖೇಲ ನಾಮಕ । ಪುರವನಾಳುವ ಐಳಭೂಪನು । ಪರಮ ಧಾರ್ಮಿಕ ಸತ್ಯಸಂಧನು । ಮೆರೆಯುತಿರ್ದ ॥ 1 ॥ ಮುನಿಯಗಸ್ತ್ಯರು ಯೆಮಗೆ ಗುರುಗಳು । ವನಿತೆ ವಿಶ್ವಲೆ ದಂಡನಾಯಕಿ । ಗುಣ ಸುಸಂಸ್ಕೃತ ಸಭ್ಯ ಪ್ರಜೆಗಳು । ಮನಕೆತೋಷ ॥ 2 ॥ ತೋಳ ಸತ್ವವ ಪ್ರಕಟಿಸುತ್ತಲಿ । ಕಾಳಗದಿ ಗೆದ್ದಿಹೆನು ದೊರೆಗಳ । ಕಾಲಕಾಲಕು ಕಪ್ಪ ಕೊಡುವರು । ಮೇಲುವರಿದು ॥ 3 ॥ ಮಕ್ಕಳಿಲ್ಲವು ವೃದ್ಧನಾದೆನು । ದಿಕ್ಕುಗಾಣದ ಕೊರಗ ನೀಗಿಸಿ । ಕಕ್ಕುಲತೆಯಿಂ ಕಾವುದೆಮ್ಮನು । ರಕ್ಕಸಾರಿ ॥ 4 ॥

## ವಚನ

ಈ ಪರಿಯಿಂ ಜನಪಾಲ ತಾನಿರಲಾಗಿ, ಇತ್ತ ಪಾತಾಳದಲಿ ರಾಕ್ಷಸರಾಜ ಫಣಿದನುಜ, ತನ್ನಯ ಮಂತ್ರಿ ಶಠಾಸುರ ಮೇಣ್ ಸೇನಾನಿ ಮಠಾಸುರರು ಕೂಡುತ್ತ ಓಲಗಕೆ ಬರುವ ಪರಿಯೆಂತೆನೆ...

## ಭೈರವಿ ಝಂಪೆತಾಳ

ಇತ್ತ ಫಣಿಯೆಂಬಸುರ । ಕೃತ್ತಿವಾಸನ ನೆನೆದು । ಇತ್ತನೋಲಗ ದನುಜ । ಮೊತ್ತವನುಸೇರಿ ॥ 1 ॥ ರಚಿಸಿದೀ ಸಭೆಯೊಳಗೆ । ಸಚಿವನಿಹ ಶಠದನುಜ ॥ ಸುಚರಿತ ಮಠನು ಸೇನೆ । ನಿಚಯಕಧಿಪಾಲ ॥ 2 ॥

## ಸೌರಾಷ್ಟ್ರ ತ್ರಿವುಡೆತಾಳ

ಬಾಹು ಬಲವೇ ಸರ್ವ ವಿಜಯಕೆ । ಗೇಹವೆಂಬುದ ಸಾಧಿಸುತ ನಾ । ಕಾಹುರದಿ ಮುರಿದಿಹೆನು ಶತ್ರು ಸ । ಮೂಹವನ್ನು ॥ 1 ॥

## ಕೇದಾರಗೌಳ ಝಂಪೆತಾಳ

ಆದರೊಂದನು ತಿಳಿದಿರೆ । ವಂಶಜರ । ತ್ರೈದಶರು ತಾವ್ ತರಿದರೆ ॥ ಹೋದ ಕದನಕೆ ವೃತ್ರನು । ವಂಚಿಸುತ । ಹ್ರಾದಿನೀಧರ ಕೊಂದನು ॥ 1 ॥ ಎಂತು ಗೆಲುವಹುದು ನಮಗೆ । ವೈರಿಗಳ । ಹಂತ ತಗ್ಗಿಸುವ ಬಗೆಗೆ ॥ ಅಂತರಿಸದುಸಿರಿ ಮಾತ । ಎನೆಕೇಳಿ । ಸಂತಸದಿ ದೈತ್ಯವ್ರಾತ ॥ 2 ॥

## ಭೈರವಿ ಅಷ್ಟತಾಳ

ಸುರರ ಶಕ್ತಿಯ ಮೂಲವ । ಅರಿತಿಹೆ ನಾನು । ಪರಿಪರಿ ಮುನಿ ವರ್ಗವ ॥ ಮರುಳರಂದದಿ ನಿತ್ಯ ಯಾಗವ ಗೈವುತ । ಎರೆವರು ಹವಿರ್ಭಾಗವ ॥ 1 ॥ ಧರಣಿಯಾಳುವ ರಾಜರು । ತಾವಿದಕೆಲ್ಲ । ಸರಿಸರಿ ಪೂರಕರು ॥ ತುರುಗಳಪಾಲಿಸುತರ್ಪಿಸಿ ಹವಿಗಳ । ಸುರರೇಳ್ಗೆ ಬಯಸಿರ್ಪರು ॥ 2 ॥ ಅರಸರ ಹಿಂಸಿಸುತ । ಗೋವ್ಗಳನೆಲ್ಲ । ಇರದೆ ಕೈವಶಗೊಳುತ ॥ ಮೆರೆದರೆ ನಾವೆಲ್ಲ । ಸರಿವುದು ಹಿಂದಕೆ । ಸುರತತಿ ತಾ ಸೋಲುತ ॥ 3 ॥

## ಕೇದಾರಗೌಳ ಝಂಪೆತಾಳ

ಭಳಿರೆ ನೀವೆಂದ ಮಾತು । ಬಲು ಹರುಷ । ದೊಳಗೆನ್ನ ಮನಕೆ ಬಂತು ॥ ಘಳಿಲನ್ಯೆದುತ ತುರುಗಳ । ಅಪಹರಿಪೆ । ಕೊಳುಗುಳದಿ ಕೀರ್ತಿ ಧವಳ ॥ 1 ॥

## ಮಾರವಿ ಏಕತಾಳ

ಉತ್ತಮ ಲಾಲಿಸು ಆಜ್ಞೆಯನಿತ್ತರೆ । ಪೃಥ್ವಿಪರನು ಬಡಿದು ॥ ಕತ್ತಲವೈರಿಯ ಸುತನೆಡೆ ಕಳುಹಿಸಿ । ಉತ್ತರಿಸುವೆನಿದಕೊ ॥ 1 ॥ ಕೊಡಿಸೆನಗಪ್ಪಣೆ ಬೆಡಗಿಲಿ ನುಡಿಯದೆ । ದೃಢದಲಿ ವೈರಿಗಳ ॥ ಪೊಡವಿಯ ಕಸಿವುತ । ಮಿಡುಕದತೆರದಲಿ । ಗೊಡವೆಯ ಮುಗಿಸುವೆನು ॥ 2 ॥

## ಭೈರವಿ ತ್ರಿವುಡೆತಾಳ

ಪೊರಟನಾಗ । ವಿಭವದಿ । ಪೊರಟನಾಗ ॥ಪ॥ ತುರಗ ರಥ ಕಾಲಾಳು ಗಜಗಳ । ವೆರೆಸಿ ದನುಜರ ಪಡೆಯ ಸೇರಿಸಿ ॥ಅ.ಪ.॥ ಹಾಲನೆರೆದರು ವಿಷವ ಕಕ್ಕುವ । ಕಾಳ ಸರ್ಪದ ಪೆಸರ ಪೊಂದಿದ । ಖೂಳ ದನುಜನು ರೋಷದಿಂದಲಿ । ಶೂಲಪಾಣಿಯ ಪೂರ್ಣ ಕರುಣೆಯ । ತಾಳಿಹೆನು ತಾನೆಂಬ ಭಾವದಿ । ಆಳುತನವುರೆಯಂತಕನ ತೆರ । ಮೇಳವಿಸುತಿರೆ ದಟ್ಟ ದೇಹದ । ಹಾಳು ಪರಹಿಂಸಾ ವಿನೋದಿಯು ॥ 1 ॥

### ಆರ್ಯಸವಾಯಿ ಏಕತಾಳ

ಆಣ್ಣನ ದನಗಳನೆಬ್ಬುತ ಬಂದರು । ಎಣ್ಣುತಲಾ ಸುಖ ಕಷ್ಟಗಳ ॥ ತಣ್ಣನೆ ಜೀವಿಸಲೊಂದುಜ್ಜುಗವದು । ಅನ್ನದ ಋಣವನು ತೀರಿಸಲು ॥ 1 ॥

### ಕಂದ

ನಿಲ್ಗಡೆಯಿಲ್ಲದೆ ಹರುಷದಿ । ಹುಲ್ಗಾವಲಿನಲ್ಲಿ ದನಂಗಳನು ಮೆಯ್ಸುತಿರೇ ॥ ಪಲ್ಗಡಿಯುತ ಫಣಿ ಸೇನೆಯ । ಮೇಲ್ಗಡೆ ಹಾಯಿಸುತ ಪಶುಗಳನು ಪಿಡಿಯಲ್ಕೆ ॥ 1 ॥

### ಪುನ್ನಾಗತೋಡಿ ಏಕತಾಳ

ಕಣ್ಣಬಿಟ್ಟು ಬೆದರಿಸುತ್ತಾ । ಸಣ್ಣ ಕೆಲಸಾ ದನ ಹಿಡಿಯುತ್ತಿ ॥ ಬಣ್ಣವೇನ್ಲಾ ಗಣ್ಯವಲ್ಲಾ । ರಣ್ಯಾದಾಗ ಹುಲಿ ಹಿಡಿತೈತೆ ॥ 1 ॥

### ಕೇದಾರಗೌಳ ಅಷ್ಟತಾಳ (ಮಾರವಿ ಏಕತಾಳ)

ಬಿಡಿಬಿಡಿ ದನಗಳ ಕಡಿವೆವು ತಲೆಯನು । ನಡೆಯದು ನಿಮ್ಮಧಟು ॥ ಕಡುಗಲಿ ಫಣಿಯಸುರಾಧಿಪ ಬಂದಿಹ। ಕೊಡುವನು ತಿರುಗೇಟು ॥ 1 ॥

### ಪುನ್ನಾಗತೋಡಿ ಏಕತಾಳ

ಜಂಭದಿಂದ್ಯಾಕಿಂತೆಂಬಿರಿ । ಸಂಬಳಕೊಡುವಾತ ನಿಮ್ಮೀ । ತುಂಬಾ ಕೊಬ್ಬನಿಳಿಸಿ ತಲೆ । ಗೊಂಬನದಕೆ ತಿಳಿದು ನಡಿರಯ್ಯ ॥ 1 ॥

### ಕಂದ

ಸೇವಕರವರೋಳ್ ಹಳಚಲ್ । ಕಾವನಿಗರುಹಿರೆನುತಾಗ ಕಳುಹಲ್ಕವರಂ ॥ ಸಾವರಿಸುತವರು ಬೇಗಂ । ಭೂವಲಯವ ಪಾಲಿಪಂಗುಸುರ್ದರು ಭಯದಿಂ ॥ 1 ॥

### ಮುಖಾರಿ ಏಕತಾಳ

ಸ್ವಾಮಿಯೆ ಶರಣೆಂಬೆವು ಪೊಡಿಯ । ಕೇಳೆಮ್ಮಯ ನುಡಿಯ । ಸ್ವಾಮಿಯೇ ಶರಣೆಂಬೆವು ಪೊಡಿಯ ॥ ಪ ॥ ತೋಮನ ಜತೆಗೀ ಧೂಮನ ಸೇರಿಸಿ । ನೇಮವ ಹೊದ್ದುತ ಗೋಗಳ ಕಾಯ್ವೆವು । ಕಾಮಿತ ಕೊಡುತಿಹ ದಣಿಯರು ನೀವಿರೆ । ಸೀಮೆಯೊಳೀ ಪರಿ ಕಷ್ಟವ ಕಾಣೆವು ॥ 1 ॥ ಪಾತಾಳಕ್ಕಧಿಪತಿಯಂತೆ ತಾನು । ಫಣಿಯೆಂಬಸುರ । ಓತು ಗೋವುಗಳನು ಹಿಡಿದಿಹನು ॥ ಭೂತಳ ವ್ಯಾಪಿಸಿ ಗಜರಥ ತುರಗ ಪ । ದಾತಿಯ ಕೂಡುತ ಬಿರುಸಿಲವರು ಬರೆ । ಕಾತರಗೊಳುತಲಿ ನಾವದ ತಡೆದರೆ । ಮಾತನು ಕೇಳದೆ ಹಿಂಸಿಸುವಾತನು ॥ 2 ॥

### ಸೌರಾಷ್ಟ್ರ ತ್ರಿವುಡೆತಾಳ

ಆಳುಗಳ ನುಡಿ ಕೇಳಿ ಧರಣಿಪ । ಕಾಲನಂದದಿ ಕೆರಳಿ ನುಡಿದನು । ಖೂಳ

ದನುಜರ ನಾಶ ಗೈಯದಿ । ರಾಳುತನಕೆ ॥ 1 ॥ ಮಸಿಯು ಬಪ್ಪುದು ಬಿಡಲು ನರಕದ । ದೆಸೆಯು ತಪ್ಪದು ಪರರ ಕೇಡಿಂ । ದಸಮ ತೋಷವ ಹೊಂದುವಾತನ । ಬಸಿರ ಬಗಿವೆ ॥ 2 ॥ ಸೊಗಸಿನುಪವನ ಹಾಳುಗೈವುದು । ಮಿಗೆ ತುರುಗಳನು ಸೆರೆಯ ಪಿಡಿವುದು । ಸಿಗುವ ಪ್ರಜೆಗಳ ಹಿಂಸಿಪುದು ಕಾ । ಳಗಕೆ ಕರೆಯು ॥ 3 ॥ ದಿಟ್ಟ ತನದಲಿಯುತ್ತರಿಪೆನಿದ । ಕಟ್ಟಿಕೊಳ್ಳಲಿ ಗಂಟ ಸೆರಗಲಿ । ಜಟ್ಟಿ ಸೇನೆಯು ಧುರಕೆ ಪೊರಡಲಿ । ಥಟ್ಟನಿರದೆ ॥ 4 ॥

## ವಾರ್ಧಿಕ ಅರ್ಧ

ಮನದಿ ರೌದ್ರಾವೇಶದಿಂದೈಳ ಭೂಪತಿಯು । ತನುಮರೆದು ಯುದ್ಧ ಸನ್ನಹವೆಸಗಿ ಪೊರಡೆ ಕಂ । ಡನುವರಿತು ಸೇನಾನಿ ವಿಶ್ವಲೆಯು ತಾನಡೆತರುತ ವಿನಯದಿಂದೆರಗಿ ಪ್ರದಕೆ ॥ 1 ॥

## ಮುಖಾರಿ ಆದಿತಾಳ

ಲಾಲಿಸೆನ್ನೊಡೆಯ ಐಳ ಭೂಪ । ಬಲು ಕೀರ್ತಿಕಲಾಪ । ಲಾಲಿಸೆನ್ನೊಡೆಯ ಐಳ ಭೂಪ ॥ ಪ ॥

ರಣಕೆ ಪೊರಡುವೆನೀಗ ನಾನು । ದಯಪಾಲಿಸು ವೀಳ್ಯ । ಚಣದಲ್ಲಿ ದುಷ್ಟ ದೈತ್ಯರನು ॥ ಘನತರದಸ್ತ್ರದಿ । ಸೆಣಸುತಲವರನು ॥ ಮಣಿಸುತ ಕೊಂದೀ । ದಿನದಿ ಬಹೆನಿದೋ ॥ 1 ॥ ಶಕ್ತಿಯಾವುದ ಗಳಿಸಿರಲಿ । ಆಸುರಿ ಗುಣದಲಿ । ಯುಕ್ತಿಯಾವುದ ಬಳಸಿರಲಿ ॥ ಸತ್ಯದ ವೃತ್ತಿಗೆ । ಕುತ್ತನು ತಂದಿಹ ॥ ದೈತ್ಯರ ಕೆಡಹುತ । ಮುಕ್ತಿಯ ಕೊಟ್ಟಪೆ ॥ 2 ॥

## ಮಧುಮಾಧವಿ ತ್ರಿವುಡೆತಾಳ

ಬದುಕಿಗಾಸರೆಯಿಲ್ಲದಲೆವೀ । ಸುದತಿಯೆಂದೆಣಿಸದೆಯೆ ಸೈನ್ಯದಿ । ವಿಧಿಸಿ ವೃತ್ತಿಯ ಎನ್ನ ಪೊರೆದಿಹೆ । ಇದಕೊ ತನುಮನ ನಾಡಿಗೆ ॥ 1 ॥

## ಘಂಟಾರವ ಮಟ್ಟೆತಾಳ

ಕಷ್ಟಕಾಲದಿ । ಎನ್ನ ಪೊರೆದಿಹೆ ॥ ಇಷ್ಟದಿಂದಲೆ । ರಣಕೆ ಪೋಪೆನು ॥ 1 ॥ ಋಣವು ತೀರಲಿ । ರಣದಿ ಕಾದುವೆ ॥ ಗುಣಧಿ ಚಂದಿರ । ಹರಸಿ ಕಳುಹಿಸು ॥ 2 ॥ ಧರ್ಮ ಯುದ್ಧದಿ । ಗೆಲುವು ನಮ್ಮದು ॥ ಮರ್ಮ ತಿಳಿದಿಹೆ । ಚಿಂತೆಯೇತಕೆ ॥ 3 ॥

## ಭಾಮಿನಿ

ಎಂದ ಮಾತನು ಕೇಳಿ ಭೂವರ। ನಂದು ವೀಳ್ಯವನಿತ್ತು ನುಡಿದನು । ಇಂದಿರಾಧವ ಪೂರ್ಣಕರುಣದಿ ನಿನ್ನ ರಕ್ಷಿಸಲಿ ॥ ಚೆಂದದಿಂದನುಮತಿಯ ಗೊಂಡಾ । ಮಂದಗಮನೆಯು ತೆರಳುತಿರಲದು । ಅಂಧಕನ ಕೊಲಲಿಂದುಧರ ಪೊರಟಂದದೊಳಗಾಗ ॥ 1 ॥

### ವರಾಳಿ ಏಕತಾಳ

ವೀರನಾರಿ ಕಸೆಯನುಟ್ಟು । ಒಡೆಯ ನೋಡು । ಮೇಲೆ । ಭಾರಿ ಭಾರಿ ಕೈದುಗಳನು । ಒಡೆಯ ನೋಡು ॥ ಧಾರಣೆಯ ಗೈದಳೀಕೆ । ಒಡೆಯ ನೋಡು । ನೋಡೆ । ಹೋರೆ ಬರುವ ಸೂಚನೆಯನು । ಒಡೆಯ ನೋಡು ॥ 1 ॥ ಸೂರ್ಯನಂತೆ ಪ್ರಭೆಯೋಳೀಕೆ । ಬಂದಳಯ್ಯ । ಇಷ್ಟು । ಧೈರ್ಯವಿಹುದೆ ಸ್ತ್ರೀಯರಿಂಗೆ । ನೋಡುರಾಯ ॥ ಶೌರ್ಯದೋರ್ವ ಕಾಲವೆನಗೆ । ಬಂದುದಯ್ಯ । ಎನ್ನ । ಕಾರ್ಯ ನೋಡು ಸಮರಾಂಗಣದಿ । ದೈತ್ಯರಾಯ ॥ 2 ॥

### ಕಾಪಿ ಅಷ್ಟತಾಳ

ಸರಿನೇರ ಹೋರಾಟ ಸಲ್ಲ। ಗುಟ್ಟಿ ನಿರವ ನಾ ಪೇಳ್ವೆನು ಮೋಸ ತಪ್ಪಲ್ಲ॥ ಅರಿಯದಂತರಮನೆಗೈದು। ಅಲ್ಲಿ। ಅರಸನ ವಂಚಿಸಿ ಕೈಸೆರೆ ಪಿಡಿದು॥1॥ ಲಲನೆಯೋಳ್ ಧುರಗೈವೆ ನಾನು। ನೋಳ್ಪೆ। ಮಲೆತಾಕೆಯಾ ಹವದಮಿತ ಶಕ್ತಿಯನು॥ ಸುಲಭದಿ ಗೆಲುವುದೇ ಸಿದ್ಧ। ಜಯ। ಲಲನೆಯ ವರಿಸುವೆ ನಾನಿದು ಬದ್ಧ॥2॥

### ಭೈರವಿ ಏಕತಾಳ

ಒಡೆಯನೊಳಪ್ಪಣೆ ಪಡೆದು । ಆ । ದಡಿಗರು ಗುಪ್ತದಿ ಜಡಿದು ॥ ನಡೆತರೆ ತಿಳಿಯುತಲವರ । ನೃಪ । ನುಡಿಸಿದ ಬಂದಿಹ ವಿವರ ॥ 1 ॥ ಮೋಸದಿ ಬಂದಿರೆ ಧುರಕೆ । ಛೀ । ನಾಶಹೊಂದುವಿರಿ ಜೋಕೆ ॥ ಪಾಶದಿ ಬಿಗಿಸುವೆನೀಗ । ಜಯ । ದಾಸೆಯ ತೊರೆಯಿರಿ ಬೇಗ ॥ 2 ॥

### ಶಂಕರಾಭರಣ ಮಟ್ಟೆತಾಳ

ಎಲವೊ ಜನಪ ಕಂಡೆಯೇನು ಎಮ್ಮ ಸಹಸವ । ಸೆಳೆದುಕೊಂಬೆವೀಗ ಛಲದಿ ನಿನ್ನ ರಾಜ್ಯವ ॥ ಮಲೆಯ ಬೇಡ ಶರಣು ಬಂದು ಧುರವ ನಿಲ್ಲಿಸು । ತಲೆಯನುಳುಹಿ ಕೊಳ್ಳಲಿಷ್ಟು ಧನವ ಸಲ್ಲಿಸು ॥ 1 ॥

### ಮಾರವಿ ಏಕತಾಳ

ಹುಲು ರಕ್ಕಸ ನೀ ಮುಚ್ಚೆಲೊ ಬಾಯನು । ಹಲ ಮಾತಿಂದೇನು ॥ ಕುಲವರುಹುವ ನಾಲಿಗೆ ಹೊಂದಿಹೆ ಯಮ । ನಿಲಯಕೆ ಕಳುಹುವೆನು ॥ 1 ॥ ಅಂತಕನೂರನು ತೋರುವ ಸಾಹಸ । ವಂತನು ನೀನಿಹೆಯಾ ॥ ಚಿಂತಿಸಬೇಡವೊ ಯಮಪಥ ಕಲಹಕೆ । ನಿಂತರೆ ತಿಳಿಯುವುದು ॥ 2 ॥

### ಭಾಮಿನಿ

ಭಳಿರೆ ಬಡನೃಪ ಕೆರೆಯ ಮತ್ಸ್ಯವು । ಬಲೆಗೆ ಸಿಲುಕಿದೆ ಬಿಡಿಸೆ ಬರುವರ । ಛಲವ ನೋಳ್ಪೆವು ಕೈತಡೆವರಾರೆನುತಲಬ್ಬರಿಸಿ ॥ ಘಳಿಲನರಸನ ಕರವ ಕಟ್ಟುತ । ಎಳೆದು ತರುತಿರೆ ಇರಲಿಕಿತ್ತಲು । ಲಲನೆಯನು ಕಂಡಸುರ ಮನ್ಮಥನೆಸೆದ ಸುಮನಶರಕೆ ॥ 1 ॥

ತನುವನೊಡ್ಡುತ ಹಲವ ಯೋಚಿಸಿ । ಮನದ ಕನಸಿನೊಳಗೆ ವಿಹರಿಸುತ । ವನಜ ನೇತ್ರೆಯ ನುಡಿಸಿದನು ಮೃದು ಮಧುರ ವಚನದಲಿ ॥ ಅರ್ಥ ॥

### ಜಂಜೂಟಿ ರೂಪಕತಾಳ

ಕದನಕಿಂತು ಮಲೆತ ತುಂಬಿದೆದೆಯ ಕೋಮಲೆ । ಪದುಮನಯನೆ ಚಂದ್ರವದನೆ ನಾಮವೇನೆಲೆ ॥ ಬದಿಗೆಯೆಸೆಯೆ ಕೈದುಗಳನು ಮದುವೆಯಾಗುವೆ । ಮದನವೈರಿಯಾಣೆ ನಿನಗೆ ಮುದವ ನೀಡುವೆ ॥ 1 ॥

### ವಸಂತತೋಡಿ ಆದಿತಾಳ

ಎಂಥ ಧೈರ್ಯವೊ ನಿನಗೆ । ದೇಹದ ಕೊಬ್ಬು । ಇಂತು ನುಡಿಸಿತೊ ಹೇಗೆ ॥ ಪಂಥದಿ ಗೆಲುವಹ ಸೊಕ್ಕಿದು ನಡೆಯದು । ನಿಂತರೆದೋರುವೆನಂತಕನರಮನೆಯತ್ತ_ಈ । ಹೊತ್ತ ॥_ನಡೆ । ಯತ್ತ_ಬದುಕಿಕೊ । ಮತ್ತ ॥ 1 ॥ ದನಗಳ ಹಿಡಿಯುವುದು । ಮೇಲೆಮ್ಮೆಯ । ಜನಗಳ ಬಡಿಯುವುದು ॥ ಘನತೆಯ ಕಾರ್ಯವೆ ವೈರವು ಯಾತಕೆ । ರಣವನು ನೀಗುತ ಗೋವ್ಗಳನೆಲ್ಲವ । ನೀಡ_ಓ । ಮೂಢ_ಧುರ । ಬೇಡ_ಜೀವಿಸಿಕೊ । ಗಾಢ ॥ 2 ॥

### ಮಟ್ಟೆತಾಳ

ಅಹಹ ನಿನ್ನ ನೀತಿ ಮಾತು । ಮಹಿಯಮೀರ್ದ ಮಲ್ಲನಲ್ಲಿ । ಕುಹರಕೊದಗು ಜಾಣತನದಿ । ಅಹಿತ ಬಯಸದೆ ॥ 1 ॥

### ಭೈರವಿ ಏಕತಾಳ

ಸಲೆ ಪಂಥದ ನುಡಿ ಕೇಳು । ನೀ । ನೆಲೆಯನು ಹುಡುಕಿಕೊ ಏಳೂ ॥ ಕಲಹದಿ ನಿನ್ನಯ ಮದವ । ಬಿಡ । ದಿಳಿಸುತ ಕಡಿವೆನು ಶಿರವ ॥ 1 ॥

### ಕೇದಾರಗೌಳ ಝಂಪೆತಾಳ

ತೊಟ್ಟಿಹೆನೆ ಬಳೆಯ ಕರದಿ । ಸೀರೆಯನು । ಉಟ್ಟಿಹೆನೆ ನಿನ್ನ ತೆರದಿ ॥ ಬೆಟ್ಟದೊಡೆಯನು ನೋಡಲಿ । ಯಮನಗರ । ಕಟ್ಟುವುದ ಕೊಂಡಾಡಲಿ ॥ 1 ॥

### ಮಾರವಿ ಏಕತಾಳ

ವನಿತೆಯ ಕೈಚಳಕವ ಕಾಣುತ ಫಣಿ । ದನುಜನು ತಾ ಹೆದರಿ ॥ ರಣ ಬಿಟ್ಟೋಡಲ್ಕಿಳಿದನು ಪಶ್ಚಿಮ । ವನಧಿಯ ಕುಮುದಾರಿ ॥ 1 ॥ ನಿಜ ಪುರಿಗಭಿಮುಖವಾದಳು ವರ ಭೂ । ಭುಜರೊಳು ಹಿರಿಯನಿಗೆ ॥ ವಿಜಯದ ಸಂತಸವರುಹುವ ತುಡಿತದಿ । ಗಜಗಮನೆಯು ಬೇಗ ॥ 2 ॥ ಆ ಕ್ಷಿತಿ ಪಾಲನ ಕಟ್ಟುತಲೆಳೆತಹ । ರಾಕ್ಷಸ ಸೇವಕರ ॥ ವೀಕ್ಷಿಸಿ ತಡೆದಳು ಭೂಪನ ರಕ್ಷಣೆ । ದೀಕ್ಷೆಯ ಹೊಣೆಯೊಳಗೆ ॥ 3 ॥ ಅಧಮರೆ ನಿಲ್ಲಿರಿ ಸಾಹಸ ನೋಡುವೆ । ಕದನದ ರೀತಿಯನು ॥ ಸದನವ ಹೊಕ್ಕಿಹ ಕ್ರಮವನು ಮೆಚ್ಚನು । ಮದನಾರಿಯು ತಾನು ॥ 4 ॥

## ಕೇದಾರಗೌಳ ಝಂಪೆತಾಳ

ಮುಕ್ಕಣ್ಣ ಮೆಚ್ಚುವಂತೆ । ಜನಪನನು । ಲೆಕ್ಕಿಸದೆ ಗೆಲ್ದೆ ಮುಂತೆ ॥ ಸೊಕ್ಕಿದಾ ಮಾತುಗಳನು । ಆಡೆ ಕರ । ವಿಕ್ಕುತೆಳೆದೊಯ್ಯದಿರೆನು ॥ 1 ॥

ವಚನ:– ಘನತರ ಸಮರ ಸಂಘಟಿಸೆ, ಹಿಂದಿನಿಂದ್ಯೆತಂದ ಮಾಯಾವಿ ಫಣಿದನುಜ, ವಿಶ್ವಲೆಯ ಎರಡೂ ಕಾಲ್ಗಳನ್ನು ಕತ್ತರಿಸಿ ಹಂಗಿಸುವ ಪರಿಯನೊರೆವೆ.............

## ಆರ್ಯಸವಾಯಿ ಏಕತಾಳ

ಎಲೆಎಲೆ ವನಿತೆಯೆ ಬಲುಮೆಯ ನುಡಿಗಳ । ಗಳಹುವುದಿಂದಿಗದೇನಾಯ್ತು ॥ ಛಲಗಳ ಕೆಣಕಿದೆ । ನಿಲದಲೆ ಕಾಲ್ಗಳ । ಬಲದೊಳಗೀಗಲೆ ಕಡಿದಾಯ್ತು ॥ 1 ॥ ರಾಜನನೊಯ್ವೆ ವಿ । ರಾಜಿಪ ನಗರಕೆ । ಸಾಜದಿ ತಡೆಯುವ ಭಟರಿಹರೆ ॥ ರಾಜೀವಾಂಬಕಿ । ಓಜೆಯ ಹ್ರಾಸಕೆ । ಕೂಜಿತವಿದು ಬಲು ವಿಫಲವುರೆ ॥ 2 ॥

## ದ್ವಿಪದಿ

ದುರುಳನೀ ಪರಿಯಾಗಿ ಹಂಗಿಸುತ ತೆರಳೆ । ಧರಣಿಪನನೆಳೆದೊಯ್ಯೆ ವೀಕ್ಷಿಸಿದ ತರಳೆ ॥ 1 ॥ ಮಾಂಸ ರಕ್ತದಿ ಹರಿವ ಹೊಳೆಯೊಳಾಗುರುಳಿ । ಹಿಂಸೆಯನುಭವಿಸುವಳು ಅಂಗನೆಯು ಹೊರಳಿ ॥ 2 ॥ ನೋವಿನೊಳು ಅಳುವಪರಿ ಒರೆಯಲೇನದರ । ಆ ವನಿತೆ ಬವಣೆಯೊಳಗಿರುವಂಥ ವಿವರ ॥ 3 ॥

## ನೀಲಾಂಬರಿ ರೂಪಕತಾಳ

ಶಿವಶಿವ ನಾ ಮೈ ಮರೆತಿರೆ । ಸವರಿದನೆನ್ನಯ ಕಾಲ್ಗಳ । ತವಕದೊಳಾ ದುರುಳನು ಕೈ । ತವದಲಿ ತಾನಿಂದು ॥ 1 ॥ ಸುತ್ತುತಲಿದೆ ಶಿರ ಕಂಗಳಿ । ಗತ್ತಲೆಯಾವರಿಸಲು ಬಲ । ವತ್ತರ ನೋವಿದು ಚರಣಕೆ । ಚಿತ್ತದಿ ಭ್ರಮೆಗೊಂಡೆ ॥ 2 ॥ ನಿತ್ಯದಿ ಸಲಹಿದ ದೊರೆಯನು । ಮಿಥ್ಯದಿ ಕಟ್ಟೊಯ್ಯುತಲಿರೆ । ವ್ಯರ್ಥದೊಳೀಕ್ಷಿಸುತಿಹೆ ನಾ । ಸತ್ಯಕೆ ಜಯವಿಲ್ಲ ॥ 3 ॥ ಯಾರಿಗೆ ಪೇಳುವುದಿದ ಪರಿ । ಹಾರವ ಗೈವರಗಾಣೆನು । ಕಾರಡವಿಯ ರೋದನವಿದು । ತೋರೆಲೊ ಪಥ ದೇವ ॥ 4 ॥

## ಕಂದ

ಎಂದೀ ಪರಿಯಿಂ ಚಿಂತಿಸ । ಲಂದಾಶ್ರಮದೊಳು ಅಗಸ್ತ್ಯಮುನಿಯರಿತಿದನುಂ ॥ ಬಂದನು ಬೇಗದಿ ಸಂಕಟ । ದಿಂದಿಹಳಲ್ಲಿಗೆ ವಿಚಾರ ತಿಳಿವ ತವಕದಿಂ ॥ 1 ॥

## ಘಂಟಾರವ ಅಷ್ಟತಾಳ

ಮುಗ್ಧೆ ವಿಶ್ವಲೆ ಯುದ್ಧದ ಕಣದಲ್ಲಿ । ಕ್ರುದ್ಧಳಾದರೆ ನಿನ್ನೆದುರಿನಿಂ । ಗೆದ್ದೆನೆಂಬರ ಕಾಣೆನು ॥ 1 ॥ ನಾರೀ ನಿನ್ನಯ ಜೀವಿತಕೀಪರಿ । ಕ್ರೂರ ಕೃತ್ಯವ ಗೈದ ದುರುಳರ । ದಾರು ವಿವರವ ಪೇಳೆನೆ ॥ 2 ॥

## ವರಾಳಿ ಏಕತಾಳ

ಪೇಳಲೇನನಯ್ಯೋ ಮುನಿಯೆ । ಕೇಳಿ ನೀವು । ನಾ । ಬಾಳ ಕಷ್ಟಗಳಲಿ ನೊಂದೆ । ಕೇಳಿ ನೀವು ॥ ಗೋಳಹೊಯ್ದ ದುರುಳನಿಂದು । ಕೇಳಿನೀವು । ಪಾ । ತಾಳದಧಿಪ ಫಣಿಯು ಬಂದು । ಕೇಳಿನೀವು ॥ 1 ॥ ಗೋವುಗಳನು ಸೆರೆಯ ಹಿಡಿದ । ಕಾಡುದೈತ್ಯ । ಅದರ । ಸೋವ ತಿಳಿದು ಧುರಕೆ ಪೋದೆ । ನಿದುವೆ ಸತ್ಯ ॥ ಆ ವಿಧಾನ ಪೇಳಲೆಂತು । ಘೋರಕೃತ್ಯ । ಮೋಸ । ಭಾವದಿಂ ದೊರೆಯ ಬಂಧಿಸಿದ । ನವನ ಭೃತ್ಯ ॥ 2 ॥ ಬಿಡಿಸಲೆಂದು ಛಲದಿ ಪೋದೆ । ಗುರುವರೇಣ್ಯ । ದುರುಳ । ದಡಿಗ ತಿಳಿಯದಂತೆ ಬಂದು । ಗುರುವರೇಣ್ಯ ॥ ಕಡಿದನೆನ್ನ ಕಾಲ್ಗಳನ್ನು । ಗುರುವರೇಣ್ಯ । ನಮ್ಮ । ಪೊಡವಿ ಪತಿಯನೊಯ್ದನೆಳೆದು । ಗುರುವರೇಣ್ಯ ॥ 3 ॥ ಪರಿಹರವಿದಕಿಲ್ಲವೇನು । ಗುರುವರೇಣ್ಯ । ದೊರೆಯ । ಸೆರೆಯ ಬಿಡಿಸಲೆಂತುಪೇಳು । ಗುರುವರೇಣ್ಯ ॥ ಚರಣಹೀನೆ ಬದುಕಲೆಂತು । ಗುರುವರೇಣ್ಯ । ವಿಧಿಯು । ಪರಿಪರಿಯಲಿ ಹೊಂಚಬಹುದೆ । ಗುರುವರೇಣ್ಯ ॥ 4 ॥

## ಸಾಂಗತ್ಯ ರೂಪಕತಾಳ

ಶಿಷ್ಟ ಜನರ ತ್ಯಾಗ ದಿಟ್ಟ ಸ್ಯೈರಣೆ ನೆಲೆ । ಗಟ್ಟಾಗಿಹುದು ಕಾಂಬೀ ಜಗಕೆ ॥ ದೌಷ್ಟ್ಯದಿಂ ಗೈವಟ್ಟಹಾಸಕ್ಕೆ ಕೊನೆಯುಂಟು । ಕಷ್ಟನಷ್ಟಗಳೆಲ್ಲವನ್ನು ॥ 1 ॥ ಮಗಳೆ ಸ್ಯೈರಿಸು ಬೇಗ ದುಗುಡವೆಲ್ಲವ ನೀಗಿ । ವಿಗಡನ ವಧೆಯಾಗುವಂತೆ ॥ ಸೊಗಸಿನೋಳ್ಸುರ ವೈದ್ಯರ್ತಪ ಗೈದು ಧರ್ಮವ । ಜಗದಲಿ ಸ್ಥಿರಗೊಳಿಸುವೆನು ॥ 2 ॥

## ವಾರ್ಧಿಕ

ಸಾಕಲ್ಯ ಧೈರ್ಯವಂ ದುಃಖಿತೆಗೊರೆದ ಮುನಿಪ । ಆಕೆಯನು ಕಾಯ್ವಂತೆ ಸುಭಟರಂ ನಿಯಮಿಸುತ । ಏಕಾಂತ ಪರನಾಗಿ ಅಶ್ವಿನೀಕುವರರಂ ನುತಿಸಿದನು ತವಕಿಸುತಲಿ ॥ ಶೋಕದೊಳು ತೊಳಲುತಿಹ ಸಜ್ಜನರನುದ್ಧರಿಸಿ । ಲೋಕವನು ಸುವಿವೇಕ ಸಂಪ್ರೀತಿಯಿಂ ಪೊರೆವ । ವೈಕರ್ತನರನೊಲಿಸಿಕೊಂಬುದಕೆ ಸುಸ್ಥಳವಿದೆಂದು ನಿಶ್ಚೈಸುತ್ತಲಿ ॥ 1 ॥

## ಭಾಮಿನಿ

ಉರಿಗಳೈದರ ಮಧ್ಯದಲ್ಲಿಯೆ । ಚರಣವೊಂದರ ಮೇಲೆ ನಿಲ್ಲುತ । ಭರಿತ ಭಕ್ತಿಯ ಭಾವದಿಂದಲಿ ಸುರಚಿಕಿತ್ಸಕರ ॥ ಕುರಿತು ಮುನಿವರ ತಪವ ಗೈಯಲು । ಸರುವ ಜೀವರ ಹಿತವೆ ಲಕ್ಷ್ಯದ । ವರವ ಪಾಲಿಪ ದಸ್ರ–ನಾಸತ್ಯರು ಕರುಣೆಯಿಂದ ॥ 1 ॥

## ಪಂತುವರಾಳಿ ಆದಿತಾಳ

ಹೊಳೆಹೊಳೆವ ಪ್ರಕಾಶದಲಿ । ಆಶ್ವಿನೇಯರು । ಇಳಿದರು ಶಾಂತ ತೇಜದಲಿ ॥ ನಳನಳಿಸುವ ದ್ಯುತಿ ಬೆಳಕಿನೊಳಾಕ್ಷಣ । ಇಳೆಯ ಜೀವರೇಳಿಗೆಯುದ್ದೇಶವು । ನಲಿವಲಿ ಮೂರ್ತೀ ಭವಿಸಿದ ತೆರದಲಿ ॥ 1 ॥

## ಬಿಲಹರಿ ಅಷ್ಟತಾಳ

ಮೆಚ್ಚಿದೆವೈ ನಾವಗಸ್ತ್ಯ । ನಿನ್ನೀ । ಅಚ್ಚಳಿಯದ ಶ್ರದ್ಧಾ ಭಕ್ತಿ ಪ್ರಶಸ್ತ ॥ ಸಚ್ಚರಿತನೆ ತಪವೇಕೆ । ನೀ । ನುಚ್ಚರಿಸೈ ದಯಪಾಲಿಪೆವದಕೆ ॥ 1 ॥

## ಕಾಂಬೋಧಿ ಝಂಪೆತಾಳ

ಜಯವಶ್ವಿನೀ ಸುತರೆ । ಜಯ ಭಾಸ್ಕರಾತ್ಮಜರೆ । ದಯವಿರಿಸಿರೆಮ್ಮ ಮೇಲ್ ನಿರತ ॥ ಭಯವಿರದೆಮಗೆ ನವಾ । ಶಯವು ಸ್ಫುರಿಸಿ ಬಾಳು । ವೆಯು ನಡೆವ ತೆರ ಕಾಯಬೇಕು ॥ 1 ॥ ಪಾತಾಳದಧಿಪ ಫಣಿ । ಭೂತಳಕೆ ಬರುತಿಂದು । ಮಾತೆಯಹ ಗೋವ್ಗಳನು ಪಿಡಿದ ॥ ಕಾತರಿಸಿ ರಣಕೊದಗೆ । ನೀತಿಯನು ತೊರೆದು ಜನ । ನಾಥನನು ಬಂಧಿಸಿದನವನು ॥ 2 ॥

## ಸಾಂಗತ್ಯ ರೂಪಕತಾಳ

ತಡೆದ ಸೇನಾನಿಯ ಕಾಲ್ಗಳ ಕಡಿದನು । ದಡಿಗ ದೈತ್ಯನು ವಂಚಿಸುತ್ತ ॥ ನಡೆವಂತಾಕೆಯನು ಗೈದರೆ ಸತ್ಯ ಧರ್ಮವ । ದೃಢದಲಿ ಕಾಪಿಟ್ಟಂತಹುದು ॥ 1 ॥

## ಸುರುಟಿ ಏಕತಾಳ

ಮುನಿಪನೆ ಕೇಳ್ನೀನು । ತ್ಯಜಿಸೈ । ಘನ ವ್ಯಸನಂಗಳನು ॥ ವನಿತೆಗೆ ಚರಣವ । ಚಣದಲಿ ತೊಡಿಸಲು । ಅನುವರಕೊದಗುತ । ದನುಜನ ವಧಿಸಲಿ ॥ 1 ॥

## ದ್ವಿಪದಿ

ಇತ್ತಿನಿತು ಭರವಸೆಯ ಬಂದು ನೋಡಿದರು । ಕತ್ತರಿಸಿದಾ ಕಾಲುಗಳ ದುಃಸ್ಥಿತಿಯನು ॥ 1 ॥

## ನವರೋಜು ಏಕತಾಳ

ಅರೆದರು ತಾವ್ ಅರಿಷಿಣವ । ಮೇಣ್ । ಬೆರೆಸಿದರೂ ಕಹಿಬೇವ ॥ ವಿರಚಿಸುತೌಷಧ ಕೊಳೆಯದ ತೆರದಲಿ । ಒರೆಸಿದರಾಕ್ಷಣ ನಾರಿಯ ಚರಣಕೆ ॥ 1 ॥ ತಕ್ಕೋಪಾಯವನೀಗ । ಕೃತ । ಉಕ್ಕಿನ ಕಾಲನು ಬೇಗ ॥ ಅಕ್ಕರೆಯಿಂದಲಿ ಜೋಡಿಸಲಾಕ್ಷಣ । ಬೆಕ್ಕಸ ಬೆರಗಾಗೆಲ್ಲರು ಕಂಡರು ॥ 2 ॥

## ಗೌಳ ಆದಿತಾಳ

ಧನ್ಯಳಾದೆನು ನಾನಶ್ವಿನಿಯರ ಕಂಡು । ಉನ್ನತೋನ್ನತ ವೈದ್ಯ ವೈಭವವುಂಡು ॥ ಪ ॥ ಕಳಕೊಂಡು ಕಾಲ್ಗಳ ಉಂಡೆನು ನೋವ್ಗಳ ॥ ತಳಮಳ ದೂರಾಯ್ತು ತವಕೃಪೆಯಾಯ್ತು ॥ 1 ॥

## ಮಧ್ಯಮಾವತಿ ತ್ರಿವುಡೆತಾಳ

ಈಶ್ವರನು ದಯೆದೋರಿದನು ಓ । ವಿಶ್ವಲೆಯೆ ಗುಣ ಹೊಂದಿದೆ । ಅಶ್ವವೇರುತ ತರಿದು ದನುಜನ । ವಿಶ್ವಪತಿ ಸೆರೆ ಮೋಚಿಸು ॥ ವಿಶ್ವಸನದಿ ॥ 1 ॥

(ನವರೋಜು ಏಕತಾಳ:– ಈಶ್ವರನಾ ಕರುಣೆಯಿದೆ । ಓ । ವಿಶ್ವಲೆ ನೀ ಸರಿಯಾದೆ ॥ ಅಶ್ವವನೇರುತ ವಧಿಸುತ ದನುಜನ । ವಿಶ್ವಾಸದಿ ನರಪತಿಯನು ಬಿಡಿಸೌ॥ 1 ॥)

## ಸೌರಾಷ್ಟ್ರ ತ್ರಿವುಡೆತಾಳ

ತರಳೆ ವಿಶ್ವಲೆ ಮುನಿಯ ಕಳುಹಿಸಿ । ಸರುವ ಜನಹಿತವಪ್ಪ ಮಾತನು । ಬರೆದಿರಿಸಿದಾ ಸುರವರರು ತಾವ್ । ಮರೆಯಹೊಂದೆ ॥ 1 ॥

## ಭೈರವಿ ಅಷ್ಟತಾಳ

ನಿಲ್ಲೆಲೋ ಖೂಳಾಧಮ । ಪೃಥ್ವೀಶನ । ಎಲ್ಲಿಗೊಯ್ಯುವೆಯಮಮ ॥ ತಲ್ಲಣ ಗೊಳುತಿಹೆ ಖಿಲ್ಲನೆ ನಿನ್ನನು । ಕೊಲ್ಲದೆ ವಿರಮಿಸೆನು ॥ 1 ॥ ನಡೆಯದಂದದೊಳು ನಿನ್ನ । ಕಾಲುಗಳನ್ನು । ಕಡಿದೊಗೆದಿಹೆನು ಮುನ್ನ ॥ ಬೆಡಗಿಯೆ ಗರ್ವವ ಬಿಡುಬಿಡು ರಕ್ಷಣೆ । ಯೊಡಗೊಂಡರೀಯುವೆನು ॥ 2 ॥

## ಪಂತುವರಾಳಿ ಮಟ್ಟೆತಾಳ

ಕತ್ತಿಧಾರೆಯಿಂದ ನಿನಗೆ । ಮೃತ್ಯುಧಾರೆ ಯೆರೆವೆ ಬಾರೊ । ಸತ್ಯವಿರಲು ವಿಜಯವಿಂದು । ಎತ್ತ ಪೋಪುದು ॥ ಪೃಥ್ವಿಯಲ್ಲಿ ನಿನ್ನ ತೆರದ । ಧೂರ್ತರನ್ನು ಕೊಲ್ಲಲೆಂದು । ಸ್ತುತ್ಯ ಸುರರ ರಕ್ಷೆಯಿಹುದು । ನಿತ್ಯ ಕೇಳೆಲಾ ॥ 1 ॥

## ಭೈರವಿ ಏಕತಾಳ

ಅನುಭವಿಸಿಹೆ ನೀ ಮೊದಲೆ । ರಣ । ಕಣದಲಿ ಛಲ ಬಿಡು ಮರುಳೆ ॥ ಹಣೆಯಲಿ ಬರೆದಿಹುದದನು । ಕೂ । ರ್ಗಣೆಯಿಂದಲಿ ತಿಳಿಸುವೆನು ॥ 1 ॥

## ಭಾಮಿನಿ

ದನುಜನಿನಜನ ಮನೆಗೆ ತೆರಳಲು । ಅನಿಮಿಷರು ಸುಮವರ್ಷಗರೆದರು । ವನಿತೆ ಸಹ ಜನಪಾಲನೊಡನಾ ಮುನಿಯು ಪೊರಮಟ್ಟ ॥ ಇನಕುಮಾರರ ಕಾಂಬ ತವಕದಿ । ಸನಿಹ ಬಂದರವರಿರದಿರೆ ಒ । ಕ್ಕಣೆಯನೊಂದನು ಕಂಡು ವಾಚಿಸಿದರು ಸನುಮತದಲಿ ॥ 1 ॥

[ನಾರ್ಥಾರ್ಥಂ ನಾಪಿ ಕಾಮಾರ್ಥಂ ಅಥ ಭೂತ ದಯಾಂಪ್ರತಿ]

## ಮಧ್ಯಮಾವತಿ ತ್ರಿವುಡೆತಾಳ

ಅರ್ಥ ಕಾಮಗಳಾದಿಯಾಮಿಷ । ಹತ್ತು ಹಲವನು ಮೀರುತ ॥ ನಿತ್ಯ ಪ್ರಾಣೀ ದಯೆಯು ವೈದ್ಯರ । ವೃತ್ತಿಯಾಗಲಿ ಮಾಜದೆ ॥ ಸತ್ಯ ಜಗದಿ ॥ 1 ॥ ಮುನಿಪನೆಂದನು ಪೊಡವಿ ಪಾಲನೆ । ವಿನುತ ಬುಧರಿಗೆ ನೊಂದಿಹ । ಮನುಜರೇಳ್ಗೆಗೆ ತ್ಯಾಗ ಭಾವದಿ । ಧನಕನಕಗಳನೆಲ್ಲವ ॥ ದಾನಮಾಡು ॥ 2 ॥

### ಭಾಮಿನಿ

ಶ್ರೇಷ್ಠ ವೇದದ ವೈದ್ಯ ಸೂಕ್ತದಿ । ಓಷ್ಠ್ಯ ಕತೆಯನು ಯಕ್ಷಗಾನದಿ । ಇಷ್ಟಿಕಾಪುರ ಮಹಬಲೇಶ್ವರ ಭಟ್ಟ ರಚಿಸಿದೆನು ॥ ಬಟ್ಟಲಲ್ಲಿನ ಹಾಲು ನೀರನು । ಸ್ಪಷ್ಟವಾಗಿಯೆ ಹಂಸವದ ಪಡೆ । ವಷ್ಟು ಶ್ರದ್ಧೆಯದೋರಿ ಕನ್ನಡ ಜನನಿಯಾತ್ಮಜರೆ ॥ 1 ॥

### ಬಿಲಹರಿ ಏಕತಾಳ

ಮಂಗಲ ಗೌರೀ ತನಯನಿಗೆ। ಜಯ । ಮಂಗಲ ಶ್ರೀ ರಾಮೇಶ್ವರಗೆ ॥ ಮಂಗಲವಶ್ವಿನಿ ಕುವರರ ಸಂಗಡ । ಶಂಕರ ಭಗವತ್ಪಾದರಿಗೆ ॥ ಮಂಗಲಂ ಜಯ । ಮಂಗಲಂ । ಶುಭ ಮಂಗಲಂ ॥ 1 ॥

**॥ ಭದ್ರಂ ಶುಭಂ ಮಂಗಲಂ ॥**

॥ಶ್ರೀ॥

# ಗೋಮಹಿಮೆ

## (ರಾಜಾ ದಿಲೀಪ) ಕನ್ನಡ ಯಕ್ಷಗಾನ

## ಶ್ರೀ ಗಣೇಶಾಯ ನಮಃ

### ಸುರುಟಿ ಏಕತಾಳ

ಲಂಬೋದರ ಕಾಯೋ । ಹೃನ್ಮನ । ತುಂಬುವ ವರವೀಯೋ ॥ ಶಂಭು ಕುಮಾರಕ ಕುಂಭಿನೀಶ ಹೇ । ರಂಭ ಗಜಾನನ ಇಂಬೀವುತ ಪೊರೆ ॥ 1 ॥ ಗೋ ಮಹಿಮೆಯನೊರೆವೆ । ಕನ್ನಡ । ಭೂಮಿಯ ಕಲೆ ಕ್ರಮದೆ ॥ ಶ್ರೀ ಮಾಧವ ವಿಧಿ ವ್ಯೋಮಕೇಶರು । ದ್ಧಾಮದಿ ರಕ್ಷಿಸಿ ಕಾಮಿತವೀಯಲಿ ॥ 2 ॥

### ಸೌರಾಷ್ಟ್ರ ತ್ರಿವುಡೆತಾಳ

ಸ್ವರ್ಗ ಭುವಿ ಪಾತಾಳವೆಂಬೀ । ಅಗ್ಗಳದ ಲೋಕಂಗಳೆಲ್ಲವ । ಭರ್ಗ ಹರಿ ದಯೆಯಿಂದ ಪಾಲಿಪೆ । ಹಿಗ್ಗಿನಿಂದ ॥ 1 ॥ ಎನಗೆ ದಾಯಾದಿಗಳು ದನುಜರು । ರಣ ಮುಖದಿ ನಾಕವನು ಪಡೆಯುವ । ಮನವ ಹೊಂದುತ ಬಂದು ಸಂದರು । ದಣಿಯುತೆಲ್ಲ ॥ 2 ॥ ಇಂದಿಗಾರೈತಂದುದಿಲ್ಲವು । ಹೊಂದಿಹೆವು ಬಲು ತೋಷವಮರರೆ । ಬಂಧುರದ ಸುವಿಲಾಸಕೆಡೆಯಿದೆ । ಮಂದಿರದಲಿ ॥ 3 ॥

ಕಾಂಬೋಧಿ ಝುಂಪೆತಾಳ

ಖಳ ಕುಲೋದ್ಭವನಾದ ಜಂಘಾಸುರೆಂಬವನು । ಬಲುಹಿನಿಂದಲಿ ಮೆರೆದನಿರದೆ ॥ ಸಲೆ ಬಂಧು ಬಾಂಧವರ ಬಳಸುತ್ತಲೊರೆಯುತಿಹ । ಬಲಿತ ಮನದಾಲೋಚನೆಯನು ॥ 1 ॥ ಪಡೆದ ವರವನು ಬಳಸಿ ಲೋಕ ಮೂರಕೆ ನಾನು । ಒಡೆಯನಾಗುವೆನಿಂದಿನಿಂದ ॥ ಒಡನೆ ಸ್ವರ್ಗಕ್ಕೇರಿ ಗಾರುಗೆಡಿಸುವೆನಮರ । ಬಡ ಬಿಡೌಜಾದಿಗಳನೆಲ್ಲ ॥ 2 ॥ ಬಲುಭಟರ ನೆರವಿಯನು ಕೂಡುತ್ತ ಪೊರಟನುರೆ । ಛಲದಂಕನಿಹೆ ತಾನೆನುತಲಿ ॥ ಖಳರ ಸಂದೋಹವನು ಕಂಡು ಕದಗಾಹಿಗಳು । ನಿಲಿಸುತ್ತಲವರ ನುಡಿಸಿದರು ॥ 3 ॥

ಧನ್ಯಾಸಿ ಏಕತಾಳ

ಬುದ್ಧಿಗೇಡಿಗಳೆ ಹದ್ದ ಮೀರಿ ನಡೆ । ದಿದ್ದು ಸಾಕು ನೀವ್ ನಿಲ್ಲಿರಿ ॥ ಇದ್ದುದನ್ನು ತೊರೆದೆದ್ದು ಬಂದಿರೇಂ । ಸದ್ದ ಮಾಡದಲೆ ನಡೆಯಿರಿ ॥ 1 ॥

ಪಂಚಾಗತಿ ಮಟ್ಟೆತಾಳ

ಹೆಚ್ಚು ಮಾತು ಬೇಡ ಬದುಕಿ । ನಿಚ್ಚೆಯಿರ್ದೊಡಿಂದ್ರ ರಣವ । ತೀರ್ಚಿ ಶರಣು ಬರಲು ಪೊರೆವೆ । ಉಚ್ಚತನದಲಿ ॥ 1 ॥

ಭಾಮಿನಿ

ಎಚ್ಚರಿಸಿ ಮಾತೊರೆಯೆ ರಕ್ಕಸ । ಬೆಚ್ಚುತಾಕ್ಷಣ ದೂತರೆಲ್ಲರು । ಮಚ್ಚರಿಯ ಸಂಗಾತ ತಮಗೇಕೆನುತಲೋಡಿದರು ॥ ಉಚ್ಚತಮಆಸನವ ನೇರುತ । ಅಚ್ಚರಸಿಯರ ನಾಟ್ಯ ಮೇಳದಿ । ಅಚ್ಚ ಪೊಸದು ವಿಲಾಸದಿಂದಿಹ ಸುರಪಗುಸುರಿದರು ॥ 1 ॥

## ಮುಖಾರಿ ಏಕತಾಳ

ಚರಣಕ್ಕೆ ಶರಣು ಶರಣುಜೀಯ । ಎಮ್ಮೆಲ್ಲರ ಒಡೆಯ । ಚರಣಕ್ಕೆ ಶರಣು ಶರಣುಜೀಯ ॥ ಪ ॥ ಬಾಗಿಲೊಳಗೆ ವೃತ್ತಿನಿರತ । ರಾಗಿ ನಾವು ನಿಂತಿರಲ್ಕೆ । ತೂಗುತಲಾಯುಧ । ಕೂಗುತಲೈತಹ । ಬೀಗಿದ ದಾನವ । ಲೋಗರ ಕಂಡೆವು ॥ 1 ॥ ಬಿಡದೆ ತಡೆದರೊಡನೆ ಘರ್ಜಿ । ಸಿಡುತಲಡಿಯ ಮುಂದಕ್ಕೈದು ॥ ನುಡಿದನು ದೈತ್ಯನು । ಒಡೆಯನೆ ನಿನ್ನೀ । ದೃಢತರ ಪದವಿಯ । ಬಿಡುವ ಸಮಯ ಗಡ ॥ 2 ॥

## ಮಾರವಿ ಏಕತಾಳ

ಮಾತನು ಕೇಳುತ ಖತಿಯಿಂದತಿ ಪುರು । ಹೂತನು ಹೂಂಕರಿಸಿ ॥ ಜಾತವೇದ ಮುಖ್ಯರ ಕರೆದೆಂದನು । ದೈತ್ಯೇಯರ ಪ್ರಾಣ ॥ 1 ॥ ಎಮ್ಮಯ ಮುಷ್ಟಿಯೊಳಿಹುದೈ ದಿಟ । ಘಮ್ಮನೆ ನಿಲ್ಲಿಪುದು ॥ ಸಮ್ಮತಿಸುತ ಬೆನ್ನಿಗೆ ಬಹೆ ಧಾಳಿಯ । ಒಮ್ಮೆಗೆ ಗೈಯುವುದು ॥ 2 ॥

## ಭೈರವಿ ಅಷ್ಟತಾಳ

ಏನಯ್ಯ ದಾನವನೆ । ಸ್ವರ್ಗವನೇರಿ । ಹಾನಿಯ ಗೈದವನೆ ॥ ಹೀನನಾಗಿಹ ನಿನ್ನ । ಗೋಣನವುಕಿ ರವಿ । ಸೂನುವಿಂಗಿತ್ತಪೆನೆ ॥ 1 ॥

## ಸಾರಂಗ ಅಷ್ಟತಾಳ

ಸುರರಾಜನೇನೋನೀನು । ವಂಚಿಸಿ ಎಮ್ಮ । ವರಪೀಠವೇರ್ದವನು ॥ ಹಿರಿಯವ್ವೆ ತರಳರು ಪರಮ ಬಲಿಷ್ಠರಾವ್ । ಮರೆತು ನಡೆವೆಯೇನು ॥ ಶಿಕ್ಷಿಪೆ ನಾನು ॥ 1 ॥

## ಭೈರವಿ ಏಕತಾಳ

ತಲೆತಿರುಕನೆ ನೀ ದಿಟವು । ಕ । ತ್ತಲೆಯಪ್ಪಿದ ಬರಿ ಮದವು ॥ ಗಳ ಕತ್ತರಿಪೆನು ಬಿಡದೆ । ಕೊಳು । ಗುಳಮುಖದಲಿ ಈ ಕ್ಷಣದೆ ॥ 1 ॥ ಆಡುವ ನುಡಿಯಿಂದೇನು । ರಣ । ಹೇಡಿ ಪಲಾಯನಿ ನೀನು ॥ ಮಾಡುವ ಬಾರೈ ಯುದ್ಧ । ಶಿರ । ವೀಡಾಡುವೆನಿದು ಬದ್ಧ ॥ 2 ॥

## ಭೈರವಿ ಝಂಪೆತಾಳ

ಖಾತಿಯೊಳು ಹೊಯ್ದಾಡೆ । ಯಾತುಧಾನಗೆ ಗೆಲುವು । ಸಾತಿಶಯದಿಂ ದೊರೆಯೆ । ಕಾತರಿಸಿ ಸುರರು ॥ 1 ॥ ತಳಬಿಟ್ಟು ತಲೆಮರೆಸೆ । ಖಳ ತಾನು ಬೊಬ್ಬಿರಿದು । ಸಲೆ ಪೀಠವೇರಿದನು । ಬಲು ಗರ್ವದಿಂದ ॥ 2 ॥ ಧಾವಿಸುತ ಸುರರೆಲ್ಲ । ಠಾವೊಂದ ಸೇರಿದರು । ದೇವರಾಜನು ಮರುಗಿ । ಹೇವರಿಸಿ ನುಡಿದ ॥ 3 ॥

## ವೃದ್ಧಿ ಸಾಂಗತ್ಯ

ಶಿವಶಿವ ಸಂಕಟವೆಂತೊರೆಯುವೆ ನಾನು । ಬವಣೆಯನುಣಿಸಿದ ದೈತ್ಯ ॥ ಕವಿದಂಧಕಾರದಿ ಸೆಲೆಮಿಂಚು ಕಾಂಬುದು । ಅವನೀಶನಾದ ದಿಲೀಪನೋರುವನು ॥ 1 ॥ ಮಾತಲಿ ಬಾರಯ್ಯ ಕಾರ್ಯಭಾರವ ಕೇಳು । ನೀ ತೆರಳಾ ಸಾಕೇತಕ್ಕೆ ॥ ಭೂ ತಳಾಧಿಪನಾದ ಖಟ್ವಾಂಗನನು ಕಂಡು । ಆತುರದೊಳು ಬರಹೇಳ ಬೇಕಯ್ಯ ॥ 2 ॥

## ಕುಸುಮ ಷಟ್ಪದಿ

ಆಗಲಪ್ಪಣೆ ಹೊಂದಿ । ಸಾಗಿದನು ಸಾರಥಿಯು । ವೇಗದಲಿ ಭೂಲೋಕ ಮುಖನಾಗುತ ॥ ರಾಗದಿಂ ಸಪ್ತಾಂಗ । ಯೋಗದಿಂ ವಿಭವದೊಳ । ಮೋಘದಿಂದಿಹ ದಿಲೀಪನನು ಕಂಡ ॥ 1 ॥

## ಕೇದಾರಗೌಳ ಅಷ್ಟತಾಳ

ರವಿಕುಲೋದ್ಭವನಾದ ಅಂಶುಮಂತನ ಸುತ । ಭುವನ ಪಾಲಕ ದಿಲೀಪ ॥ ಅವಗೆ ಖಟ್ವಾಂಗನೆನ್ನುವ ನಾಮಾಂತರ ಜನ । ನಿವಹವನಾಳುತಿರ್ದ ॥ 1 ॥ ಕನಕದ ಕುಸುಮಕೆ ಪರಿಮಳವೆತ್ತಂತೆ । ಘನ ಶೌರ್ಯಾನ್ವಿತ ಭೂಪನು ॥ ವಿನಯ ಶೋಭಿತನಾಗಿ ಜನಪಾಲನೆನಿಸಿದ । ದಿನಕರ ವಂಶಜಾತ ॥ 2 ॥ ದೇವ ಪುರುಷ ಧರೆಗಿಳಿಯಲು ಕಾಣುತ । ಧಾವಿಸಿ ಕರವಿಡಿದು ॥ ಭಾವಿಸುತಿತ್ತಾಸನವನುಪಚರಿಸುತ । ಈ ವಿಧ ಕೇಳಿದನು ॥ 3 ॥ ಆರು ತಾವೆಲ್ಲಿಂದ ಇಲ್ಲಿಗೈತಂದುದು । ಕಾರಣ ತಿಳುಹುವುದು ॥ ಕಾರಿಯವೆನ್ನಿಂದೇನಾಗ ಬೇಕೆಂದೀಗ । ಸಾರುವುದೀಕ್ಷಣದೆ ॥ 4 ॥

## ಬಿಲಹರಿ ಅಷ್ಟತಾಳ

ಅವಧರಿಸೈ ನೃಪ ನುಡಿಯ । ನಾ । ದಿವಿಜೇಂದ್ರ ಸಾರಥಿ ಮಾತಲಿಯಯ್ಯ ॥ ಅವಿಚಾರಿ ಜಂಘಾಖ್ಯನೆಂದೆಂಬ ರಾಕ್ಷಸ । ಭುವನತ್ರಯದಿ ಬಲು ಮದವೇರಿ ಮೆರೆವನು ॥ 1 ॥ ಅತಿಯಾಯ್ತು ಧೂರ್ತನ ಕ್ರೌರ್ಯ । ಆತ । ಕ್ಷಿತಿಮೀರಿ ದಿವಕೇರಿ ಗೈದಂಥ ಕಾರ್ಯ ॥ ಅತುಲ ಪರಾಕ್ರಮಿ ನೀನಲ್ಲಿಗೈದುತ । ಹತಿಸಿ ಲೋಕಕೆ ಶಾಂತಿಯನ್ನೀಯ ಬೇಕಯ್ಯ ॥ 2 ॥

## ಕೇದಾರಗೌಳ ಝಂಪೆತಾಳ

ಮಾತಲಿಯೆ ಎನ್ನನುವನು । ಸುರಪಾಲ । ಪ್ರೀತಿಯಲಿ ಬಯಸಿರ್ಪನು ॥ ಪೇತುಗನು ದಿವಕೇರ್ದನೆ । ಬಿಡುಚಿಂತೆ । ಘಾತಿಸುವೆ ನಾನವನನೆ ॥ 1 ॥ ಧೈರ್ಯಗೆಡ ಬೇಡಿರೆಂದು । ಪೇಳುತ್ತ । ಕಾರ್ಯಕನುವಾಗುತಂದು ॥ ಭಾರ್ಯೆಯನು ಕಾಂಬಾತುರ । ಹೊಂದಿ ಪೊರ । ಟಾರ್ಯ ಸೇರ್ದಂತಃಪುರ ॥ 2 ॥

## ಸೌರಾಷ್ಟ್ರ ತ್ರಿವುಡೆತಾಳ

ಸತಿ ಸುದಕ್ಷಿಣೆಯಂತಪುರದಲಿ । ಅತಿ ವಿನೋದದೊಳಿರಲು ತನ್ನಯ । ಪತಿಯ ಕಾಣುತ ತೋಷದಿಂ ಸ್ವಾ । ಗತಿಸುತಾಗ ॥ 1 ॥ ಚರಣಕಾನತಳಾಗಿ ಕೇಳ್ದಳು । ಭರದ ಸಿದ್ಧತೆ ಹೊಂದುತೆಲ್ಲಿಗೆ । ಪೊರಟಿಹುದ ನೀ ಕರುಣದಿಂದೊರೆ । ಎರೆಯನೆನಗೆ ॥ 2 ॥

## ಬೇಗಡೆ ರೂಪಕತಾಳ

ರಮಣಿ ಕೇಳೆ ಪೊರಟೆನಾನು ಅಮರಲೋಕಕೀಗಳು ॥ ಪ ॥ ಸುಮನಸರ್ಗೆ ಪೀಡೆಯೀವ ಕುಮತಿ ದೈತ್ಯ ಗಡಣವ ॥ ದಮನಗೈವ ಧ್ಯೇಯವಿಹುದು ಯಮನ ಪುರಕೆ ಕಳುಹುವ ॥ 1 ॥

## ಹಂಸಾನಂದಿ ತ್ರಿವುಡೆ ತಾಳ

ದೇವರಾಜನು ನಿಮ್ಮ ಅನುಪಮ । ಸೇವೆಯನು ಬಯಸಿಹನೆ ತೋಷದಿ । ತೀವಿತೆನ್ನಯ ಮನವು ಸ್ವರ್ಗಕೆ । ಧಾವಿಸುತ ದೈತ್ಯನನು ವಧಿಸಿರಿ । ಠೀವಿಯೊಳಗೆ । ತಿಲಕವ । ಭಾವಿಸಿಡುವೆ ॥ 1 ॥

## ಪಂಚಾಗತಿ ಮಟ್ಟೆತಾಳ

ಕಡು ಮದಾಂಧ ಸ್ವರ್ಗವೇರಿ । ಕೆಡೆದೆ ಸುರಪ ಮುಖ್ಯರನ್ನು । ಪೊಡವಿಪತಿ ದಿಲೀಪನೆದುರು । ಕಡೆಯ ಕಾಲವು ॥ 1 ॥ ತೋಳ ಸತ್ವದಿಂದ ಗೆಲಿದೆ । ಕಾಲಕಾಲನಾಗಿ ಮೆರೆದೆ । ಶೂಲಿ ಕರುಣೆಯಿಹುದು ನಿನಗೆ । ನಾಳೆಯಿಲ್ಲವು ॥ 2 ॥

## ಕುಸುಮ ಷಟ್ಪದಿ

ಭೂಪನಾಟೋಪಕ್ಕೆ । ಪಾಪಿ ಮರಣವನಪ್ಪೆ । ವ್ಯಾಪಿಸಿತು ಸಂತಸವು ಜಗದಗಲಕೆ ॥ ಓಪೆಯನು ನೆನೆವುತ ದಿ। ಲೀಪನುಪಕ್ರಮಿಸಿದನು । ಭೂ ಪ್ರದೇಶಾಭಿಮುಖನಾಗುತಲ್ಲಿ ॥ 1 ॥

## ಸಾಂಗತ್ಯ ರೂಪಕತಾಳ

ನಂದನದಲಿ ನಿಂದ ಸುರಧೇನು ತಾನತಿ । ನೊಂದು ನುಡಿದಳು ಈ ದೊರೆಯು ॥ ಮಂದ ಮತಿತ್ವದೊಳೆನ್ನ ನಿರ್ಲಕ್ಷಿಸಿ । ಕಂದರ ಹೊಂದದಂತಾದ ॥ 1 ॥

## ನವರೋಜು ಏಕತಾಳ

ಜಾರಿತು ಕಾಲವು ಕೆಲವು । ಮುಂ । ದಾರಿಯು ತೋರದೆ ಮನವು ॥ ಗಾರುಗೆಟ್ಟಿರಲು ಧಾರಿಣಿಪಾಲಕ । ನಾರಿ ಸುದಕ್ಷಿಣೆಯನು ಕರೆದೆಂದನು ॥ 1 ॥

## ಸಾಂಗತ್ಯ ರೂಪಕತಾಳ

ಕಾಂತೆ ಕೇಳನುದಿನ ಹೃದಯವ ಬೇಧಿಸು । ವಂಥ ಬಗೆಯ ನಾನೆಂತೊರೆವೆ ॥ ಅಂತರಂಗದಿ ನೊಂದೆ ನಮ್ಮಯ ಬದುಕಿಗೆ । ಪಂಥದ ಹೊಳಹಿಲ್ಲ ಮುಂದೆ ॥ 1 ॥

ಭುವನವಾಳಿದರೇನು ದಿವಕೆಯೇರಿದರೇನು । ತವನಿಧಿ ಶಿಷ್ಯನಾಗಿಹೆನು ॥ ಭವವ ನೀಗುವ ಸುತರಿಲ್ಲದೆ ಬರಡಾಯ್ತು । ಬವಣೆಯಿಂ ಪಾರಾಗಲೆಂತು ॥ 1 ॥

### ಶಂಕರಾಭರಣ ಏಕತಾಳ

ಸೂರ್ಯಕುಲವ ಸೇರಿದರೆ । ನ್ನಂತಃ ತಮವು ನೀಗಲಿಲ್ಲ । ಕಾರ್ಯಕಿದುವೆ ಜನ್ಮಾಂತರದ । ಕರ್ಮ ಕಾರಣ ॥ 1 ॥

### ಬೇಗಡೆ ಏಕತಾಳ

ಎಂದು ಚಿಂತಿಸುತಿರ್ಪ ವೇಳ್ಯದಲಿ । ಕುಲ ಗುರು ವಸಿಷ್ಠರು । ಬಂದು ಕೇಳ್ದರು ಕರುಣ ಭಾವದಲಿ ॥ ಕಂದಿದಾನನದಿಂದಲಿಹುದೇ । ಕಿಂದು ಸಂಕಟವೇನು ಬಂದುದು । ಬಂಧುರದ ದಾಂಪತ್ಯ ನಿಮ್ಮದು । ಎಂದೆನಲು ನೃಪವರನು ಪೇಳಿದ ॥ 1 ॥

### ತೋಡಿ ರೂಪಕತಾಳ

ಋಷಿವರೇಣ್ಯಾ ನಮಿಪೆ ಚರಣಕೆ । ಸಂತತಿಯ ಕಾಣೆ । ವೆಸಗಿದಂಥದ್ಯಾವ ಪಾಪಕೆ ॥ ರಸ ವಿಹೀನ ಬದುಕಿದಾಯ್ತು । ಬಿಸಜಪ್ರಿಯನ ವಂಶಕಿಂಥ । ದೆಸೆಯು ಬಂತೆ ವ್ಯಸನ ನೀಗಿ । ಜಸದ ಬೆಳಕ ಕರುಣಿಸಯ್ಯ ॥ 1 ॥

### ಆರ್ಯಸವಾಯಿ ಏಕತಾಳ

ಧ್ಯಾನದೊಳರಿತು ವಸಿಷ್ಠರು ಪೇಳ್ದರು । ಮಾನಿಸದಿರೆ ಸುರಧೇನುವನು ॥ ಕಾಣಿಸಿತೀ ವ್ಯಥೆ ನಂದಿನಿ ಸೇವೆ ವಿ । ಧಾನದಿ ವಿರಚಿಸಲೊಳಿತಹುದು ॥ 1 ॥

### ಭಾಮಿನಿ

ಪೊಡವಿಪಾಲನೆ ಕೇಳು ಗೋವಿನ । ಒಡಲ ಸಂಕಟ ಹೊತ್ತುರಿಯುವುದು । ಬಿಡದೆ ಭೂಮಿಯ ಜೀವರಾಶಿಗಳೆಲ್ಲ ಸಂಕುಲವ ॥ ಒಡನೆ ಧೇನುವು ವಿಶ್ವ ಮಾತೆಯು । ನಡೆವ ದೇವಾಲಯವು ಔಷಧ । ಕಡಲು ಮೇಣಾಹಾರ ಸೌಧವು ತಿಳಿಯೊ ನೀನಿದನು ॥ 1 ॥

### ದ್ವಿಪದಿ

ಎಂದೊಡಂಬಡಿಸಿ ಸತಿಸಹಿತರಸನನ್ನು । ಕುಂದಿರದೊಲಾಶ್ರಮಕೆ ಕರೆತಂದ ತಾನು ॥ 1 ॥ ಮುನಿಪಾಲ ಕರೆದೆಂದ ನಂದಿನಿಯೊಳಾಗ । ಅನುವಿನಿಂ ಸೇವಿಪನ ಹರಸುವುದು ಬೇಗ ॥ 2 ॥ ನೃಪ ದಿಲೀಪನು ಪೇಳ್ದ ಶರಣೆಂಬೆ ತಾಯೆ । ಸಫಲಗೊಳಿಸುತಲೆನ್ನ ನಿರುತದಲಿ ಕಾಯೆ ॥ 3 ॥

### ಸೌರಾಷ್ಟ್ರ ತ್ರಿವುಡೆತಾಳ

ಗೋಮಿನೀಶನೆ ಕೇಳು ಕರ್ಮವು । ಭೂಮಿಯಲಿ ಸಾಫಲ್ಯವೀವುದು । ನೀ ಮನವಗೊಟ್ಟಿಂದು ಮುನ್ನಡೆ । ಕ್ಷೇಮವಹುದು ॥ 1 ॥

## ಭೈರವಿ ಜಂಪೆತಾಳ

ಅಸ್ತ್ವೆಂದು ವಂದಿಸುತ । ಪೃಥ್ವೀಶ ಮನವಿಟ್ಟು । ನಿತ್ಯದಲಿ ಗೋಸೇವೆ । ವೃತ್ತಿಯಲಿ ತೊಡಗೆ ॥ 1 ॥

## ಭಾಮಿನಿ

ನಂದಿನಿಯ ಸೇವೆಯನು ನಿರುತ ವ । ಸುಂದರೇಶನು ಮಾಳ್ಪ ಶ್ರದ್ಧೆಯ । ಹೊಂದುತಾನಂದದಲಿ ಕೆಲದಿನ ಸಂದಿರಲ್ಕಂದು ॥ ಗಂಧವಹ ನಿಭ ವೇಗದಿಂದಲಿ । ಬಂದುದೊಮ್ಮೆಗೆ ಭೀಕರದ ಹರಿ । ಯೊಂದು ಗೋವಿನ ಗಳವ ಪಿಡಿದಿರೆ ಕಂಡ ಭೂವರನು ॥ 1 ॥

## ಮಾರವಿ ಏಕತಾಳ

ಕೆಂಡಾಮಂಡಲನಾಗುತಲಾ ಭೂ । ಮಂಡಲಕಧಿಪತಿಯು ॥ ತುಂಡರಿಸದೆ ಬಿಡೆ ಪುಂಡಾಟಿಕೆ ಹರಿ । ಮಂಡೆಯನೆನುತಾಗ ॥ 1 ॥ ಭರದಿಂದೀಗಲೆ ತರಿಯುವೆ ಸಿಂಹವ । ಶರಮುಖದಿಂದೆಂದು ॥ ಕರವಿಕ್ಕಿರೆ ತನು ಶಿಲೆಯಂತಾಗಲು । ಹರಿಗುಸುರಿದ ನೃಪನು ॥ 2 ॥

## ನೀಲಾಂಬರಿ ಏಕತಾಳ

ವನರಾಜ ಸೈರಿಸಯ್ಯ । ಹಸಿವಿಂಗೆ ಈ । ತನುವ ನೀ ಸೇವಿಸಯ್ಯ ॥ ಕ್ಷಣದಲಿ ಬಿಡು ತುರುವ । ಹೊತ್ತಿರುವೆನು । ದನ ಕಾಯುವ ವ್ರತವ ॥ 1 ॥

ವಚನ:– ಇಂತಾ ದೈನ್ಯದಿಂ ಬೇಡಿಕೊಂಬ ಭೂವರನಂ ಛೇಡಿಸಿತು ಹರ್ಯಕ್ಷ......

## ದೇಶಿ ಮಟ್ಟೆತಾಳ

ಚೆಂದವಾದುದು । ಭೂಪ । ನೆಂದ ಮಾತಿದು ॥ ಸುಂದರಿಯನು ಬಿಟ್ಟು ತನುವ । ಕೊಂದುಕೊಳುವೆನೆಂಬ ನುಡಿಯು । ಅಂದವೇನೆಲ । ನಡೆಯು । ಚೆಂದವೇನೆಲ ॥ 1 ॥

## ಆನಂದಭೈರವಿ ಏಕತಾಳ

ಕ್ಷೋಣಿಪಾಲ ನೋಡಿದೆನ್ನ । ಹಾನಿಗೈವನಲ್ಲೋ ಸಿಂಹ । ಆಯಿತು । ಪ್ರಾಣ । ಹೋಯಿತು ॥ 1 ॥

## ನೀಲಾಂಬರಿ ಏಕತಾಳ

ಬಲು ವಿನೋದವ ಗೈಯ್ಯದೆ । ನಂದಿನಿಯನ್ನು । ಘಳಿಲನೆ ಬಿಡಲಾಗದೆ ॥ ಸಲೆ ವಸಿಷ್ಠರ ಧೇನುವು । ರಕ್ಷಣೆ ಹೊಣೆ । ಯೊಳಗಿಹೆ ನೀ ಕಾರ್ಯವು ॥ 1 ॥

## ದೇಶಿ ಮಟ್ಟೆತಾಳ

ಬುದ್ಧಿ ಹೀನನನೆ । ಇಂಥ । ಸುದ್ದಿ ಪೇಳ್ದನೆ ॥ ಇದ್ದು ಗೋ ಸಹಸ್ರ ಮುನಿಗೆ । ಹೃದ್ಯಮಾಗಿ ಕೊಡದೆ ಸಾವೆ । ಬದ್ಧವೇನಿದು । ನುಡಿಗೆ । ಬದ್ಧನಾದುದು ॥ 1 ॥

## ಆನಂದಬೈರವಿ ಏಕತಾಳ

ಪಂಚ ನಖದೆ ಗಳವ ತಿವಿದ । ಸಂಚಿದೇನ ತಿಳಿಯದಾದೆ । ತಾಳೆನು । ಸ್ಥಿತಿಯ । ಹೇಳೆನು ॥ 1 ॥

## ಕಾಂಬೋಧಿ ಝಂಪೆತಾಳ

ಸಪ್ತಪದಿಯಿಂದೀಗ ಸಖ್ಯವಾಯಿತುಯೆಮಗೆ । ಮಿತ್ರಕಾರ್ಯವನೆಸಗುವಡೆಯು ॥ ಪ್ರಾರ್ಥಿಸುವೆನೀ ಹಸುವ ತೊರೆದೆನ್ನ ತಿಂದುಂಡು । ತೃಪ್ತನಾಗಯ್ಯ ಹರ್ಯಕ್ಷ ॥ 1 ॥

## ಸುರುಟಿ ಏಕತಾಳ

ಏಳು ಏಳು ಭೂಪ । ಸಂತಸ । ತಾಳು ಸುಪ್ರತಾಪ ॥ ಲೀಲೆ ಪರೀಕ್ಷೆಯೊಳಾಳಾಗಿಹೆ ನೀ । ಹಾಲನು ಕುಡಿದರೆ ಬಾಲನ ಪಡೆಯುವೆ ॥ 1 ॥

## ಗೌಳ ಆದಿತಾಳ

ತಾಯೆ ನಿಮ್ಮೊಲುಮೆಯ ತರಳನಾದೆನಗೆ । ಶ್ರೇಯವು ನಿಜವ್ಯೆಸೆ ತೀರಿತು ಯೆನ್ನಾಸೆ ॥ ಪ ॥

ಕರುವು ಸ್ವೀಕರಿಸಲಿ ಮುನಿಪತಿ ಪಡೆಯಲಿ । ವರಕ್ಷೀರ ಕುಡಿಯುವೆ ತನುಜನ ಪಡೆವೆ ॥ 1 ॥

## ನವರೋಜು ಏಕತಾಳ

ಮೆಚ್ಚಿದೆ ನೃ ನಾ ನಿನಗೆ । ಈ । ಹೆಚ್ಚಿನ ಶ್ರದ್ಧೆಯ ಮತಿಗೆ ॥ ಸಚ್ಚರಿತನೆ ಕೇಳ್ । ಉಚ್ಚತಮಾನ್ವಿತ । ಸ್ವಚ್ಛದ ಮನಸಿಗೆ । ನಿಚ್ಚಟ ಫಲವಿದೆ ॥ 1 ॥ ಇನವಂಶಾಂಬುಧಿಯುಡುಪ । ಶುಭ । ವನೆ ಹಾರೈಸುವೆ ಜನಪ ॥ ತನುಜನ ಪಡೆಯುವೆ । ಘನ ಕೀರ್ತಿಗೆ ಭಾ । ಜನನಾಗುತ ಧಾ । ರುಣಿಯೊಳು ಮೆರೆಯುವ ॥ 2 ॥

## ಮೋಹನ ಅಷ್ಟತಾಳ

ಭೂಮಿಪಾಲನು ಪೇಳ್ದನು । ಸ್ವಾನುಭವದಿ । ಗೋ ಮಹತ್ವವರಿತೆನು ॥ ಗೋ ಮಾತೆ ಸೇವೆಯ ನೇಮದಿ ಗೈಯ್ಯಲು । ಗೋಮಿನಿ ಜನರೆಲ್ಲರು ॥ ಕೃತಾರ್ಥರು ॥ 1 ॥

## ವೃದ್ಧಿ ಸಾಂಗತ್ಯ

ಭಾವ ಶುದ್ಧದೊಳೆಲ್ಲ ಆರತಿ ಬೆಳಗಿರೆ । ಮೂವತ್ಮೂರ್ಕೋಟಿಯ ಸಂಖ್ಯೇ ॥ ದೇವತಾವಾಸ ಸ್ಥಾನವೆ ತಾನೆನಿಸಿರುವ । ಗೋವಿಂಗೆ ಗ್ರಾಸವನಿತ್ತು ಸೋಬಾನೆ ॥ 1 ॥

ಪಂಕಜೇಕ್ಷಣ ಶಿವ ಪಾರ್ವತಿ ಗಣಪರ । ಶಂಕರಾಚಾರ್ಯರ ಸ್ಮರಿಸಿ ॥ ಕಿಂಕರನಿಟಗಿ ಮಹಾಬಲೇಶ್ವರ ನಾ ನಿ । ಶ್ಯಂಕದೆ ರಚಿಸಿಹೆ ಯಕ್ಷಗಾನದಲಿ ॥ 2 ॥

ಶ್ರೀ ಮಂಗಳಂ ಶುಭ ಮಂಗಳಂ ಇಟಗಿ ಶ್ರೀ । ರಾಮೇಶ್ವರಂಗೆ ಗೌರಿಗೆ ॥ ಶ್ರೀ ಮಹಾಗಣಪಗೆ ಗುರು ರಂಗವಿಠಲಗೆ । ಶ್ರೀ ಮಂಗಳಂ ನಿತ್ಯ ಶುಭ ಮಂಗಳಂ$$$॥

**॥ ಭದ್ರಂ ಶುಭಂ ಮಂಗಳಮ್॥**

# ಗುರುದಕ್ಷಿಣೆ

## (ಏಕಲವ್ಯ- ದ್ರುಪದಾರ್ಜುನ)

### ಪಾತ್ರಗಳು:-

ದ್ರುಪದ- ದೂತ- ದ್ರೋಣ- ಕೌರವಾದಿಗಳು- ಭೀಷ್ಮ- ಏಕಲವ್ಯ- ಅರಾವಳಿ(ಏಕಲವ್ಯನ ತಾಯಿ)- ಅರ್ಜುನ

ಶ್ರೀ ಗುರುಗಣಾಧಿಪತಯೇ ನಮಃ

ಗುರುದಕ್ಷಿಣೆ

ಕನ್ನಡ ಯಕ್ಷಗಾನ

### ಭಾಮಿನಿ

ಪೃಥುವಿ ತತ್ವದ ಮೂಲ ರೂಪನೆ । ಪೃಥುಲ ಕುಕ್ಷಿಯ ದೇವ ಮನಸಿನ । ಮಥನದಲಿ ನವನೀತ ದೊರೆಯುವ ತೆರದಿ ಹರಸಯ್ಯ ॥ ಕಥನ ರಚನೆಗೆ ಕೈಯನಿಕ್ಕಿದೆ । ಸತತ ಸಿದ್ಧಿಯನಿತ್ತು ಕರುಣಿಸು । ಕೃತಿಗೆ ಕೀರ್ತಿಯ ಮತಿಗೆ ಮಂಗಳ ಪಾಲಿಸೈ ಗಣಪ ॥ 1 ॥

### ಸೌರಾಷ್ಟ್ರ ತ್ರಿವುಡೆತಾಳ

ತಪನನಂತೆಸೆಯುತಿಹ ಭೂವರ । ದ್ರುಪದನೊಡ್ಡೋಲಗದಿ ಮಂಡಿಸಿ । ವಿಪುಲ ವೈಭವದಿಂದ ಮೆರೆದನು । ಸಫಲನಾಗಿ ॥ 1 ॥ ಹಸುಳೆಯೆನ್ನನು ಅಗ್ನಿವೇಶ್ಯರು । ಮಿಸುನಿಯಾಗಿಸಿ ವಿದ್ಯೆಯಿತ್ತರು । ವಸುಧೆ ಪಾಂಚಾಲಕಧಿಪತಿಯಾ । ಗಿಸಿದರಂದು ॥ 2 ॥

### ಕಂದ

ಧರಣಿಪನೀ ಪರಿ ವಿಭವದಿ । ಮೆರೆವೋಲಗದಲ್ಲಿ ಸರಸದೊಳಗಿರಲಾಗಂ ॥ ದೊರೆಯಾಣತಿಯಿಂ ಬಾಗಿಲ । ಚರನೈತಂದಡಿಯ ಪಿಡಿದು ನುಡಿದ ವಿನಯದಿಂ ॥ 1 ॥

### ಸುರುಟಿ ಆದಿತಾಳ

ಕೇಳೆನ್ನಯ ದೊರೆಯೆ । ಈ ಪಾಂ । ಚಾಲದ ಘನ ಸಿರಿಯೆ ॥ ಊಳಿಗ ದ್ವಾರದಲಿ । ನೇಮವ। ಪಾಲಿಸೆ ನಾವಲ್ಲಿ ॥ 1 ॥ ಬಂದನು ಬಡ ಹಾರ್ವ । ಸತಿಸುತ । ರೊಂದಾಗುತಲೋರ್ವ ॥ ಸಂದರ್ಶನ ಬಯಸೆ । ತಮ್ಮೆಡೆ । ಬಂದೆನು ನಿಲ್ಲಿಸುತೆ ॥ 2 ॥

### ಭೈರವಿ ಝಂಪೆತಾಳ

ಮೆಚ್ಚುಗೆಯ ಎಲೆಬಂಟ । ಸಚ್ಚರಿತರಾಗಿಹರ ॥ ಇಚ್ಛೆಯನು ಸಲ್ಲಿಸುವೆ । ಸೂಚ್ಯದಲಿ ಕಳುಹು ॥ 1 ॥

## ದೇವಗಾಂಧಾರ ಏಕತಾಳ (ಸಾಂಗತ್ಯ)

ಸಡಗರದಲಿ ದ್ರೋಣ ನಡೆತಂದು ಸಭೆಯಲ್ಲಿ । ಒಡನುಸುರಿದನು ಭೂವರಗೆ ॥ ಪೊಡವಿಪಾಲನೆ ಯಾಕೆ ಒಡನಾಡಿಯೆನ್ನನು । ನುಡಿಸದೆ ಸೆಟೆದು ನಿಂದಿರುವೆ ॥ 1 ॥

## ಭೈರವಿ ಅಷ್ಟತಾಳ

ಯಾರಯ್ಯ ಬಡಬ್ರಾಹ್ಮಣ । ಬಲು ಗರ್ವವ । ತೋರುವೆ ನೀನೀಕ್ಷಣ ॥ ಧಾರಿಣೀಶಗೆ ಬಡ । ಹಾರುವ ಸಮವೇನು । ಸಾರಿದರೀಗುತ್ತಮ ॥ 1 ॥

## ತೋಡಿ ರೂಪಕತಾಳ

ಸ್ನೇಹವಿಂದು ಮರವೆಯಾಯಿತೆ । ಅಧಿಕಾರ ಜನ್ಯ । ಮೋಹವೆಲ್ಲ ಮೇರೆಮೀರಿತೆ ॥ ಸ್ನೇಹವೆಂದು ಬಹು ಪವಿತ್ರ । ದ್ರೋಹ ಬಗೆಯಬೇಡ ಬದುಕ । ರೂಹಿಗೆಂದು ಹಸುವನೊಂದ । ದೇಹಿಯೆನುವ ಎನಗೆ ನೀಡು ॥ 1 ॥

## ಮಾರವಿ ಏಕತಾಳ

ಅಹಹ ವಿಚಾರ ವಿಹೀನನೆ ಸ್ವಪ್ನದಿ । ವಿಹರಿಸುತಿಹೆಯೇನ್ಯೆ ॥ ಮಹಿಪತಿಯೆದುರಲಿ ಮಿತಿ ಮೀರಿದ ನಡೆ । ಬಹುತರದಪಹಾಸ್ಯ ॥ 1 ॥ ಮತಿಗೇಡಿಯೆ ಕೇಳಾನಿಹೆ ಕ್ಷಿತಿಯೊಳು । ಅತುಲಿತ ಬಲಭೀಮ ॥ ಸತಿಸುತರೊಂದಿಗೆ ಪಥ ಪಿಡಿದಲೆಯುವೆ । ಕ್ಷುತಿ ಬಾಧೆಯ ಹೊಂದಿ ॥ 2 ॥ ಸಂಜೆಯ ಕೂಳ ವ್ಯವಸ್ಥೆಯ ಗೊಳಿಸುವೆ । ಭುಂಜಿಸು ಮುದದಿಂದ ॥ ನಂಜಿನ ನುಡಿಗಳ ಗಳಹುವ ನಿನ್ನನು । ಭಂಜಿಸುವೆನು ಬಿಡದೆ ॥ 3 ॥

## ವಾರ್ಧಿಕ ಅರ್ಧ

ಎನಲು ರೋಷಾವೇಶ ಹೊಂದುತಲಿ ಕಲಶಸುತ । ತನುಮರೆದು ಕಂಗಳಿಂ ಕಿಡಿಸೂಸಿ ಜಟೆ ಬಿಗಿದು । ಕಿನಿಸಿನಿಂ ನೆಲಕುಟ್ಟಿ ಘನಶಪಥ ವಾಕ್ಯದಿಂ ಜನಪಾಲಗಿಂತೆಂದನು ॥ 1 ॥

## ಘಂಟಾರವ ಅಷ್ಟತಾಳ

ಮುಚ್ಚು ಮುಚ್ಚೆಲೋ ವದನವ ದ್ರುಪದನೆ । ನಿಚ್ಚಟದಿ ನೀ ಹುಚ್ಚನಾಗಿಹೆ । ಹೆಚ್ಚಿರುವ ಅಧಿಕಾರದಿ ॥ 1 ॥ ಬಡವನೆಂದೆಯ ಶಪಥವ ಕೇಳೆಲೋ । ಪಡೆದ ವಿದ್ಯೆಯ ಧಾರೆ ಯೆರೆವುತ । ಸಿಡಿಲ ಮರಿಯನು ಸೃಷ್ಟಿಸಿ ॥ 2 ॥ ರಣವ ಗಂಟಿಕ್ಕಿ ಹೆಡೆಮುರಿ ಬಿಗಿವುತ । ಗೆಣೆತನದ ಪಾಠವನು ಪೇಳುವೆ । ಬಿನುಗೆ ಮೂರ್ಖ ಮಹೀಶನೆ ॥ 3 ॥

## ಭಾಮಿನಿ

ಎಂದು ಗಜರುತ ತೆರಳೆ ಕುಂಭಜ । ಬಂದುದೆಲ್ಲವ ನೋಡಿಕೊಳ್ಳುವೆ । ನೆಂದು ತಾನತಿ ದೃಢದಿ ನಿರ್ಧರಿಸಿರ್ದ ದ್ರುಪದಾಖ್ಯ ॥ ಬಂದ ಪಥವಿಡಿದಂಗನೆಯು ಸುತ । ರೊಂದು ಗೂಡುತ ದ್ರೋಣ ಮನದಲಿ । ನೊಂದು ಕೊಂಡನು ನೆನೆನೆನೆದು ಹೀನಾಯ ಪಾಡುಗಳ ॥ 1 ॥

### ಆರ್ಯಸವಾಯಿ ಏಕತಾಳ

ತುತ್ತಿನ ಚೀಲಕೆ ಚಿಂತೆಯೆ ಅನ್ನವು । ಮತ್ತಪಮಾನವೆ ಮೇಲ್ವಸನ ॥ ನಿತ್ಯದ ಬಡತನ ಶಾಪವೆ ನಿಜನಿಜ । ಹಸ್ತಿನಪುರದೆಡೆ ತೆರಳುವೆನು ॥ 1 ॥

### ಸಾಂಗತ್ಯ ರೂಪಕತಾಳ

ಅಂತರಂಗದ ತರಂಗದಿ ದ್ರೋಣ ನಡೆತರೆ । ಗಂತವ್ಯ ಹಸ್ತಿನಾಪುರವು ॥ ಕಂತುವಿನಂತೆಸೆಯುವ ಬಾಲರೋಳಿಯು । ಅಂತಕ್ರೀಡೆಯೊಳಿತ್ತು ಜಸದಿ ॥ 1 ॥

### ನಾಟಿ ತ್ರಿವುಡೆತಾಳ

ಆಟವಾಡುತ ಬಂದರು । ಕೂಟದಲಿ ಶಶಿಕುಲಜರು ॥ ಸಾಟಿಯಿಲ್ಲದ ಚೂಟಿಯಿಂದಲೆ । ದಾಟದಲಿ ಸುಕುಮಾರರು ॥ 1 ॥ ಮೀರಿದುತ್ಸಹ ಬೀರುತ । ತೀರದಲಿ ಚೆಂಡಾಡುತ ॥ ತೂರಿ ಬುಗುರಿಯ ಚಿಣ್ಣಿ ಕೋಲಲಿ । ಭಾರಿ ತೋಷವ ಹೊಂದುತ ॥ 2 ॥

### ಕುಸುಮ ಷಟ್ಪದಿ

ಆಳ ಬಾವಿಗೆ ಚೆಂಡು । ಬೀಳೆ ಬಾಲರು ಕಂಡು । ಕೋಲಾಹಲವನೆಬ್ಬಿಸಿದರೆಲ್ಲರೂ ॥ ಮೇಳವಿಸಿದಾ ದ್ರೋಣ । ಕೇಳಿ ಹುಯ್ಯಲನು ಕುಶ । ದಾಳಿಯಿಂದೊಂದಕಭಿಮಂತ್ರಿಸಿದನೂ ॥ 1 ॥

### ನವರೋಜು ಏಕತಾಳ

ಚೆಂಡಿದು ಮೇಲಕೆ ಬಂತು । ಉ । ದ್ದಂಡನೆ ವಂದನೆಯಿಂತು ॥ ಚಂಡ ಮಂತ್ರಬಲ ಕಂಡೆವು ನಾವ್ ಹಳ । ವಂಡದೊಳಿರೆ ನೀ ಜೊಂಡೊಳಗೆತ್ತಿದೆ. ॥ 1 ॥ ದ್ವಿಜವರ ನೀವ್ಯಾರಯ್ಯ । ಪೇಳ್ । ಬಿಜಯಂಗೈಸಿದ ಪರಿಯ ॥ ಗಜಪುರದರಸನ ಸುತರಾಗಿಹೆವೈ । ಸುಜನ ವಿಚಾರವನರುಹುವೆ ಹಿರಿಯಗೆ ॥ 2 ॥

### ಕೇದಾರಗೌಳ ಅಷ್ಟತಾಳ

ಪುಟವಿಟ್ಟ ಪುತ್ಥಳಿ ಮನಸಿನ ಬಾಲರೆ । ದಿಟವಿದು ನೀವೆಂದುದು ॥ ಘಟನೆಗಳೆಲ್ಲವ ಮುತ್ತಾತಗುಸುರಲ । ಕುಟಿಲನು ಮನ್ನಿಪನು ॥ 1 ॥

### ಸೌರಾಷ್ಟ್ರ ಅಷ್ಟತಾಳ

ಆಟದ ಮನವಾಗಿ ಅಂಗಳಕೈದೆವು । ಅಜ್ಜಕೇಳು । ನಾವು । ಕೂಟದಿಂದೊಳಗಾಟ ಪಾಟದೊಳಿರಲಿಂದು । ಅಜ್ಜಕೇಳು ॥ 1 ॥ ಕೂಪದಿ ಚೆಂಡು ಬೀಳಲು ಕಂಡು ನಿಂತರೆ । ಅಜ್ಜಕೇಳು । ಸುಪ್ರ । ತಾಪ ಬ್ರಾಹ್ಮಣ ಬಂದು ಎತ್ತಿದನಾಕ್ಷಣ । ಅಜ್ಜಕೇಳು ॥ 2 ॥

### ಮಧುಮಾಧವಿ ಏಕತಾಳ

ಭೀಷ್ಮನು ಕೇಳುತ ಹರುಷವನಾಂತು । ಸುಸ್ಮಿತನಾಗುತ ಪೀಠದಿಂದಿಳಿದು ॥ ರಶ್ಮಿ ತೇಜದಿ ಹೊಳೆಹೊಳೆಯುವ ದ್ವಿಜನ । ಕಶ್ಮಲವಿರದೆ ಸತ್ಕರಿಸಿದ ಹದನ ॥ 1 ॥ ನಿಮಗಿದೋ

ಹಾರ್ದಿಕ ಸ್ವಾಗತವಯ್ಯ । ನಮನಗಳನು ಸ್ವೀಕರಿಸು ವಿಪ್ರವರ್ಯ ॥ ಗಮನವೆಲ್ಲಿಂದಾಯ್ತೆಂದರುಹು ಸಂತಸದಿ । ಸುಮನ ಮುದವ ಹೊಂದಿತ್ತೈಯಾಗಮನದಿ ॥ 2 ॥

### ದ್ವಿಜಾವಂತಿ ಅಷ್ಟತಾಳ

ಆಲಿಪುದು ಮಮ ಬಾಳ ಬಟ್ಟೆಯ ಗೋಳಿನಾ ಕಥೆಯ । ಋಷಿವರ । ಬಾಲನಾಗಿಯು ಏಳಿಗೆಯ ಕಂಡಾಳದಿಹ ವ್ಯಥೆಯ ॥ ಬದುಕನು । ಕೂಲಿಸಲು ಬಿಲ್ವಿದ್ಯೆಯೋಳಿಯ । ಪಾಲಿಸುತ ಭಾರ್ಗವನು ಹರಸಿದ । ಖೂಳ ದ್ರುಪದ ಪಚಾರಿಸಿದನವ । ನಾಲಯದಿ ಶಪಥವನು ಗೈದಿಹೆ ॥ 1 ॥

### ಕೇದಾರಗೌಳ ಝಂಪೆತಾಳ

ತಾಳದಿರು ಚಿಂತೆಗಳನು । ಈವೆನೆ । ನ್ನಾಲಯದೊಳಾಶ್ರಯವನು ॥ ಬಾಲರಿಗೆ ಬಿಲ್ವಿದ್ಯೆಯ । ಮೂಲವನು । ಪೇಳುತ್ತಲಿಲ್ಲಿರುವೆಯ ॥ 1 ॥

ವಚನ:- ಇಂತೀ ಪರಿಯೊಳಿರಲಿತ್ತ ಅತ್ತ ಕಾಡಿನೊಳು ಶಬರಸುತ ಏಕಲವ್ಯನು ಮನದಲಿ ಹಲವುತರ ಯೋಚಿಸುತ್ತಲಿರ್ದಂ........

### ಸೌರಾಷ್ಟ್ರ ತ್ರಿವುಡೆತಾಳ

ಭಿಲ್ಲರೆರೆಯ ಹಿರಣ್ಯಧನು ಸುತ । ಚೆಲ್ವ ಕಣ್ಮಣಿ ಏಕಲವ್ಯನು । ಬಿಲ್ಲು ವಿದ್ಯೆಯ ಕನಸುಗಳ ಮನ । ದಲ್ಲಿ ಕಂಡ ॥ 1 ॥ ಹೆತ್ತವಳ ಹಾರೈಕೆ ಗಳಿಸುತ । ಹಸ್ತಿನಾಪುರದಲ್ಲಿ ದ್ರೋಣರ । ಉತ್ತಮದ ಸೇವೆಯನು ಗೈವೆನೆ । ನುತ್ತ ಪೊರಟ ॥ 2 ॥

### ಮಧುಮಾಧವಿ ತ್ರಿವುಡೆತಾಳ

ಮಗನೆ ಬಾ ಬಾ ಮುದ್ದಿನರಗಿಣಿ । ಗಗನದಂಗಳ ಚಂದ್ರ ಬಾ ಬಾ । ಮೊಗದೊಳುಕ್ಕುವ ಹರುಷವೇನ್ನೈ । ಸೊಗದ ಪಯಣವಿದೆಲ್ಲಿಗೆ ॥ 1 ॥

### ಸಾವೇರಿ ಅಷ್ಟತಾಳ

ಅಡಿಗೆರಗುತ್ತಿಹೆನು । ದ್ರೋಣಾಚಾರ್ಯ । ರೆಡೆಗೀಗ ಪೊರಟವನು ॥ ದೃಢಮನವಿತ್ತಿಹೆ ಕಡುಗಲಿ ವಿದ್ಯೆಗೆ । ಒಡನೆ ಹಾರೈಸೆನ್ನನು । ಕಳುಹಿಸು ನೀನು ॥ 1 ॥

### ಕಾಂಬೋಧಿ ಏಕತಾಳ

ಹುಡುಗ ನಿನ್ನ ನುಡಿಯಿದೇನು । ದಡಿಗರೊಡನೆ ಯುದ್ಧ ॥ ಬಿಡದೆ ಬಹುದೆ ಬೇಡ ಬೇಡ । ಕಡೆಗೆ ಕೇಡೆ ಬದ್ಧ ॥ 1 ॥

### ವರಾಳಿ ಏಕತಾಳ

ಇಕ್ಕಿತೇನು ದುಃಖ ಪಾಶ । ಬೇಡವಮ್ಮ । ನಮ್ಮ । ಕಕ್ಕುಲತೆಯ ಪ್ರಾಣಿಗಳನು । ನೋಡಿದಮ್ಮ ॥ ಸೊಕ್ಕಿದಂಥ ಸಿಂಹ ಹುಲಿಯು । ತಿಳಿಯಿದಮ್ಮ । ಬಿಡದೆ । ಮುಕ್ಕುತಿಹುದ ಬಲ್ಲೆ ನೀನು । ಕಳುಹಿಸಮ್ಮ ॥ 1 ॥

### ಸಾಂಗತ್ಯ ರೂಪಕತಾಳ

ನಾಡಿನ ಜನರೆಲ್ಲ ಗೂಢರು ನಮಗೆಲ್ಲ । ಬೇಡವೀ ಹವ್ಯಾಸ ಮಗುವೆ ॥ ಆಡಿಕೊಂಡಿರು ನೀನು ಕಾಡಿನ ತುಂಬೆಲ್ಲ । ತೋಡಿಕೊಂಬೆನು ಮನದಳಲ ॥ 1 ॥

### ಘಂಟಾರವ ರೂಪಕತಾಳ

ಚಿಂತೆ ಬಿಡುಬಿಡು । ಮಗನ ಮೇಲಣ ॥ ಇಂತು ಮೋಹದಿ । ನುಡಿವೆ ಯೇನವ್ವ ॥ 1 ॥ ಶೀಲ ದ್ರೋಣರ । ಶಿಷ್ಯನಾಗುವೆ ॥ ಮೇಲುದಾರಿಯ । ಕೃಪೆಯ ಹೊಂದುವೆ ॥ 2 ॥

### ಸೌರಾಷ್ಟ್ರ ತ್ರಿವುಡೆತಾಳ

ಉಸಿರಲೇನ್ನೈ ಹೆಮ್ಮರದ ಕೆಳ । ಟಿಸಿಲನೊಡೆಯವು ಬೇರೆ ಸಸಿಗಳು । ಹೊಸಿಲ ದಾಟುವೆ ಹಠದಿ ಸುಖ ಸಂ । ತಸದಿ ಬಾಳು ॥ 1 ॥ ಉರುತರೋತ್ಸಾಹದಲಿ ಜನನಿಯ । ಹರಕೆಗೊಳ್ಳುತ ಬೀಳುಗೊಂಡನು । ಪುರ ಪ್ರವೇಶಿಸೆ ಬೆಡಗ ಕಾಣುತ । ಬೆರಗುವಟ್ಟ ॥ 2 ॥

### ಭಾಮಿನಿ

ಬಿಲ್ಲು ತೋಮರ ಕುಂತ ಗದೆಗಳು । ಎಲ್ಲಿ ನೋಡಿದರಲ್ಲಿ ಬಗೆಬಗೆ । ಯಲ್ಲಿಯಾಯುಧ ರಾಶಿ ಕಣ್ಮನ ಸೂರೆಗೊಳ್ಳುವವು ॥ ಮಲ್ಲರಾ ಸಾಧನೆಗೆ ಬೇಕಾ । ದೆಲ್ಲ ಪರಿಕರವೇನನೆಂಬೆನು । ಚೆಲ್ವ ಗುರುಗಳ ಪಾದಕೊಂದಿಸುತೊಳಿತ ಹೊಂದುವೆನು ॥ 1 ॥

### ದ್ವಿಪದಿ

ಗುರು ಚರಣಗಳ್ಗೆ ಬಾಗಿದನು ವಿನಯದಲಿ । ಕರುಣೆಯಿಂ ನುಡಿಸಿದನು ದ್ರೋಣ ವಹಿಲದಲಿ ॥ 1 ॥

### ಕಾಂಬೋಧಿ ಅಷ್ಟತಾಳ

ಯಾರಯ್ಯ ಬಾಲಕ ನೀನು । ಮತ್ತೀ । ದಾರಿಯೊಳಗೆ ಬಂದುದೇನು ॥ ಮೋರೆಯನೀಕ್ಷಿಸೆ ಧೀರ ಲಕ್ಷಣಗಳು । ತೋರುತಾರಣ್ಯದ ಹೂ ಮೊಗ್ಗಿನಂತಿಹೆ ॥ 1 ॥

### ಕಲ್ಯಾಣಿ ಝಂಪೆತಾಳ

ಗುರುದೇವ ಶರಣೆಂಬೆ ರಕ್ಷಿಸೈ ಎನ್ನ । ವರ ಶಬರಪತಿ ಹೇಮಧನು ಸುತನು ಮುನ್ನ ॥ ಸರಳ ವಿದ್ಯೆಯ ಸಾರವನು ತಿಳಿಯಲೆಳಸಿ । ಹರುಷದಿಂ ಬಂದಿಹೆನು ಹಲವ ಹಂಬಲಿಸಿ ॥ 1 ॥

### ಕಾಂಬೋಧಿ ಅಷ್ಟತಾಳ

ತರಳನೆ ಮರುಳೇನೋ ನಿನಗೆ । ಮೋಹ । ದುರುಳಾಯ್ತೆ ವಿದ್ಯೆಯು ಹೇಗೆ ॥ ಬರಿದಿಂತು ಗಗನಕೇಣಿಯನಿಟ್ಟು ಕುಸುಮಕೆ । ಕರಚಾಚುತಿಹೆಯೇಕೆ ಶಸ್ತ್ರಾಭ್ಯಾಸದಚಿಂತೆ ॥ 1 ॥

## ಶಹನ್ ಏಕತಾಳ

ಆಕೆವಾಳ್ತನಕಾಸೆ ಪಟ್ಟೆನು । ತಂದೆ । ನೀ ಕರುಣಿಸು ವಿದ್ಯೆ ಗುಟ್ಟನು ॥ ಸಾಕಿದ ಮೃಗಗಳ ರಕ್ಷಿಸೆ ಹೋರುವೆ । ನೂಕುವೆ ಯಮನಿಗೆ ಹುಲಿಸಿಂಹಂಗಳ ॥ 1 ॥

## ಜಂಗಾಲಾ ಏಕತಾಳ

ಪಾತ್ರಾಪಾತ್ರತೆಯರಿಯದೆ ಬೇಡಿದೆ । ಶಸ್ತ್ರಾಭ್ಯಾಸಗಳ ॥ ಸುತ್ತುವೆ ವನದೊಳು ನಿನಗೇತಕೆ ಬಿಡು । ಕ್ಷಾತ್ರೋಚಿತ ವಹ ವಿದ್ಯೆಗಳ ॥ 1 ॥

## ಶಂಕರಾಭರಣ ಏಕತಾಳ

ಜಾತಿಹೀನನೆಂದು ಮನದ । ಜ್ಯೋತಿಯನ್ನು ಬೆಳಗದಿಹಿರೆ । ಮಾತಿದಂತರಂಗವನ್ನು । ಘಾತಿಸಿರ್ಪುದು ॥ 1 ॥ ಪರುಷ ಮಣಿಯ ಸ್ಪರ್ಶ ಲೋಹ । ವರ ಸುವರ್ಣವಾಪುದ್ಯೆಸೆ । ತೊರೆಯ ನೀರು ಗಂಗೆ ಸೇರೆ । ಪರಮ ಪಾವನ ॥ 2 ॥

## ಕಾಂಬೋಧಿ ಝಂಪೆತಾಳ

ಕೆಸರಿನಲಿ ಬೆಳೆದಿರುವ ನೈದಿಲೆಯು ಮೊಗವೆತ್ತಿ । ಶಶಿಯ ನಿರುಕಿಪುದು ಸಮಭಲರೇ ॥ ಹಸುಳೆ ನಿನ್ನುತ್ಸಾಹ ಶ್ರದ್ಧೆಯದ್ಭುತವು ನಾ । ನಸಹಾಯಿ ಕುರುಸುತರ ಹೊರತು ॥ 1 ॥

## ಕೇದಾರಗೌಳ ಜಂಪೆತಾಳ

ಬಹಳಾಸೆ ಹೊತ್ತು ಬಂದೆ । ಶರಣಾಗಿ । ಮಹನೀಯಗೆರಗಿ ನಿಂದೆ ॥ ಸಹಜ ಜಾತಿಯ ಗೋಡೆಯು । ಅಡ್ಡ ಬರ । ಬಹುದೆಂದು ಭಾವಿಸದೆಯು ॥ 1 ॥ ಹೋಗಿ ಬಹೆ ಗುರುದೇವನೆ । ಹಾರ್ದಿಕನು । ರಾಗದಲಿ ಹರಸೆನ್ನನೆ ॥ ಸೋಗಿನೊಳಗಣ ಬದುಕನು । ಒಪ್ಪಿಯದ । ನೀಗಲಾರದೆ ಪೊರಟೆನು ॥ 2 ॥

## ನೀಲಾಂಬರಿ ರೂಪಕತಾಳ

ದಿಟವಾಯ್ತುವ್ವೆಯ ನುಡಿಗಳು । ಕಿಟಿಹುಲಿ ಸಿಂಹವ ನಾ ನಿ । ಚ್ಚಟದಲಿ ಕೊಲ್ಲುವೆನೆನ್ನುವ । ಹಠ ನೀರಾಯ್ತುಯ್ಯೋ ॥ ಸಟೆಯಾಯ್ತೆನ್ನಯ ನಂಬುಗೆ । ಅಟವಿಯ ಜನಗಳ ಹೃದಯದ । ತಟವರಿಯದೆ ಹೋದರು ಶಿವ । ನಿಟಿಲದ ಲಿಪಿಯಷ್ಟೆ ॥ 1 ॥ ಕಣ್ಣಿಗೆ ಬಲು ಚೆಲುವಾಗಿಹ । ಬಣ್ಣಿಪ ಕಾಮನ ಬಿಲ್ಲಿನ । ಬಣ್ಣಕೆ ಮರುಳಾಗಿರ್ದೆ ವಿ । ಷಣ್ಣತೆ ತೊರೆಯುವೆನು ॥ ಮಣ್ಣಲಿ ಬಿದ್ದವ ಮತ್ತಾ । ಮಣ್ಣನ್ನಾಶ್ರಯಿಸೇಳುವೆ । ಮಣ್ಣಿಂದೇಳ್ಗೆಯನಾಶಿಪೆ । ಎಣ್ಣಿದ ಛಲ ಬಿಡೆನು ॥ 2 ॥

## ಬೈರವಿ ಝಂಪೆತಾಳ

ಮಧ್ಯ ಪಾಂಡವನಿತ್ತ । ಹೃದ್ಯಮಾಗಿಹ ಬೇಟೆ । ಸಿದ್ಧತೆಯನೆಲ್ಲವನು । ಹೊದ್ದಿರ್ದ ತಾನು ॥ 1 ॥

## ಘಂಟಾರವ ಅಷ್ಟತಾಳ

ಸರಳ ವಿದ್ಯೆಯ ಪರಮ ಪರೀಕ್ಷೆಗೆ । ಗುರುಗಳಪ್ಪಣೆ ಪಡೆದು ಬೇಟೆಗೆ । ತೆರಳುವೆನು ಗಣ ಕೂಡುತ ॥ 1 ॥ ತಮ ವಿಮರ್ದನ ದಿವ್ಯ ಚೈತನ್ಯಕೆ । ನಮಿಸಿ ಬೇಡುವೆವೊಂದು ಗೂಡುತ । ಗಮಿಸುವೆವು ಮೃಗ ಬೇಟೆಗೆ ॥ 2 ॥ ಒಲಿದು ಹಾರೈಸಿ ಕಳುಹಿಸಿರೆಮ್ಮನ್ನು । ನಿಲದೆ ಶರ ಕೌಶಲವ ತೋರ್ಪೆವು । ಬಲಿತ ಮನದುತ್ಸಾಹದಿ ॥ 3 ॥

## ಆರ್ಯಸವಾಯಿ ಏಕತಾಳ

ಮೆಚ್ಚುಗೆಯಾಯಿತು ನಿಶ್ಚಯವಿದು ಸರಿ । ಹೆಚ್ಚಿನ ಹುಮ್ಮಸ ಕೆಡುಕಹುದು ॥ ಎಚ್ಚರಿಕೆಗೆ ನಾ । ನಿಚ್ಚಿಸಿ ಬಹೆ ಶರ । ವೆಚ್ಚುವ ಬಗೆ ನೋಡಲ್ಕಹುದು ॥ 1 ॥

## ನಾದನಾಮಕ್ರಿಯೆ ಅಷ್ಟತಾಳ

ಮೃಗಯಾ ವಿನೋದದುತ್ಸಾಹವ । ಸರಿ । ಮಿಗಿಲಾಗನುಭವಿಪ ಮೋದವ ॥ ಸೊಗದಿ ಹೊಂದುತಲೆಲ್ಲ ಪೊರಟರು । ಬಗೆ । ಬಗೆಯಾಯುಧವನಾಂತು ನಡೆದರು ॥ 1 ॥ ಕೈರಾತ ಬಳಗವ ಕರೆಸುತ । ಹಲ । ವಾರು ಶುನಕ ದಳ ಕೂಡುತ ॥ ಭಾರಿಯಾರ್ಭಟದ ಗದ್ದಲದಿಂದ । ಪೇಳ । ಲಾರಿಗಳವು ಸಂಭ್ರಮದ ಚೆಂದ ॥ 2 ॥

ವಚನ:– ಗುರುವಿನಿಂ ಬೀಳ್ಕೊಂಡ ಏಕಲವ್ಯನು ಮಣ್ಣಿನಿಂದ ಗುರುಮೂರ್ತಿಯನ್ನು ಮಾಡಿ, ಶರವಿದ್ಯೆಯಭ್ಯಸಿಪ ಪರಿಯೆಂತೆನೆ........

## ಶ್ರೀ ಏಕತಾಳ ( ಮಾರವಿ ಮಟ್ಟು)

ಮೂರ್ತಿಯು ಮಣ್ಣಿನದಾದರು ಬುದ್ಧಿಗೆ । ಸ್ಫೂರ್ತಿಯ ಕಿಡಿಯಿತ್ತೆ ॥ ಕೀರ್ತಿಸುವೆನು ಗುಣನಿಧಿ ಗುರುವರ ನಾ । ಪೂರ್ತಿಯ ಮನವಿತ್ತೆ ॥ 1 ॥ ಏಕಾಗ್ರತೆಗೀ ಭಂಗವ ತಂದಿಹ । ನೇಕಧ್ವನಿಗಳನು ॥ ಕಾಕುತನವ ನಿಲ್ಲಿಸುವೆನು ಮಾರ್ಗವ । ನೀ ಕರುಣಿಸು ಗುರುವೆ ॥ 2 ॥ ಶರವನು ಚಾಪಕೆ ಸೇರಿಸುತೀಕ್ಷಣ । ಸ್ವರ ಬಂದೆಡೆ ಬಿಡಲು ॥ ನಿರುಕಿಸದಲೆ ದನಿ ನಿಂತಪುದೇಂ ತವ । ಕರುಣೆಯ ಶಿಶು ನಾನು ॥ 3 ॥

## ಸೌರಾಷ್ಟ್ರ ತ್ರಿವುಡೆತಾಳ

ಬೊಗಳಿ ಬೊಬ್ಬಿಡುತಿರುವ ಶುನಕದ । ತೆಗೆದ ಬಾಯಿಯು ಮುಚ್ಚದಂದದಿ । ತಗುಲಿದವು ಶರ ಪಾರ್ಥ ಕಾಣುತ । ಬಗೆದ ಮನದಿ ॥ 1 ॥ ಅಮಮ ಚೋದ್ಯವಿದೇನು ಶಿವಶಿವ । ಶ್ರಮವ ಪಡುತಿಹ ಶುನಕಕೀತೆರ । ಕ್ರಮದೊಳೆಚ್ಚವರಾರು ಶರಗಳ । ನಿಮಿಷದಲ್ಲಿ ॥ 2 ॥ ಸುತ್ತಮುತ್ತಲದಾರು ಕಾಣರು । ವಿಸ್ತರದ ವನ ಮಧ್ಯದಲ್ಲಿನ । ಉತ್ತಮದ ಬಿಲ್ಗಾರನಾರದೆ । ನುತ್ತ ನೋಳ್ಪೆ ॥ 3 ॥ ಕಂಡನರ್ಜುನ ಚಾಪ ಶರವು । ದ್ಧಂಡ ತನದಲಿ ಧರಿಸಿಹುದ ಹಳ । ವಂಡಗೊಳುತಲಿ ಮನದಿ ತಾ ಬೆಸ । ಗೊಂಡನಾಗ ॥ 3 ॥ ಆರು ನೀನೆಲೆ ಪೋರ ಪೆತ್ತವ । ರಾರು ಚಿತ್ತಾಕರ್ಷಣೆಯ ಘನ । ಶೂರತನದಿಂ ಮೋಡಿ

ಮಾಡಿದೆ । ಬೋರನುಸುರು ॥ 4 ॥

### ಸುರುಟಿ ಏಕತಾಳ

ಆಗ್ರಹವಿದಕೇಕೆ । ಉಸುರುವೆ । ಶೀಘ್ರದೊಳೆನ್ನರಿಕೆ ॥ ಸ್ವಗೃಹ ವನವೆಂದಿರುತಿಹ ನಾ ಶಬ । ರಾಗ್ರೇಸರಸುತ ನಿನ್ನನು ಪೇಳ್ವೆ ॥ 1 ॥

### ಪಂಚಘಾತ ಮಟ್ಟೆತಾಳ

ಶ್ವಾನ ತಾನು ಬೊಗಳುತಿರಲು । ಬಾಣ ಬಿಟ್ಟು ನಿಲ್ಲಿಸಿರುವೆ । ಕ್ಷೋಣಿಯೊಳಗೆ ವಿದ್ಯೆಯಿತ್ತ । ಮಾನ್ಯನಾವನು ॥ 1 ॥

### ಸಾಂಗತ್ಯ ರೂಪಕತಾಳ

ಪೂಜೆಗೆ ಭಂಗ ತಂದಿಹ ಸದ್ದ ನಿಲ್ಲಿಸೆ । ಮಾಜದೆ ಸಾಯಕವಿತ್ತೆ ॥ ಓಜನಾರೆಂದು ಕೇಳ್ವೆಯ ವಿದ್ಯಾದಾತ ಬಿ । ಲ್ಲೋಜರೋಳ್ ಶ್ರೇಷ್ಠನು ದ್ರೋಣ ॥ 1 ॥

### ಭಾಮಿನಿಯರ್ಧ

ಪಾರ್ಥನದ ಕೇಳುತ್ತ ನಿಲ್ಲದೆ । ಸ್ವಾರ್ಥ ಮನದಲಿ ಗೂಡು ಕಟ್ಟಲು । ಅರ್ತಿಯಿಂದಲಿ ಗುರುವಿನೆಡೆಗೈತರುತಲಿಂತೆಂದ ॥

### ಕಾಂಬೋಧಿ ಝಂಪೆತಾಳ

ಲಾಲಿಪುದು ಗುರುವರ್ಯ ಧರಣಿಯಲಿ ಶ್ರೇಷ್ಠ ಬಿ । ಲ್ಲಾಳುವಾಗಿಪ ವಚನವಿತ್ತು ॥ ಪಾಲಿಸಿದಿರೀಗೇಕೆ ಸಾಮಾನ್ಯ ಬೇಡನಿಗೆ । ಮೇಲೆನಿಪ ಶಬ್ಧವೇಧಿಯನು ॥ 1 ॥ ದಾಸ್ಯ ಭಾವದಿ ನಾನು ನಿತ್ಯ ಸೇವಿಸುವುದಿದ । ದೃಶ್ಯವಾಯಿತೆ ಗುರುವರೇಣ್ಯಾ ॥ ದಸ್ಯುಗಳ ಕೈಯ ಸಾಯಕದಿ ಬಲು ಬಲಗೊಳಿಸೆ । ವಶ್ಯವಾಗದೆ ನಮ್ಮ ನೆಲವು ॥ 2 ॥ ವಿವಶನಾಗದೆ ಯೋಚಿಸೆಲೆ ಪಾರ್ಥ ನೀ ಪೇಳ್ದ । ಕುವರನಾರೆಂದರಿಯೆ ನಾನು ॥ ಅವನಿಯೋಳ್ ಕಡುಚೋದ್ಯ ಸಾವಧಾನದಿ ನೋಳ್ಪೆ । ಅವನಾರು ತೋರುತೋರಯ್ಯ ॥ 3 ॥

### ಕಂದ

ದ್ರೋಣಂ ಬೆರಗಿಂ ನಡೆತರೆ । ಕಾಣುತ ಶಬರಸುತ ಪುಳಕಗೊಂಡತಿ ನಲಿದಂ ॥ ಮಾಣದೆ ತಾ ಕರೆ ತಂದಾ । ಗೋಣಂ ಬಗ್ಗಿಸಿ ವಿನೀತ ಭಾವದೊಳೆಂದಂ ॥ 1 ॥

### ಬೇಗಡೆ ಅಷ್ಟತಾಳ

ಮುದದಿ ಬಂದೆಯ ಗುರುವರ್ಯ । ಓ । ಸದಮಲ ಸುಚರಿತಾಚಾರ್ಯ ॥ ಅಧಿಕ ಸಂಪ್ರೀತಿಯ । ಪದುಳದೊಳಿರಿಸಿದೆ ॥ ಹೃದಯವದರಳಿತು । ಹದನವದೇನೆಂಬೆ ॥ 1 ॥

### ಭಾಮಿನಿ

ಮುಗುದ ನೀನಾದಿನದೊಳೆನ್ನೆಡೆ । ಸೊಗದಿ ಬಂದತಿ ವಿದ್ಯೆ ಬೇಡಿದೆ । ಅಗಲಲಾರದೆ

ನಿನ್ನನಾಶೀರ್ವದಿಸಿ ಕಳುಹಿದೆನು ॥ ಬಗೆಬಗೆಯ ಶರವಿದ್ಯೆ ವೊಲಿದಿದೆ । ಒಗುಮಿಗೆಯ ತೇಜಸ್ಸು ತುಂಬಿದೆ । ಜಗದೊಳಾಶ್ಚರ್ಯವಿದು ಗುರುವರನಾರು ಕಲಿಸಿದರು ॥ 1 ॥

### ಆರ್ಯಸವಾಯಿ ಏಕತಾಳ

ಮೃತ್ತಿಕೆಯಿಂದಲಿ ಮೂರ್ತಿಯ ರಚಿಸಿದೆ । ನಿತ್ಯದಿ ನಿಮ್ಮಯ ಧ್ಯಾನದಲಿ ॥ ಚಿತ್ತಕೆ ಪ್ರೇರಣೆಯಿತ್ತತಿ ಪೊರೆದಿರಿ । ಮತ್ತಿನದರಿಯೆನು ದಾರಿಯಲಿ ॥ 1 ॥

### ಮುಖಾರಿ ಏಕತಾಳ

ಭಳಿರೆ ಮನ ಬಲು ಮೆಚ್ಚಿದೆ ಕೃತಿಗೆ । ಘನ ಶ್ರದ್ಧೆಯ ಮತಿಗೆ । ಭಳಿರೆ ಮನ ಬಲು ಮೆಚ್ಚಿದೆ ಕೃತಿಗೆ ॥ಪ॥ ಕಾಲಕಾಲಕು ಸರ್ವರಾದರ್ಶ । ಸನ್ಮಾರ್ಗವ ತೋರಿದೆ । ಬಾಳಿಗಾಯ್ತು ವಾತ್ಸಲ್ಯದ ವರ್ಷ ॥ ಶೀಲ ಗುಣಾಢ್ಯನೆ । ಏಳಿಗೆ ಪೂರ್ಣಕೆ ॥ ಕೀಳೆಣಿಸದೆ ನೀ । ಸಲಿಸು ದಕ್ಷಿಣೆ ॥ 1 ॥

### ಆರ್ಯಸವಾಯಿ ಏಕತಾಳ

ಗರ್ವವ ತೊರೆವುತ । ಸರ್ವಾರ್ಪಣದಲಿ । ನಿರ್ವಹಿಸುವೆನ್ನೈ ಪದತಲಕೆ ॥ ಶರ್ವಸಮೋತ್ತಮ । ಪಾರ್ವನೆ ಬಯಕೆಯ । ಊರ್ವಿಯಾಣೆ ಕೊಟ್ಟಿಹೆನಿದಕೆ ॥ 1 ॥

### ಯಮನ್‌ಕಲ್ಯಾಣಿ ತ್ರಿವುಡೆತಾಳ

ಗರ್ಭದಲಿ ನಿಶ್ಕಲ್ಮಷವ ತಾ । ತಬ್ಬಿಕೊಂಡಿಹ ಬಾಲನೆ ॥ ಹೆಬ್ಬೆರಳ ಬೇಡುತಿಹೆ ಮಾನಸ । ದುಬ್ಬಿನಲಿ ಕೊಡುಕೊಡದನೆ ॥ 1 ॥

### ನೀಲಾಂಬರಿ ಆದಿತಾಳ

ಧನ್ಯನಾದೆ ಗುರುವರೇಣ್ಯ । ನಿಮ್ಮಾಪೇಕ್ಷೆಯಂತೆ ॥ ಎನ್ನ ಹೆಬ್ಬೆರಳನಿತ್ತೆ । ಮನ್ನಿಸಯ್ಯ ಮುಂತೆ ॥ 1 ॥

### ಯಮನ್‌ಕಲ್ಯಾಣಿ ತ್ರಿವುಡೆತಾಳ

ಮಾತು ಮೌನಕೆ ಶರಣು ಹೊಂದಿತು । ಜಾತಿ ಧರೆಯೊಳಗುರುಳಿತು ॥ ಪ್ರೀತಿ ಹೃದಯವು ಅಂತರಂಗದೆ । ನೀತಿಯಿದು ನೆಲೆಯಾಯಿತು ॥ 1 ॥

### ಸಾಂಗತ್ಯ ರೂಪಕತಾಳ

ಕಾಲನಂದನ ಮೊದಲಾಗಿ ಕೌರವ ಪಾಂಡು । ಬಾಲರಿಂಗೆಲ್ಲ ವಿದ್ಯೆಯನು ॥ ಕಾಲಕಾಲಕೆ ಬೋಧಿಸುತ್ತಿರಲೊಂದಿನ । ಆಲೋಚಿಸಿದ ದ್ರೋಣನಂದು ॥ 1 ॥ ಅಪವಿತ್ರ ಮನಸಿನ ದ್ರುಪದನ ಶಿಕ್ಷಿಸೆ । ವಿಪುಲಾವಕಾಶ ಸಿಕ್ಕಿಹುದು ॥ ಉಪದೇಶವಿತ್ತೆನ್ನ ಶಿಷ್ಯರ ಕಳುಹಿಸಿ । ಉಪಸಂಹರಿಪೆ ದ್ವೇಷವನ್ನು ॥ 2 ॥

## ಸುರುಟಿ ಏಕತಾಳ

ಮಕ್ಕಳೆಲ್ಲ ಬನ್ನಿ । ಬಯಕೆಯ । ಒಕ್ಕಣಿಸುವೆನೆನ್ನಿ ॥ ಅಕ್ಕರೆಯಿಂದಲಿ ಅಕ್ಷರವಿತ್ತಿಹೆ । ಸಾಕ್ಷರರಲಿ ನೀವ್ । ತಕ್ಕವರಾದಿರಿ ॥ 1 ॥ ವಿದ್ಯಾ ಮಂಗಲಕೆ । ದಕ್ಷಿಣೆ। ಹೊದ್ದುವ ವಾಂಛಿತಕೆ ॥ ಹೃದ್ಯ ವಿಚಾರವ । ಬದ್ದದಿ ಪೇಳುವೆ । ಯುದ್ಧದಿ ಕಾದಿ ನಿ । ಬಧ್ಧಿಸಿ ದ್ರುಪದನ ॥ 2 ॥

## ಮಾರವಿ ಏಕತಾಳ

ಶ್ರೀಮುಖದಪ್ಪಣೆ ಶಿರದೊಳಗಾಂತೆವು । ಸೋಮಕುಲಾನ್ವಿತರು ॥ ಕಾಮಿಸಿ ಜಯಸಿರಿ ಕೈಸೆರೆ ಪಿಡಿವೆವು । ಭೂಮಿಪ ದ್ರುಪದನನು ॥ 1 ॥

## ಮೋಹನ ಏಕತಾಳ

ತಡೆಯೋ ಮುಂದಡಿಯಿಡದಲೆ ನೀ ನಡೆಯೋ । ದಡಿಗರ ಹುಟ್ಟನೆ ಅಡಗಿಸಿದಾ ಮಹ । ಪೊಡವಿಪ ದ್ರುಪದನ ಗೊಡವೆಯಿದೇತಕೊ ॥ 1 ॥

## ಕೇದಾರಗೌಳ ಝಂಪೆತಾಳ

ದ್ವಾರ ಪಾಲಕ ಕೇಳೆಲಾ । ಪಾಂಚಾಲ । ದಾ ರಾಜನೆಡೆ ಸಾರೆಲಾ ॥ ಹೋರಾಟವನ್ನು ಬಯಸಿ । ಬಂದಿಹೆನು । ಶೂರತಮ ಪಾರ್ಥಸಹಸಿ ॥ 1 ॥

ವಚನ:– ಭೂಪನೊಡ್ಡೋಲಗದಿ ಮಂಡಿಸಿರೆ ಚಾರನೈತಂದ.......

## ಪುನ್ನಾಗ ಅಷ್ಟತಾಳ

ಪಾದಕೆ ವಂದಿಸಿ ನಿಂದೆ । ದೊರೆಯೆ । ನೀ ದಯೆ ದೋರಯ್ಯ ಮುಂದೆ ॥ ಸಾದರದಿಂದಲಿ ನಿತ್ಯವು ಪೊರೆದಿಹೆ । ಬಾಧಿಸುತಿಹರೈ ದ್ವಾರದಿ ಬಾಲರು ॥ 1 ॥ ಬಿಡದಂತೆ ತಡೆದರೆಯವರು । ತಾವ್ । ಗಡಿಮೀರಿ ಮುನ್ನುಗ್ಗುತಿಹರು ॥ ಕಡುಗಲಿ ತನದಲಿ ರಣಕೊಡಬಡುತಿಹ । ಹುಡುಗರ ಬಿಡದೆಯೆ ಒಡೆಯ ಪರೀಕ್ಷಿಸು ॥ 2 ॥

## ಸೌರಾಷ್ಟ್ರ ತ್ರಿವುಡೆತಾಳ

ಅರರೆ ಬಾಲರು ಬುದ್ಧಿ ಶೂನ್ಯರೆ । ಹರಿಯ ಕೆಣಕುತ ಬದುಕಲಾಪರೆ । ಭರಿತ ಚೋದ್ಯವಿದೇನು ಶೌರ್ಯವೊ । ತರಳರಲ್ಲಿ ॥ 1 ॥ ರಣದ ಛಲಗಳ ನೋಡಬೇಕೈ । ಚಣದಿ ಸೇನೆಯು ಸಿದ್ಧಗೊಳ್ಳಲಿ । ಮಣಿಮಯದ ರಥವೇರಿ ಪೋಗುವೆ । ಘನವಿಭವದಿ ॥ 2 ॥

## ಭೈರವಿ ಏಕತಾಳ

ವಿಪರೀತದ ಕಾರ್ಯಗಳು । ಈ । ದ್ರುಪದನೊಳೇಂ ಕದನಗಳು ॥ ಅಪಹಾಸ್ಯಕ್ಕೀಡಹರೆ । ನೀವ್ । ವಿಫಲಕೆ ಕರವಿಕ್ಕಿದಿರೆ ॥ 1 ॥ ಭೂವರ ದ್ರುಪದನೆ ಕೇಳು । ತಲೆ । ಗಾವರ ನೀ ಬರ ಹೇಳು ॥ ಧಾವಿಸಿದೀ ಭಟರೊಳಗೆ । ರಣ । ಭಾವಿಸೆ ಸುಲಭವೆ ಹೀಗೆ ॥ 2 ॥

ನುಡಿಗಳ ಸರಪಣಿ ಚೆಂದ । ತಲೆ । ಗಡರಿದ ಬರಿ ಮದದಿಂದ ॥ ಒಡನುಸುರಿದರೆಂತೆನುವೆ । ಮುಂ । ದಡಿಯಿಟ್ಟರೆ ಶಿರಗಡಿವೆ ॥ 3 ॥

## ಭಾಮಿನಿಯರ್ಧ

ರಣದಿ ಕೌರವ ಬಳಗ ಹಿಂದಡಿ । ಯನುಕರಿಸುತಿರೆ ಪಾರ್ಥ ಭೂಪನ । ಅನುಜರೆಲ್ಲರ ಸೋಲಿಸುತ್ತಿರೆ ದ್ರುಪದ ತಡೆದೆಂದ ॥ 1 ॥

## ಭೈರವಿ ಅಷ್ಟತಾಳ

ನಿಲ್ಲೆಲೋ ಬಾಲ ನೀನು । ಮೋಹಕ ಘನ । ಚೆಲ್ವಿಗೆ ಸೋತಿಹೆನು ॥ ಸೊಲ್ಲಿಸೆನಗೆ ಪೆತ್ತ ಮಲ್ಲ ಮಾತಾಪಿತ । ರೆಲ್ಲ ವಿವರಗಳನು ॥ 1 ॥ ಛಲದ ಕಾದಾಟದಲಿ । ಕುಲ ವಿವರವ । ತಿಳಿಯಬೇಕಲ್ಲದಿಲ್ಲಿ ॥ ಉಲಿಯುತಿರುವೆ ವ್ಯರ್ಥ । ಲಲನೆ ಕುಂತಿಯ ಸುತ । ಛಲ ಪ್ರದರ್ಶಿಸುವೆನಿಲ್ಲಿ ॥ 2 ॥ ಪೂತುರೆ ಮೆಚ್ಚಿದೆನು । ನಮ್ಮಯ ಜಾತಿ । ಮಾತುಗಳೊಪ್ಪುತಾನು ॥ ಈ ತೆರ ನಮ್ಮೊಳು ಏತಕೆ ವೈರವು । ನೀ ತಿಳುಹೆಲ್ಲವನ್ನು ॥ 3 ॥ ಸ್ನೇಹಿತಗಪಚಾರವ । ಗೈದಿರುವಂಥ । ದ್ರೋಹಿಯ ಹಿಡಿತರುವ ॥ ದಾಹದೊಳೈತಂದೆ ಕಾಹುರವೆನ್ನೊಳು । ಬಾಹಿರವೆಂಬೆನಯ್ಯ ॥ 4 ॥

## ಶಂಕರಾಭರಣ ಮಟ್ಟೆತಾಳ

ಚಾಪ ಪಿಡಿದು ರಣದೊಳೆದುರು ನಿಂತು ಸೆಣಸುವ। ನೀ ಪ್ರತಾಪಿಯೇನೊ ತರಳ ಬೇಡವೀಹವ ॥ 1 ॥ ಹುಡುಗನಾದರೆನ್ನ ವಿವಿಧ ಅಸ್ತ್ರ ಕೌಶಲ । ತಡೆದುಕೊಂಬೆಯೇನೋ ಬರಿದೆ ನುಡಿಯಬೇಡೆಲಾ ॥ 2 ॥

## ಖಮಾಚು ಏಕತಾಳ

ಧುರದಲಿ ಸೋತಿಹ ಧರಣಿಪ ದ್ರುಪದನ । ಕರಗಳ ಬಿಗಿವುತಲಾಗ ॥ ನರನು ಪಚಾರಿಸಿ ನುಡಿಸಿದನಾಕ್ಷಣ । ವರ ಪೌರುಷ ನುಡಿಯೀಗ ॥ 1 ॥

## ಹಿಂದುಸ್ಥಾನಿ ರೂಪಕತಾಳ

ಭೂಪ ಘನ ಪ್ರತಾಪ ತೋರೋ । ಚಾಪವಿದ್ಯೆ ಸಾರ ಬೀರೋ । ಸ್ತೂಪವಾಗಿ ನಿಂತೆಯಹಹ । ಶಾಪವಾಯ್ತೆ ಬಿಂಕ ಬರಹ ॥ 1 ॥ ದ್ರುಪದ ನಿನ್ನ ಸೆರೆಯ ಪಿಡಿದೆ । ಕಪಟ ಕುಟಿಲತನವದಿರದೆ । ನಿಪುಣ ಗುರುಗಳೆಡೆಗೆ ಒಯ್ವೆ । ಸಫಲವಾಯ್ತು ಜನುಮವೆನುವೆ ॥ 2 ॥

## ಭಾಮಿನಿ

ಎಂದು ಜರೆಯುತ ದ್ರುಪದನನು ತಾ । ನಂದು ರಥದಲಿ ಕುಳ್ಳಿರಿಸುತಲಿ । ಬಂದ ಕರಿಪುರಕೆಂದು ಪಾರ್ಥನು ಹೊಂದಿ ಹರುಷವನು ॥ ಅಂದದಿಂ ಪಲ್ಲಂಗ ಚರಣಕೆ । ಬಂಧಿಸುತ ನರ ನಿಂದಿರಲ್ಕೆ ವ । ಸುಂಧರೇಶನ ಕಂಡು ದ್ರೋಣನು ಕಿಡಿಗರೆವುತೆಂದ ॥

1 ॥ ಸುಡಿಸುಡೀ ಮೋರೆಯನು ಗರ್ವಿಯೆ । ದಡಿಗ ನಿನ್ನಯ ಸ್ಥಿತಿಯಿದೆಂತೈ । ಬಡವ ಬಲ್ಲಿದಗೆಲ್ಲಿ ಸ್ನೇಹಗಳೆಂದು ಪ್ರಶ್ನಿಸಿದೆ ॥ ನುಡಿದುದನು ನಾ ಪೂರ್ಣ ಗೊಳಿಸಿದೆ । ಪೊಡವಿ ಭಾಗದೊಳರ್ಧವಿತ್ತಿಹೆ । ಸೊಡರರದುರಿಯಲಿ ಸ್ನೇಹ ಹೃದಯದಿ ತೆರಳಿ ಬದುಕಯ್ಯ ॥ 2 ॥ ಎಮ್ಮ ಜಾತಿಯ ತರಳನಿಂದಲಿ । ಬ್ರಾಹ್ಮಣನು ಅಪಮಾನಗೊಳಿಸಿದ । ಮರ್ಮವೆಂತೈ ಕ್ಷತ್ರಿಯನ ಛಲದೋರುವೆನು ಬಿಡದೆ ॥ ಹಮ್ಮಿನಿಂದಲಿ ಮಖವ ಗೈದತಿ । ಸಮ್ಮುದದಿ ಮಗನನ್ನು ಪಡೆವುತ । ಹೆಮ್ಮೆಯಿಳಿಸುವೆ ಪಾರ್ಥಗೆನ್ನುತ ಸುತೆಯಹೊಂದುವೆನು ॥ 3 ॥

## ಸಾವೇರಿ ತ್ರಿವುಡೆತಾಳ

ನೆಲವ ನೋಡುತ ಪೊರಟ । ದ್ರುಪದಾಖ್ಯನು । ತಲೆಯ ತಗ್ಗಿಸಿ ನಡೆದ ॥ ಗೆಳೆತನಕೆ ಅಪಮಾನ ಗೈದಿಹ । ನೆಲೆಯ ನರಿತನು ಭೂಪ ತನ್ನೊಳು । ಹೊಳಹುದೋರಿ ಪವಿತ್ರ ಸ್ನೇಹಕೆ । ಸಲುವ ಸತ್ಯದ ಸ್ಥಿತಿಯಿದಾಯ್ತೈ ॥ 1 ॥

## ಮಧುಮಾಧವಿ ತ್ರಿವುಡೆತಾಳ

ಹೊದ್ದಿದೆನು ದಕ್ಷಿಣೆಯ ಪಾರ್ಥನೆ । ಹೃದ್ಯವಾಯಿತು ನಿಮ್ಮ ಸಾಧನೆ । ವಿದ್ಯೆಯಿಂ ಸತ್ಕೀರ್ತಿ ಗಳಿಸುತ । ಗೆದ್ದು ಬಾಳಿರಿ ಬದುಕನು ॥ 1 ॥

## ಭಾಮಿನಿ

ಈ ಮಹಾ ಭಾರತದ ಕತೆಯನು । ನಾ ಮಹಾಬಲನಿಟಗಿಯೂರಿನ । ಭೂಮಿಸುರ ಕುಲದಲ್ಲಿ ಪುಟ್ಟಿಹ ಯಕ್ಷಸೇವಕನು ॥ ಕಾಮಹರ ರಾಮೇಶ್ವರನ ಕರು । ಣಾ ಮಹೋದಧಿಯಲ್ಲಿ ಮೀಯುತ । ನಾಮ ಗುರುದಕ್ಷಿಣೆಯನ್ನು ಬರೆದೆನು ಯಕ್ಷಗಾನದಲಿ ॥ 1 ॥

## ಯರಕಲಕಾಂಬೋಧಿ ತ್ರಿವುಡೆತಾಳ

ಮಂಗಳಂ ಶ್ರೀ ಇಷ್ಟಿಕೆಯ ಗೌ । ರಾಂಗ ರಾಮೇಶ್ವರನಿಗೆ ॥ ಮಂಗಳಂ ಶ್ರೀ ಗೌರಿ ಚರಣಕೆ । ರಂಗ ವಿಠಲನ ಪಾದಕೆ ॥ 1 ।

## ಮಂಗಳಂ ಶುಭ ಮಂಗಳಂ

# ಮಹಾಜ್ಞಾನಿ ಗೋಕರ್ಣ
# ಅರ್ಥಾತ್
# ಪ್ರೇತೋದ್ಧರಣ
# ಕನ್ನಡ ಯಕ್ಷಗಾನ ಪ್ರಸಂಗ

## ಪಾತ್ರಗಳು :

| | | |
|---|---|---|
| ಆತ್ಮದೇವ | – | ತುಂಗಭದ್ರಾ ತೀರ ನಿವಾಸಿಯಾದ ಬ್ರಾಹ್ಮಣ |
| ಶಿವಂಕರ | – | ಯತಿ ಶ್ರೇಷ್ಠ |
| ದುಂಧುಲಿ | – | ಆತ್ಮದೇವನ ಹೆಂಡತಿ |
| ದುಂಧುಕಾರಿ | – | ಆತ್ಮದೇವನ ಕಪಟ ಮಗ |
| ಗೋಕರ್ಣ | – | ಗೋವಿನಲ್ಲಿ ಜನಿಸಿದ ಮಹಾಜ್ಞಾನಿ |
| ಚಂಪಕಮಾಲಿನಿ | – | ನಗರದ ಪ್ರಮುಖ ವೇಶ್ಯೆ |
| ಪಿಶಾಚಿ | – | ದುಂಧುಕಾರಿಯ ಪ್ರೇತ |
| ಶೃಂಗಾರ ಶ್ರೇಷ್ಠಿ | – | ವರ್ತಕ |

ಸೂರ್ಯದೇವ, ವಿಷ್ಣುದೂತರು, ಶ್ರೀಹರಿ, ಪಂಡಿತರು, ಗಣಿಕೆಯರು, ದುಂಧುಲಿಯ ತಂಗಿ, ಊರಿನ ಜನರು ಇತ್ಯಾದಿ.

ಆತ್ಮದೇವನ ಸ್ವಗತ, ಮಕ್ಕಳಿಲ್ಲದ ಚಿಂತೆ. ಯೋಗಿ ಶಿವಂಕರ ಹಾಗೂ ಅತ್ಮದೇವ ಸಮಾಗಮ. ಯತಿಯು ನೀಡಿದ ಫಲವನ್ನು ಹೆಂಡತಿ ದುಂಧುಲಿಗೆ ನೀಡುವುದು. ಸ್ವೀಕರಿಸಿದ ದುಂಧುಲಿಯಿಂದ ಸ್ವಗತ. ತಂಗಿಯಿಂದ ಪರಿಹಾರೋಪಾಯ ಸೂಚನೆ. ದುಂಧುಕಾರಿಯ ಜನನ. ಗೋಕರ್ಣನ ಜನನ. ನಾಮಕರಣ. ಮಕ್ಕಳ ಬೆಳವಣಿಗೆ, ಗೋಕರ್ಣ ಮಹಾಜ್ಞಾನಿಯಾದರೆ, ದುಂಧುಕಾರಿ ಮಹಾಶುಂಠ, ಸಂತ್ರಸ್ತ ತಂದೆಗೆ ಗೋಕರ್ಣನ ಸಾಂತ್ವನ. ಗೋಕರ್ಣ ತೀರ್ಥಯಾತ್ರಾ ಪರ್ಯಟನೆ. ದುಂಧುಲಿಯನ್ನು ಮಗ ದುಂಧುಕಾರಿ ಪೀಡಿಸುವುದು. ದುಂಧುಲಿಯ ಆತ್ಮಹತ್ಯೆ. ಐವರು ವೇಶ್ಯೆಯರೊಂದಿಗೆ ದುಂಧುಕಾರಿಯ ಚೆಲ್ಲಾಟ. ಹಣಕ್ಕಾಗಿ ದಾರಿಹೋಕರ ಪೀಡನೆ. ವರ್ತಕನ ಪ್ರವೇಶ. ಅವನನ್ನು ಕೊಂದು ದುಂಧುಕಾರಿಯು ಹಣ ದೋಚುವುದು. ಮುಂದಿನ ಅಪಾಯವರಿತ ಗಣಿಕಾ ಸ್ತ್ರೀಯರೆಲ್ಲರು ಕಲೆತು ದುಂಧುಕಾರಿಯನ್ನು ಕೊಲ್ಲುವುದು. ಪಿಶಾಚಿಯಾಗಿ ಅಲೆದಾಟ. ಕರ್ಣಾಕರ್ಣಿಯಾಗಿ ವರ್ತಮಾನ ತಿಳಿದ ಗೋಕರ್ಣ ತೀರ್ಥಕ್ಷೇತ್ರಗಳಲ್ಲಿ ತರ್ಪಣ ಪ್ರದಾನ. ಗೋಕರ್ಣನಿಗೆ ಪಿಶಾಚಿ ದರ್ಶನ. ಪಿಶಾಚ ಜನ್ಮ ಮೋಕ್ಷಕ್ಕಾಗಿ ಸೂರ್ಯದೇವನ ಪ್ರಾರ್ಥನೆ. ಸೂರ್ಯದೇವನಿಂದ ಭಾಗವತ ಸಪ್ತಾಹ ವಿಧಿಯ ಸೂಚನೆ. ಗೋಕರ್ಣನಿಂದ ಭಾಗವತ ಸಪ್ತಾಹವಿಧಿ ಆಚರಣೆ. ಪ್ರೇತೋದ್ಧರಣ. ವಿಷ್ಣು ದೂತರಿಂದ ಮಗದೊಮ್ಮೆ ಭಾಗವತ ಸಪ್ತಾಹದ ಸೂಚನೆ. ಸಪ್ತಾಹದ ಕೊನೆಗೆ ಶ್ರೀ ಹರಿಯ ದರ್ಶನ. ಸರ್ವರಿಗೂ ಸಾರೂಪ್ಯ ಮುಕ್ತಿ ಪ್ರಧಾನ.

## ಕುಸುಮ ಷಟ್ಪದಿ

ತ್ರ್ಯಕ್ಷ ಸುತ ಗಜವಕ್ತ್ರ । ಪಕ್ಷಿರಥ ನುತಪಾತ್ರ । ರಾಕ್ಷಸ್ಯ ನಿರ್ಮೂಲ ಬಾಲಚಂದ್ರ ॥ ಯಕ್ಷಗಾನದ ರೀತಿ । ಲಕ್ಷಣದೆ ಬರೆಯುವೆನು । ದಕ್ಷತೆಯ ಕರುಣಿಸೈ ನಮಿಪೆ ಗಣಪ ॥ 1 ॥

## ವಾರ್ಧಿಕ

ಭಾಗವತ ಸಪ್ತಾಹ ಮಹಿಮೆಯನು ಸಾರುತಿಹ । ಆಗಮವು ದುಂಧುಕಾರಿಯ ಮಹಾವೃತ್ತಾಂತ । ವೀಗಿದನು ಯಕ್ಷಗಾನದೊಳೊರೆವೆ ಪ್ರೇತೋದ್ಧರಣ ಕತೆಯ ಸ್ವೀಕರಿಪುದು ॥ ರಾಗತಾಳವನರಿಯೆ ಪದ್ಮ ಪೌರಾಣದಲಿ । ಯೋಗಿ ವ್ಯಾಸರುಲಿದುದಕಾಕರ್ಷಣೆಯ ಹೊಂದಿ । ಹೈಗರೊಳು ಪುಟ್ಟಿರುವ ಇಟಗಿಯ ಮಹಾಬಲೇಶ್ವರ ಭಟ್ಟ ವಿನಯದಿಂದ ॥ 1 ॥

## ಮಧ್ಯಮಾವತಿ ತ್ರಿವುಡೆ

ತುಂಗಭದ್ರೆಯ ತಟದಿ ವಿಪ್ರೋ । ತ್ತುಂಗ ನಾಗಿಹ ಆತ್ಮದೇವನು । ಸಾಂಗ ವೇದವನರಿತು ಬಾಳಿದ । ಕೆಂಗದಿರ ಪ್ರಭೆ ಹೊಂದುತ । ಮಾನ್ಯನಾಗಿ ॥ 2 ॥ ಪತ್ನಿ ದುಂಧುಲಿ ಕುಲಜೆ ಸುಂದರಿ । ರತ್ನ ಸಹಸಂಪದವು ತುಂಬಿದೆ । ಆತ್ಮಜರ ಹೊಂದದಲೆ

ಕೊರಗಿದೆ । ಯತ್ನ ವ್ಯರ್ಥವುಜೀವನ ॥ ಬಂಜೆಯಾಯ್ತು ॥ 2 ॥ ದಾನಸಹಕರ್ಮಂಗಳಿಂದಲು । ಕಾಣದಿಹೆ ಸಂತತಿಯ, ಕರ್ಕಶ । ಮಾನಿನಿಯ ಜತೆ ಬಾಳಲಾರೆನು । ಕಾನನದ ಸಂಚಾರವು ॥ ಎನಗೆ ಗತಿಯು ॥ 3 ॥

## ಭಾಮಿನಿ

ಭಾರವಾಯಿತು ಎನ್ನ ಬಾಳುವೆ । ಸಾರಿ ಜಗಸಂಚಾರಗೈಯ್ಯಲು । ಪಾರುಗಾಣಿಸುವವರ ಕಾಣೆನು ವ್ಯಥೆಯೆ ಜತೆಯಾಯ್ತು ॥ ಗಾರು ಗೆಟ್ಟಿಹೆನೆಂದು ದಾಹವ । ತೀರಿಸಲು ನೀರ್ಕುಡಿದು ಶ್ರಮವ ನಿ । ವಾರಿಸುತ ಕುಳ್ಳಿರೆ ಶಿವಂಕರನೆಂಬ ಯತಿ ಬಂದ ॥ 1 ॥

## ಕಂದ

ಬಂದಾ ಯುತಿಯಂ ಕಂಡಾ । ನಂದ ವಿಹೀನನು ವಿಷಾದ ಭಾವದೊಳಾಗಂ ॥ ವಂದಿಸಿರಲ್ಕೆ ಶಿವಂಕರ । ಕುಂದುಗಳೇನೆಂದು ನುಡಿಸಿದಂ ಬಲು ದಯೆಯಿಂ ॥1॥

## ನಾದನಾಮ ಕ್ರಿಯೆ ಅಷ್ಟತಾಳ

ಶುಭವಾಗಲೇಳು ಸದ್ವಿಪ್ರನೆ । ನೀ । ನಭದೆಡೆ ಮಾಡಿದೆ ಮೊಗವನೆ ॥ ಪ್ರಬಲ ಕಾರಣವೇನು ಚಿಂತೆಗೆ । ನೀನ । ನುಭವಿಪುದನ್ನು ಸೊಲ್ಲಿಸೆನಗೆ ॥ 1 ॥

## ವರಾಳಿ ಏಕತಾಳ

ಉಸಿರಲೆಂತು ಮನದಯಿರವ । ಓ ಮಹಾತ್ಮ । ಬಾಳು । ಟಿಸಿಲದಿರದೆ ಬರಡದಾಯ್ತು । ಓ ಮಹಾತ್ಮ ॥ ಹಸುವು ಕೂಡ ಬಂಜೆಯಾಯ್ತು । ಓ ಮಹಾತ್ಮ । ನೆಟ್ಟ । ಸಸಿಯು ತಾನು ಫಲವ ಕೊಡದು । ಓ ಮಹಾತ್ಮ ॥ 1 ॥ ಜನ್ಮಾಂತರದ ಪಾಪಶೇಷ । ಓ ಮಹಾತ್ಮ । ಎನ್ನ । ಬೆನ್ನ ಬಿಡದು ಭಾರವಾಯ್ತು । ಓ ಮಹಾತ್ಮ ॥ ಬನ್ನಗಳನು ಸಹಿಸಲೆಂತು । ಓ ಮಹಾತ್ಮ । ಪ್ರಾಣ । ವನ್ನು ಬಿಡುವುದೊಂದೆ ದಾರಿ । ಓ ಮಹಾತ್ಮ ॥2॥ ಇಷ್ಟು ಮಾತ ಕೇಳುತಾಗ । ಯತಿವರೇಣ್ಯ । ಜ್ಞಾನ । ದೃಷ್ಟಿಯಿಂದ ತಿಳಿದನೆಲ್ಲ । ಯತಿವರೇಣ್ಯ ॥ ಸ್ಪಷ್ಟವಾಯ್ತು ಸುತವಿಹೀನ । ದ್ವಿಜವರೇಣ್ಯ । ಅ । ದೃಷ್ಟ ಭಾಗ್ಯಹೀನನೀತ । ದ್ವಿಜವರೇಣ್ಯ ॥ 3 ॥

## ಕಾಪಿ ಏಕತಾಳ

ಸಂತತಿಯ ಕುರಿತಂತೆ ನೀನತಿ ಚಿಂತೆ ತಾಳಿಹೆಯ । ಜೀವನ । ಸಂತೆ ಸರಕೆಂಬಂತೆ ತಿಳಿಯದೆ ಇಂತು ಬಾಳಿಹೆಯ ॥ ಸಗರನು । ಪಿಂತೆ ಸುತ ರರುವತ್ತು ಸಾವಿರ । ವಾಂತು ಸುಖಿಯಾಗದಲೆ ಬದುಕಿದ ॥ ಅಂತರಂಗದೊಳರಿತೆ ಪುತ್ರರು । ಮುಂತೆ ಸಪ್ತ ಪ್ರಸೂತಕಿಲ್ಲವು ॥ 1 ॥

## ಮಧ್ಯಮಾವತಿ ಏಕತಾಳ

ಯತಿಯೆ ನಿಮ್ಮಯ ಬೋಧೆ ಮನವ ಮುಟ್ಟದು ವ್ಯರ್ಥ । ಸತಿಸುತ ರೊಂದಾದ ಗಾರ್ಹಸ್ಥ್ಯ ಶ್ರೇಷ್ಠ ॥ ಅತಿಶಯ ತಪಫಲದಿಂ ಸಂತಾನವ ನೀಡು । ಗತಿಯನ್ಯವಿಲ್ಲ ಸಾವಲ್ಲದಿಂದೆನಗೆ ॥ 1 ॥

## ಸಾಂಗತ್ಯ ರೂಪಕತಾಳ

ಹಟವೇಕೋ ದ್ವಿಜವರಾಪತ್ಯರಿಂ ಬಲುಕಷ್ಟ । ಜಟಿಲಕೆ ಪರಿಹಾರವಿರದು॥ ನಿಟಿಲದ ಲಿಪಿ ಮೀರಲಸದಳವರಿತುಕೊ । ಕುಟಿಲವಿಲ್ಲದ ಮಾರ್ಗಕೆಳಸು ॥ 1 ॥ ಇಷ್ಟಾಗಿ ಬೇಡುವೆಯಾದರೆ ಫಲವಸಂ । ತುಷ್ಟಿಯೊಳ್ ಕೊಟ್ಟಪೆನಿದನು ॥ ಹೃಷ್ಟಮಾನಸದಿಂದ ಸತಿಯು ಸ್ವೀಕರಿಸಲಿ । ಇಷ್ಟಾರ್ಥ ಕೈಗೂಡಲಹುದು ॥ 2 ॥ ಅಬ್ದವೊಂದನು ವ್ರತ ನಿಯಮವಾಚರಿಸಲಿ । ಉದ್ಭವಿಪನು ಪುತ್ರನೋರ್ವ ॥ ಶುದ್ಧಚಾರಿತ್ರ್ಯದಿಂ ಬೆಳಗಿ ತನ್ನಯ ಕುಲ । ಉದ್ಧರಿಪಂತಹನಹನು ॥ 3 ॥ ಆಶೀರ್ವದಿಸುತ ಸನ್ಯಾಸಿ ತಾಂ ತೆರಳಲ್ಕೆ । ಆಶಯ ಕೈಗೂಡಿತೆಂದು ॥ ತೋಷವ ಹೊಂದುತಲಾಕ್ಷಣ ವಿಪ್ರನಾ । ವಾಸದೆಡೆಗೆ ಮರಳಿದನು ॥ 4 ॥ ಮೋದದೊಳಾತ್ಮದೇವನುಮನೆಯೊಳ ಹೊಕ್ಕ । ಕಾದಲೆಯಾದಾ ದುಂಧುಲಿಯು ॥ ಆದರಿಸಿದಳೇನು ಸರ್ವಥಾ ಇಲ್ಲವು । ಮೂದಲಿಸಿದಳಾಗ ಪತಿಯ ॥ 5 ॥

## ನಾಟಿ ಅಷ್ಟತಾಳ

ಬಂದಿರೆ । ಮನೆಗೆ । ಬಂದಿರೆ ॥ ಪ ॥ ಬಂದಿರೇನೂರೂರ ಚೆಂದದಿ ತಿರುಗಿ । ಭೂ । ವೃಂದಾರಕರ ಶ್ರೇಷ್ಠರೆಂದೆಂಬ ಬಿರುದಿದೆ ॥ ಅ.ಪ. ॥ ಗೃಹದೊಳು ಪತ್ನಿಯ । ಬಹು ಕಷ್ಟವರಿಯದೆ ॥ ಕುಹಕಿ ಯಂದದಿ ನಿತ್ಯ । ಮಹಿಯೊಳು ತಿರುಗಾಡಿ ॥ 1 ॥

ನೀಲಾಂಬರಿ ಆದಿತಾಳ

ಗೊಣಗಲೇಕೆ ಮಡದಿ ನಾನು । ತೃಣ ಸಮಾನನೇನೆ ॥ ಘನತಪೋ ನಿಧಿಯ ಕರುಣೆ । ಯನುವನಾಂತೆ ಜಾಣೆ ॥ 1 ॥ ಹಣ್ಣ ಸೇವಿಸುತ್ತ ನಿಯಮ । ವನ್ನು ವರ್ಷವೊಂದ ॥ ಇನ್ನಾಚರಿಸೆ ದೊರೆವ ಗುಣ ಸಂಪನ್ನನಾದ ಕಂದ ॥ 2 ॥

## ಕಂದ

ಬಲುತರ ಶ್ರದ್ದೆಯ ತಳೆದೀ । ಫಲವಂ ಭುಂಜಿಸೆ ಕುಮಾರ ನುದಿಪಂಯೆಂದುಂ ॥ ಉಲಿಯುತ ನೀಡ್ದುದ ಕಂಡಂ । ಸಲೆ ಭಾಮಿನಿ ಕೊಂಡು ಮನದಿ ಚಿಂತಿಸುತಾಗಂ ॥ 1 ॥

## ನೀಲಾಂಬರಿ ರೂಪಕತಾಳ

ಕೃಪೆದೋರದ ವಿಧಿ ಕ್ರೂರತೆ । ಕಪಟವ ಮೆರೆಯುತ ಗೈವನೆ । ವಿಪರೀತವಿದಾಯಿತು ಬದು । ಕಪಹಾಸ್ಯವದಾಯ್ತೆ ॥ 1 ॥ ಅರ್ಭಕ ಗೀವರೆ ಜನ್ಮವ । ಗರ್ಭವ ಕಟ್ಟಿದರೆನ್ನಯ । ನಿರ್ಭರ ದೇಹಕ್ಕೆಲ್ಲಿದೆ । ನಿರ್ಭಯವೀದಿನದಿ ॥ 2 ॥ ನಿಯಮವ ಪಾಲಿಸಿ ಸನ್ಯಾ । ಸಿಯು ನುಡಿದಂತೆಯೆ ನಡೆವೆನೆ । ಭಯವಪ್ಪುದು ಮುಂದಹ ಬಾ । ಧೆಯ ನೆನೆ ನೆನೆದರೆಯು ॥ 3 ॥ ಕಷ್ಟಗಳೆಲ್ಲವ ಕಂಡರೆ । ಪುಟ್ಟುವುದಿದು ಸ್ತ್ರೀ ಜನ್ಮವು । ಇಷ್ಟವೆ ಬಂಜೆಯೊ ವಿಧವೆಯ । ಪಟ್ಟವೆ ಲೇಸಹುದು ॥ 4 ॥

## ಭಾಮಿನಿ

ತಿನ್ನಲಾರೆನು ಹಣ್ಣನೆಂದಿಗು । ಮುನ್ನ ವಲ್ಲಭಗೊರೆವೆ ಸುಳ್ಳನು । ಗನ್ನಘಾತಕ ವಿಷಯಕೆಲ್ಲಿದೆ ಮನದ ಹೊಂದಿಕೆಯು ॥ ಅನ್ನೆಗೈತಂದಿರುವ ಸಹಭವೆ । ಯನ್ನು ಕುಳ್ಳಿರಿಸುತ್ತ ಪೇಳ್ದಳು । ಖಿನ್ನಗೊಳಿಸುವ ಸಾಂಗ ಸಂಗತಿಯೆಲ್ಲ ವಿಸ್ತರದಿ ॥ 1 ॥

## ಕೇದಾರಗೌಳ ಝಂಪೆತಾಳ

ಎನೆಕೇಳ್ದು ನಗುತಲಾಗ । ಅಗ್ರಜೆಗೆ । ವನಿತೆಯುಸುರಿದಳು ಬೇಗ ॥ ಘನ ಸಮಸ್ಯೆಗೆ ಉತ್ತರ । ಪುಡುಕಿದರೆ । ಮನಕೆಟುಕದೇಂ ಹತ್ತಿರ ॥ 1 ॥ ಅಕ್ಕ ಕೇಳಿದಕೆ ಚಿಂತೆ । ತಾಳುವೆಯ । ತಕ್ಕುಪಾಯವಿರುವಂತೆ ॥ ವಕ್ಕರಿಸಿತೆನಗೆ ಬಸಿರು । ಹೆತ್ತಾಗ । ಇಕ್ಕುವೆನು ಮಡಿಲಿಂಗಿರು ॥ 2 ॥ ವಲ್ಲಭಗೆ ನಾ ಪೇಳ್ವೆನು । ಸ್ವಲ್ಪ ಧನ । ಸಲ್ಲಿಸಿದರನುಕರಿಪೆನು ॥ ಚೆಲ್ವೆ ಬಸುರಿಯ ತೆರದಲಿ । ನಟಿಸುತ್ತ । ಮೆಲ್ಲನೀನಿರು ಗೃಹದಲಿ ॥ 3 ॥ ಉಸುರುವೆನು ಸಟೆಯ ಜನಕೆ । ಷಣ್ಮಾಸ । ಬಸಿರು ನೀರಾಯ್ತುದಿರಕೆ ॥ ಶಿಶುಪೋಷಕೈತರುವೆನು । ಗುಟ್ಟಾಗಿ । ವಸಗೆಯನು ಹಬ್ಬಿಸುವೆನು ॥ 4 ॥ ಬಚ್ಚಿಟ್ಟ ಫಲವ ನೀನು । ಗೋವಿಂಗೆ । ಇಚ್ಚಿಸುತ ತಿನಿಸು ಸೂನು ॥ ಅಚ್ಚರಿಯೊಳುದಿಪನೇನು । ತಿಳಿವಂಥ । ಅಚ್ಚ ಹೊಸ ಕಾಲವನ್ನು ॥ 5 ॥ ಕಾಯುವುದು ಸಮವೆನ್ನುತ । ಭಾಮಿನಿ ನಿ । ಕಾಯಕಾಗಲೆ ಪೊರಡುತ ॥ ಆಯತಾಕ್ಷಿಯ ಕಳುಹಿಸಿ । ದುಂಧುಲಿಯು । ಆಯಗೊಂಡಳು ಹರುಷಿಸಿ ॥ 6 ॥

## ಕಂದ

ತಂಗಿಯ ಸೂಚನೆ ಯೊಪ್ಪುತ । ಅಂಗನೆ ಸಂತಸವ ತಳೆದು ತಾನಿರಲಿತ್ತಂ ॥ ಓಂಗಿತು ಕಾಲಂ ಕೆಲವು ವಿ । ಸಂಗತವೆಣಿಸದೆ ನಿಜಾಲಯದಿ ದ್ವಿಜನಿರ್ದಂ ॥ 1 ॥

## ಭೈರವಿ ಝಂಪೆತಾಳ

ಕಾಲಾಂತರಕೆ ತಂಗಿ । ಬಾಲಕನ ಹೆರಲು ನುಡಿ । ಪಾಲಿಸುವೆನೆಂದು ಶಿಶು । ವಾಲಯಕೆ ತಂದ ॥ 1 ॥ ಮೈದುನನ ದ್ರವ್ಯದಿಂ । ದಾದರಿಸಿ ಮಡದಿ ಯಾ । ಹ್ಲಾದದಲಿ ಪತಿಗೆ ಶಿಶು । ವಾದುದೆನುತುಸುರೆ ॥ 2 ॥ ಮೋದವಾಂತನು ವಿಪ್ರ । ಮೇದಿನೀ ಸುರರಿಗೆ ಮ । ಹಾದಾನಗಳನಿತ್ತು । ಗೈದ ಶುಭ ಕಾರ್ಯ ॥ 3 ॥ ದುಂಧುಕಾರಿಯು ಎಂಬ । ಬಂಧುರದ ಪೆಸರಿಟ್ಟು । ಹೊಂದಿದನು ಸಂತಸವ । ನಂದು ಸದ್ವಿಪ್ರ ॥ 4 ॥ ಒಂದು ದಿನ ಪತಿಯ ಕರೆ । ದೆಂದಳಾ ದುಂಧುಲಿಯು । ಬಿಂದು ಸಹ ಸ್ತನ್ಯವನು । ಹೊಂದದಿಹೆ ನಾನು ॥ 5 ॥ ಎನ್ನ ತಂಗಿಗೆ ಶಿಶುವು । ಮುನ್ನ ದಿವಕೈದುದುದು । ಸ್ತನ್ಯವನ್ನುಣ್ಣಿಪಳು । ಮನ್ನಣೆಯನೀಯೊ ॥ 6 ॥ ಅಸ್ತ್ವೆಂದು ತಾನೊಪ್ಪಿ । ಅತ್ತಲಿರ್ದನು ದ್ವಿಜನು । ಉತ್ತಮದ ಫಲತಿಂದ । ಸ್ವಸ್ಥದಲಿ ಗೋವು ॥ 7 ॥

## ವಾರ್ಧಿಕ

ಪೂರ್ಣತೇಜದ ಶಿಶುವ ಪೆತ್ತಿತಾ ಗೋಷ್ಪದಲಿ । ಕರ್ಣಮಾತ್ರವು ಗೋವು ಕಾಂತಿಯಲಿ ಶಶಿ ತೆರ ಗು । ಣಾರ್ಣವನಹನು ಮುಂದೆ ಬೆಳೆವ ಸಿರಿ ಮೊಳಕೆಯೊಳಗೆಂದೆಂಬ ತೆರನ ತೋರ್ದ ॥ ನಿರ್ಣಯವ ದೇನೊ ದೈವದ ಲೀಲೆಯಲ್ಲದೊಡೆ । ಜೀರ್ಣಭಾಗ್ಯನು ದ್ವಿಜನು ಮಡದಿಯಿಂ, ಹಸುವಿನಿಂ । ಘೂರ್ಣಿಸಿತು ಪುತ್ರ ಸೌಭಾಗ್ಯವೆನುತಾಡಿ ಕೊಂಡಾಡುತಿರ್ದಸರ್ವರು ॥ 1 ॥ ಇಳೆಯ ಸುರರೊಳಗಧಿಕನಾತ್ಮ ದೇವನು ತಾನು । ಒಳಗೊಳಗೆ ಗೊಂದಲದಿ ಮನವಾರೆ ಚಿಂತಿಸಿದ । ಫಲವಿತ್ತ ಯತಿ ವಾಕ್ಯ ಪುತ್ರ ಸೌಭಾಗ್ಯ ವಿರಹಿತನು ನಾನಲ್ತೆಯಿಂದು ॥ ಸಲೆ ದ್ವಿಗುಣ ಸುತಲಾಭವೆಂತಾಯ್ತು ತಿಳಿಯದಿಹೆ । ಲಲನೆ ದುಂಧುಲಿಮರ್ಮವರಿತಿಹಳೊ ಕಾಣೆನವ । ಳೊಳು ವಿಚಾರಿಸೆ ವ್ಯರ್ಥ; ಕಂದರುಭಯರ ಸಾಕುತಲಿ ಸಂತಸವಕಾಂಬೆನು॥ 2 ॥

## ಮಧುಮಾಧವಿ ತ್ರಿವುಡೆ

ವಿಮಲ ಭಾವವ ತಳೆದು ತಾಕೆಲ । ಸಮಯ ಕಳೆಯಲು ಆತ್ಮದೇವನು । ಸಮನಿಸಿದ ಪುತ್ರಂಗೆ ಪೆಸರನು । ಗಮಕದೊಳಗಿಡೆ ಯೋಚಿಸಿ ॥ 1 ॥ ಕಿವಿಯು ಗೋವಿನ ಕಿವಿಗೆ ಸಮವಿದೆ । ಕುವರಗಾಹುದು ನಾಮಕರಣವು । ಭುವಿಯ ಜನ ಗೋಕರ್ಣನೆನ್ನುತ । ಹವಳೆಯಣುಗನ ಕರೆಯಲಿ ॥ 2 ॥

## ಸುರುಟಿ ಏಕತಾಳ

ತರಳರು ದಿನದಿನಕೆ । ಬೆಳೆದುದ । ಪರಿಕಿಸಿ ಸಂತಸಕೆ ॥ ಪರಿಮಾಣಂಗಳ ನಿರುಕಿಸಲಾರದೆ । ಉರುತರದುಲ್ಲಾಸದೊಳಿರ್ದನು ದ್ವಿಜ ॥ 1 ॥

## ಮಾರವಿ ಝಂಪೆ

ಬಲು ಶ್ರಮದಿ ವಿದ್ಯೆಗಳ ಗಳಿಸಿದನು ಗೋಕರ್ಣ । ಚೆಲುವ ಪಂಡಿತರ ಪಂಕ್ತಿಯಲಿ ಸನ್ಮಾನ್ಯ ॥ ತಳುವದಲೆ ಜ್ಞಾನ ಸಂಪಾದಿಸುತ ಜನಮನವ । ಸೆಳೆವಂಥ ರೂಪಿನಲಿ ಕಂಗೊಳಿಸಿ ಮೆರೆದ ॥ 1 ॥ ಉದ್ಧಟನು ದುಂಧುಕಾರಿಯು ಕಿರಿಯನಿಗೆ ತದ್ವಿ । ರುದ್ಧದ ಸ್ವಭಾವದೊಳು ಬೆಳೆದನಾ ದಿನಕೆ ॥ ಶುದ್ಧ ಮೂಢನು ಸ್ನಾನ ಶೌಚವನು ತೊರೆವುತ್ತ । ರಾದ್ಧಾಂತವೆಸಗುತ್ತ ತಾನಿರ್ದನಲ್ಲಿ ॥ 2 ॥ ವಿದ್ಯೆ ರುಚಿಸದು ಶ್ರದ್ಧೆಯಾಚಾರ ಶಾಸ್ತ್ರಗಳ । ಹದ್ದು ಮೀರುವ ಬಗೆಗೆ ಬಲು ಸೆಳೆತವೆನಗೆ ॥ ಹೊದ್ದಿರುವ ಬದುಕು ಶಾಶ್ವತವಲ್ಲ ಸಕಲ ಸುಖ । ವಿದ್ದಾಗಲನುಭವಿಸಿ ಬಾಳುವುದು ವಿಹಿತ ॥ 3 ॥ ವೆಚ್ಚಕ್ಕೆ ಹೊನ್ನಿಲ್ಲದೊಡೆ ಪರರ ಧನವನ್ನು । ಎಚ್ಚರದಿ ಕದ್ದೊಡೆಯು ತಪ್ಪಲ್ಲ ತಿಳಿದೆ ॥ ಕಿಚ್ಚನಿಡು ಹೆರರ ಮನೆಗಳಿಗೆ, ಮಕ್ಕಳ ಭಾವಿ । ಗಿಚ್ಚಿಸುತ ನೂಕುವುದು ಹಿತವಪ್ಪ ಕಾರ್ಯ ॥ 4 ॥ ಅಂಗಹೀನರ ಕಂಡು ಅಪಹಾಸ್ಯಗೈಯುವುದು । ಅಂಗವಸ್ತ್ರವ ಸೆಳೆಯಲಮರುವುದು ತೋಷ ॥ ಅಂಗನೆಯ ಸಹವಾಸ ಕೆಣೆಯುಂಟೆ ಜಗದಿ ಸರ್ವಾಂಗ ಸುಖವೀವ ಭೋಗದ ಶಿಖರ ವೈಸೆ ॥ 5 ॥

## ಭೈರವಿ ಅಷ್ಟತಾಳ

ಇಂದೋರ್ವ ವೇಶ್ಯೆಯನು । ಸಂಧಿಸೆ ಪೋಗು । ವಂದವ ಪೇಳ್ವೆಯೇನು ॥ ದಂದುಗವೇನೆನಲಂದಿನ ಸಾಲವ । ಹೊಂದಿಸದಿರೆ ಸಾಗದು ॥ 1 ॥ ತಂದೆಯ ಕೇಳುವೆನು । ಕೊಡದಿರೆ ತಾಯಿ । ಯಿಂದಾದ ರಾನದನು ॥ ಹೊಂದುತ ಧನವನಾ । ನಂದವ ಪಡೆವರೆ । ಇಂದನುಕೂಲವಾಯ್ತು ॥ 2 ॥

## ಸುರುಟಿ ಏಕತಾಳ

ಜನಕನೆ ಧನಗಳನು । ನೀಡುತ । ಮನಸಿಗೆ ತೋಷವನು । ಅನುಕರಿಸಿದರೆಯು । ಘನಹಿತವಲ್ಲದೆ । ನೆಣಗೊಬ್ಬನು ತೋರ್ದರೆ ಮದ್ದರೆವೆನು ॥ 1 ॥

## ಜಂಗಾಲ ಏಕತಾಳ

ಮನೆಯೊಳಗೇನಿದೆ ಪಾತ್ರೆ ಪದಾರ್ಥವು । ದಿನದಿನ ಪೀಡಿಸಿದೆ ॥ ಹೆಣನ ಸಮಾನರು ತಾಯ್ತಂದೆಗಳಿರೆ । ಅನುಕೂಲವೆನಿಸಿದರೊಯ್ಯುವುದೆ ॥ 1 ॥

## ಶಂಕರಾಭರಣ ಮಟ್ಟೆತಾಳ

ಮಸಣಕಲ್ಲವಿಂದು ನಾನು ತೆರಳುತಿರುವುದು । ಪುಸಿಯ ನುಡಿಯೆ ನಿನ್ನ ತುಳಿವೆ ಬಿದ್ದು ಸಾಯ್ವುದು ॥ 1 ॥

## ದ್ವಿಪದಿ

ದುಂಧುಕಾರಿಯು ಇಂತೆನುತ ತುಳಿದು ತಿರುಗಿ । ಹೊಂದಿರಲು ದ್ವಿಜವರನು ಗೋಳೆಂದ ಮರುಗಿ ॥ 1 ॥

ಆನಂದ ಭೈರವಿ ಏಕತಾಳ

ಶಿವ ಶಿವಾಯಿಂದೇನಿದಿಂಥಾ । ಬವಣೆಯಾಯ್ತು ತಿಳಿಯದಾದೆ । ಹವಣಗಳನು ಯಾರೊಳೀಗ । ಹೇಳಲಿ । ಹೇಗೆ । ತಾಳಲಿ ॥ 1 ॥ ಎಷ್ಟೋ ಜನ್ಮಗಳಲಿಗೈದ । ಒಟ್ಟು ಪಾಪವೆಲ್ಲ ಸೇರಿ । ದುಷ್ಟ ಪುತ್ರ ಪುಟ್ಟುವಂತೆ । ಆಯಿತೆ । ಮಾನ । ಹೋಯಿತೆ ॥ 2 ॥ ಮಡೆಯನ ಪ್ರಸೂತಕಿಂತ । ಮಡದಿ ಬಂಜೆತನವೆ ಲೇಸು । ಒಡನೆ ಮುಕ್ತಿ ಪಡೆಯೆ ವಿಷವ । ಕುಡಿವೆನು । ದಿವಕೆ । ನಡೆವೆನು ॥ 3 ॥

## ದ್ವಿಪದಿ

ಎಂದು ಯೋಚಿಸುತಿರ್ಪ ಪಿತನ ಸಮ್ಮುಖಕೆ । ಕಂದ ಗೋಕರ್ಣ ಬಂದೆಂದ ನೇನೆಣಿಕೆ ॥ 1 ॥

## ಕಲ್ಯಾಣಿ ಏಕತಾಳ

ಮಗನೆ ನಿನಗೆ ಮೊಗವದೋರಲು । ನಾ ಶಕ್ತನಲ್ಲ । ಬಗೆಯನೆಲ್ಲವನ್ನು ತಿಳುಹಲು ॥ ಹಗೆಯ ತೆರದಿ ಆತ್ಮಜಾತನು । ದಿನದಿನದಿ ನಮ್ಮ । ಬಗಿದು ಪೀಡಿಸುತ್ತಲಿರ್ಪನು ॥ 1 ॥

## ಮಧುಮಾಧವಿ ತ್ರಿವುಡೆತಾಳ

ಕೇಳುತಲಿ ಗೋಕರ್ಣನೆಂದನು । ತಾಳಿ ಚಿಂತೆಯ ದಿನದಿನವು ಮುಳು । ಗೇಳಲೇನಿದೆ ಹೀಗಿರಲು ಯಮ । ನಾಲಯವೆ ಗತಿಯಪ್ಪುದು ॥ 1 ॥

## ಕೇದಾರ ಗೌಳ ಅಷ್ಟತಾಳ

ಅಪ್ಪ ಚಿಂತಿಪುದೇಕೆ ಸಂಸಾರವೆಂಬುದು । ತಪ್ಪದ ಗೋಳಾಟವು ॥ ಅಪ್ಪನಾರಿಗೆ ಮಕ್ಕಳಾರಿಗೆ ಧನ ಧಾನ್ಯ । ವಿಪ್ಪಷ್ಟು ದಿನ ಬಂಧವು ॥ 1 ॥ ದೀಪದಿ ತೈಲವಿರುವ ವೇಳೆ ಜ್ಯೋತಿ ಪ್ರ । ದೀಪಿಸಿ ಜ್ವಲಿಸುವುದು ॥ ಪ್ರಾಪಂಚಿಕದ ವಸ್ತುಗಳ ಸ್ನೇಹ ದುಃಖಾಗ್ನಿ । ತಾಪವ ವರ್ಧಿಪುದು ॥ 2 ॥ ತ್ವಚೆಯ ತುರಿಕೆ ಕೆರೆದರೆ ಹಿತದನುಭವ । ಉಚಿತ ಮದ್ದಲ್ಲವಷ್ಟೆ ॥ ಖಚಿತ ಭೇಷಜವಿಲ್ಲದೊಡೆ ಗಾಯವಪ್ಪುದು । ರಚಿಪುದು ಪರಿಹಾರವ ॥ 3 ॥ ಸುಖದ ಭ್ರಾಂತಿಯನೀವ ಸಂಸಾರ ಮಾರ್ಗವು । ಸಕಲ ಕಷ್ಟದ ಖನಿಯು ॥ ಅಖಿಲ ಮೋಹಂಗಳು ನರಕಕಾಶ್ರಯವೈಸೆ । ನಿಖರ ಜ್ಞಾನಕ್ಕೆಳಸು ॥ 4 ॥

## ಸಾರಂಗ ಅಷ್ಟತಾಳ

ಒಂದಂತೂ ಪರಮಸತ್ಯ । ಕಾಣುವ ಜಗ । ದಂದವು ಬರಿದೆ ಮಿಥ್ಯ ॥ ಸಿಂಧುವಸನಪತಿಗಾಗಲಿ ಮತ್ತೆ ಮ । ಹೇಂದ್ರಗಾಗಲಿ ದುಃಖ ದುಮ್ಮಾನ ತಪ್ಪದು ॥ 1 ॥ ಏಕಾಂತವಾಸಿಯಾದ । ರಾಗದ್ವೇಷವಿ ।ವೇಕದಿ ತಾನೇ ಗೆದ್ದ ॥ ಲೋಕದೊಳವನೊಬ್ಬ ಪರಮ ಸುಖಾನ್ವಿತ । ನೀ ಕಾಡ ಸೇರಿ ವಿರಕ್ತನಾಗಿರ್ಪುದು ॥ 2 ॥

## ಭಾಮಿನಿ ಅರ್ಧ

ಎಂಬನುಡಿ ಕೇಳುತಲಿ ಮನಸಿಗೆ । ತಂಬೆಲರು ಸುಳಿದಂತದನುಭವ । ಬಿಂಬಿಸಲುತದ್ವಿಪ್ರ ಕಂಬನಿಗರೆದು ಸುತಗೆಂದ ॥ 1 ॥

## ಶಹನ್ ಏಕತಾಳ

ಅಜ್ಞಾನ ತಿಮಿರದೋಳ್ ತೊಳಲಾಡಿ । ಸತ್ಯ । ಪ್ರಜ್ಞೆಯ ಕೊರತೆಯೊಳೋಲಾಡಿ ॥ ಅಜ್ಞತೆ ಮೈವೆತ್ತ ಬದುಕಿಗೆ ಧಿಕ್ಕಾರ । ಸುಜ್ಞಾನಿ ನೀ ಪೇಳು ವನದೊಳೇಂ ಗೈಯಲಿ ॥ 1 ॥

## ಆರ್ಯ ಸವಾಯಿ ಏಕತಾಳ

ಎನೆ ಕೇಳುತ ಗೋಕರ್ಣನು ಪೇಳಿದ । ಜನಕನೆ ಬಿಡು ಮನಸಿನ ವ್ಯಥೆಯ ॥ ಕ್ಷಣ ಭಂಗುರವಾದೀ ಜಗತಿಯ ಗತಿ । ಅನುಕರಿಸಿರೆ ಹಾನಿಯು ಸಿದ್ಧ ॥ 1 ॥ ಊಹಿಸಲೇನಿದೆ ರಕ್ತ ಮಾಂಸದಿಂ । ದಾಹ ಶರೀರವು ನಾಶಮುಖಿ ॥ ಮೋಹವ ತೊರೆ ಹೆಂಡತಿ ಮಕ್ಕಳ ಸಂ । ದೋಹವು ಬಂಧನ ಕಾರಕವು ॥ 2 ॥ ಆ ಘನ ಸ್ಫೋಟದಿ ಸಿಡಿದಿಹ ಕಿಡಿಗಳು । ಈಗಣ ಭೌತಿಕ ವಸ್ತುಗಳು ॥ ಯೋಗಾಕರ್ಷಣೆ ಸಹಜ ಸ್ವಭಾವವು । ಭೋಗಾಪೇಕ್ಷಿತ ಸೆಳೆತಗಳು ॥ 3 ॥ ಗುರುತರವಾಗಲು ಪುನರಪಿ ಪತನವೆ । ಅರಿವನು ಹೊಂದುತ

ಮುನ್ನಡೆಯೆ ॥ ಪರಮಾರ್ಥದ ಸತ್‌ಚಿದ್ವಸ್ತುವಿನೊಳ । ಗುರೆ ಸಮ್ಮಿಲನಕೆ ಪಥವಹುದು ॥ 4 ॥ ದೈವ ಲೀಲೆಯಿಂದಾಗಿಹ ಜಗವಿದು । ಭಾವಿಸೆ ಮಾಯಾಲೋಕಗಳು ॥ ಸೋವಿನ ಮಾಯೆಯನರಿಯದೆ ಮುಕ್ತಿಯ । ತಾವನು ಸೇರಲಿಕಸದಳವು ॥ 5 ॥ ನಶ್ವರವಾದ ಪ್ರಪಂಚವನರಿಯುತ । ಶಾಶ್ವತ ಪದವಿಯ ಲಕ್ಷಿಸಲು ॥ ಈಶ್ವರ ತತ್ವೋಪಾಸನೆಯೊಂದೇ । ಹ್ರಸ್ವವ ಹ್ರಸ್ವವ ಗೊಳಿಸುವುದು ॥ 6॥

## ಭಾಮಿನಿ

ನೀ ಕಳೆದು ದುಮ್ಮಾನ ದುಗುಡವ । ಏಕಮನದಲಿ ವನವ ಸೇರುತ । ಲೌಕಿಕದ ಧರ್ಮವನು ತೊರೆ ಸದ್ಧರ್ಮವಾಶ್ರಯಿಸು ॥ ಆಕಲಿತ ಸಾಧುಗಳ ಸೇವಿಸು । ನೂಕು ಕಾಲವ ಭಾಗವತ ಕತೆ । ಯಾಕರಿಸಿ ಕೇಳುತಿರು ಶ್ರೀಕರ ನೊಲುಮೆ ದೊರೆಯುವುದು ॥ 1 ॥

## ಕೇದಾರಗೌಳ ಅಷ್ಟತಾಳ

ಶಾಂತನಾದನು ವಿಪ್ರ ಭ್ರಾಂತಿಯ ಹರಿದೊಗೆ । ದಿಂತೆಂದ ಪುತ್ರನೊಳು ॥ ಜಂತುವಿನಂದದೊಳಿಹ ಬಾಳ್ವೆ ಜ್ಞಾನವ । ನಾಂತರೆ ತಿಳಿಯುವುದು ॥ 1 ॥ ಎನ್ನೊಳಗಾರ್ಜಿತ ಸಗರಜ ಭಸ್ಮಕೆ । ಜಾಹ್ನವಿ ಸ್ಪರ್ಷವಾಯ್ತು ॥ ಹೃನ್ಮನ ತೋಷದೊಳೇಕಾಂತವರಸುತಾ । ರಣ್ಯಕೈದುವೆ ದಿಟವು ॥ 2 ॥ ಅಕ್ಷಯಾತ್ಮನ ಸ್ತೋತ್ರ ಸಾಧು ಸಜ್ಜನ ಸೇವಾ । ಪೇಕ್ಷೆಯೊಳನುದಿನವು ॥ ಮೋಕ್ಷಮಾರ್ಗವನನುಕರಿಸುತ್ತ ಜಗದೊಳು। ಸಾಕ್ಷಿಯಾದಪೆನಷ್ಟೆಯೆ॥ 3 ॥

## ಕಾಂಬೋಧಿ ಝಂಪೆತಾಳ

ಬಂಧಗಳ ಹರಿದೊಗೆದು ಶಾಶ್ವತದ ಘನ ನಿಜಾ । ನಂದದೆಡೆ ದೃಢಮನದಿ ಪೊರಟ ॥ ತಂದೆಯನು ಬೀಳ್ಕೊಂಡು ತೀರ್ಥಯಾತ್ರೆಯ ಬಯಸು । ತಂದು ಪೊರವಂಟಗೋಕರ್ಣ ॥ 1 ॥

## ಸೌರಾಷ್ಟ್ರ ತ್ರಿವುಡೆ ತಾಳ

ಧನವ ಬಯಸುತ ದುಂಧುಕಾರಿಯು । ಜನನಿ ಸನಿಹಕೆ ಬಂದು ಕೇಳಿದ । ಘನ ರಹಸ್ಯದೊಳಿಟ್ಟುದೆಲ್ಲವ । ಚಣದಿ  ನೀಡು ॥ 1 ॥

## ನೀಲಾಂಬರಿ ಏಕತಾಳ

ಮಂದ ಭಾಗ್ಯಳ ಕೇಳ್ವೆಯ । ಲಭ್ಯತೆಯೇನು । ಹಿಂದು ಮುಂದಕೆ ಸೊನ್ನೆಯ ॥ ಹೊಂದಿ ಬಾಳಿದ ಬಂಜೆಯು । ಜೀವನಕ್ಕೆ । ಇಂದು ಬಂದಿದೆ ಸಂಜೆಯು ॥ 1 ॥ ಸ್ವತ್ತುಗಳೇನಿಲ್ಲವು । ಬರಿದಾಯಿತು । ವಸ್ತುವಡವೆಯೆಲ್ಲವು ॥ ಬಿತ್ತರಿಸಲ್ಕೇನಿದೆ । ಜೀವನಸಾರ । ಬತ್ತಿ ಹೋದಂತಾಗಿದೆ॥ 2 ॥

## ದೇಶಿ ಮುಟ್ಟೆ ತಾಳ

ಒಪ್ಪಲಾರೆನು ।ನಾನಿಂ। ತಿಪ್ಪ ಮಾತನು ॥ ಒಪ್ಪಿಸಿದರೆ ಧನವಿದೆಲ್ಲ । ಇಪ್ಪೆ ಭುವಿಯಲಿ ॥ 1 ॥ ಹೇಸಲಾರೆನು । ನಿನ್ನ । ಘಾಸಿಗೈವೆನು ॥ ದೂಷಣಕ್ಕೆ ಬೆದರಲಾರೆ । ಈಸು ದಿಟವಿದು ॥ 2 ॥ ಈಗ ತೆರಳುವೆ । ಮತ್ತೆ । ಬೇಗ ಮರಳುವೆ ॥ ಓಗಡಿಸಿ ಕೃತಾಂತ ಗೀವೆ । ನೀಗಿ ಪ್ರಾಣವ ॥ 3 ॥

## ನಾದ ನಾಮ ಕ್ರಿಯೆ ರೂಪಕತಾಳ

ದೌಷ್ಟ್ಯತನದ ಪರಮಾವಧಿಯ । ದೃಷ್ಟಿಸುತ್ತ ದುಂಧುಲಿಯು । ಕಷ್ಟವಾದ ಬಾಳ್ವೆ ನೆನೆದು । ಎಷ್ಟೊ ನೊಂದಳು ॥ ಕಷ್ಟವಾದ ಬಾಳ್ವೆ ನೆನೆದು ॥ ಎಷ್ಟೊ ನೋಯುತೆಂದಳಾಗ । ದುಷ್ಟಪುತ್ರನನ್ನು ಸಾಕಿ । ಕೆಟ್ಟೆ ನಿಜದಲಿ । ಕೆಟ್ಟೆ ನಿಜದಲಿ ॥ 1 ॥ ಯತಿಯು ಕೊಟ್ಟ ಆಮ್ರ ಫಲವ । ಮತಿಯು ಗೆಟ್ಟು ಹಸುವಿಗಿತ್ತೆ । ಕತೆಯ ಕಟ್ಟಿ ನಂಬಿಸಿರ್ದೆ । ಪತಿಯ ಮೊದಲೊಳು ॥ ಕತೆಯ ಕಟ್ಟಿ ನಂಬಿಸಿರ್ದೆ । ಪತಿಯ ಮೊದಲು ಆಕಳಲ್ಲಿ । ಸುತನು ಪುಟ್ಟಿದಾತ ಜಗದಿ । ಅತುಲ ಜ್ಞಾನಿಯು । ಅತುಲ ಜ್ಞಾನಿಯು ॥ 2 ॥ ಆತ್ಮಘಾತ ಕರ್ಮ ಫಲದು । ರಾತ್ಮನೀತ ಮೃತ್ಯುವಾದ । ಆತ್ಮದೇವ ನೆಂಬ ಪೆಸರ । ಪೊತ್ತ ರಮಣನು ॥ ಆತ್ಮ ದೇವನೆಂಬ ಪೆಸರ । ಪೊತ್ತ ರಮಣ ನೆತ್ತ ಪೋದ । ನರ್ತಿಯರಿಯೆ ಹಾದಿಯೊಂದೆ । ಆತ್ಮಹತ್ಯೆಯು । ಆತ್ಮಹತ್ಯೆಯು ॥ 3 ॥

## ಭಾಮಿನಿ

ರಮಣನೆಲ್ಲಿಗೆ ಪೋದನರಿಯೆನು । ಅಮಿತ ಕ್ರೌರ್ಯದಿ ದುಂಧುಕಾರಿಯು । ದಮನಿಸುವ ದಿನದಿನದಿ ಮತ್ತೀ ಅಗ್ರಹಾರದಲಿ ॥ ಗಮಕ ದಿಂ ಮೊಗದೋರಲೇನಿದೆ । ಭ್ರಮೆಯು ಹರಿಯಿತು ಹಾರಿ ಭಾವಿಗೆ । ಯಮನ ಪುರ ಸೇರುವೆನು ಯಾಮಿನಿಯಾವರಿಸಲಿಂದು ॥ 1 ॥ ಕಾಲವನು ಸಾಧಿಸುತ ಗುಪ್ತದಿ । ಕಾಲನಾಲಯಕೈದಳಂಗನೆ । ಕೇಳುತಾಕ್ಷಣ ದುಂಧುಕಾರಿಯು ಹರ್ಷ ಮಾನಸದಿ ॥ ಅರ್ಧ ॥

## ಬಿಲಹರಿ ಅಷ್ಟತಾಳ

ಸಿಕ್ಕಿತು ಸ್ವಾತಂತ್ರ್ಯವಹಹ । ಮತ್ತೀ । ಮಿಕ್ಕಿನ ಬದುಕೆಲ್ಲ ಪೂರ್ಣ ದುತ್ಸಾಹ ॥ ಉಕ್ಕುವ ತೋಷವೇನೆನಲಿ । ಎನಗೆ । ತಕ್ಕವ ರಾರಿಹರೀ ಜಗದಲ್ಲಿ ॥ 1 ॥ ಸುದತಿಯರೊಳಗಿಂದು ಯಾರು । ನೋಡೆ । ಮದಗಜ ಯಾನೆ ಚಂಪಕೆ ಬಲು ಭೀರು ॥ ಮೊದಲಗಿತ್ತಿಯ ತೆರ ಸುಖದೆ । ನಾನು । ಮುದವನಾಂತಪೆ ಘನ ಭರದೊಳಿಂದಿರದೆ ॥ 2 ॥

## ಪಂತುವರಾಳಿ ಆದಿತಾಳ

ಚೆಲುವೆ ಚಂಪಕಮಾಲಿನಿ । ವಿಟ ಪುರುಷರಿಂ । ಗಲರಂಬು ಮಧುಶ್ಯಾಲಿನಿ ॥ ಒಲಪು ವೈಯ್ಯಾರದಿ ಬೆಳಗು ಬಿನ್ನಾಣದಿ ॥ ಗಿಳಿದೇರನ ಮಡದಿಯು ಸಹ ಸಮನೆನಿ ।

ಪಳೆ ಸೌದಾಮಿನಿ ಪ್ರತಿಮ ಸುಹಾಸಿನಿ ॥ 1 ॥ ಗಮನಕೆ ಕಲಹಂಸವು । ನಾಚುವುದೈಸೆ । ಭ್ರಮರಕುಂತಳೆ ಸ್ವರವು ॥ ಗಮಕ ಕೋಕಿಲ ಗಾನ ಕಮಲಾಯತೇಕ್ಷಣ ॥ ಸುಮನೋಹರದತಿಶಯ ಸೌಂದರ್ಯೋ । ಪಮೆಸುವಿಲಾಸವಿನೋದಿತೆ ವಿಭ್ರಮೆ ॥ 2 ॥

## ಮಧು ಮಾಧವಿ ತ್ರಿವುಡೆ

ಇದಿರುಗೊಂಡಳು ದುಂಧುಕಾರಿಯ । ಮುದದಿ ಮಂಚವನೀಯು ತೆಂದಳು । ಉದಯಭಾಸ್ಕರ ನಿಮ್ಮನಿರಿಸಿಹೆ । ಹೃದಯ ಸಿಂಹಾಸನದಲಿ ॥ 1 ॥

## ನವರೋಜು ಏಕತಾಳ

ಹಾಲನು ಸ್ವೀಕರಿಸುವಿರೆ । ಸೀ । ಯಾಳದ ನೀರಿದೆ ಹೀರೆ ॥ ಬಾಲೆಯ ಮೇಲತಿ ಪ್ರೀತಿಯನಿರಿಸುತ । ಅಲಯಕೈತಂದುದು ಸಂತೋಷವು ॥ 1 ॥

## ಕೇದಾರ ಏಕತಾಳ

ಚೆಲುವೆ । ನಿನ್ನನು ಕಾಣಲು ಮನ । ಮರೆವೆ ॥ ಪ ॥ ಘುಲುಘುಲು ಗೆಜ್ಜೆಯ । ಸಲೆ ದನಿಯಾಲಿಸೆ । ನಿಲದಲೆ ಹೃದಯದಿ । ಕಲರವ ಹಲವಿವೆ ॥ 1 ॥ ಅಶನವನಾಶಿಸಿ । ವಶವಿಹೆ ಶಶಿಮುಖಿ ॥ ಕುಶಲದಿ ನಿಶಿಯಿಡಿ । ಯಶದೆಡೆ ಗಮಿಸುವ ॥ 2 ॥ ರತಿಸಹಗತಿಸುವ । ಅತಿರೂಪಾನ್ವಿತೆ ॥ ಗತಿಶ್ರುತಿಮತಿಯುತೆ । ಸತತವು ಸುಖಿಸುವ ॥ 3 ॥

## ಆರಭಿ ರೂಪಕ ತಾಳ

ನುಡಿಯ ಕೇಳಿ ಹರುಷವಾಂತೆ ಪ್ರೇಮದರ್ಚಕ । ಹೃದಯ । ಮಿಡಿತ ವರಿತೆ ಕೊರತೆಯಿರದೆ ನೀಡುವೆನು ಸುಖ ॥ ಬಡವೆಯನ್ನು ಮರೆತು ಬಿಡದಿರೆಂಬ ಪ್ರಾರ್ಥನೆ । ಸುಖವ । ಪಡೆದಲಕ್ಷ್ಯ ತೋರ್ಪುದೆಲ್ಲ ಸಹಜ ವರ್ತನೆ ॥ 1 ॥

## ಕಲ್ಯಾಣಿ ಆದಿತಾಳ

ಎಂಥಾ ಮಾತಾಡಿದೆಯೆ । ಎನ್ನೊಡನೀಗ । ಕಾಂತೆ ಶಿರೋಮಣಿಯೆ ॥ ಪ ॥ ಆಂತರ್ಯವ ನೀ । ನಿಂತು ತಿಳಿಯದಲೆ । ಅಂತರ ವಿರಿಸುತ । ಚಿಂತೆಯೊಳುಸುರಿದೆ ॥ ಅ.ಪ. ॥ ವನಜ ಲೋಚನೆ ನಿನ್ನನು । ಮರೆಯುವೆನೇನು । ಮನದುಂಬಿ ಪೇಳುವೆನು ॥ ಮನಸಿಜನುರುಬೆಯ । ತಣಿಸುತಲೆನ್ನಯ । ಮನೆಯೊಳಗಿರು ನೀ । ನನುದಿನ ಸ್ವಸ್ಥದಿ ॥ 2 ॥

## ಕಾಂಬೋದಿ ಝಂಪೆತಾಳ

ನಿಮ್ಮ ಬಯಕೆಯನೊಲ್ಲೆನೆನ್ನುವೆನೆ ಹಿತವಾಯ್ತು । ನೆಮ್ಮದಿಯ ಬದುಕ ನಡೆಸುವೆನು ॥ ಕಮ್ಮಗೋಲನಿಗೆ ಪ್ರತಿಯಾಗಿ ನಾನಿರುವೆ ನೆಂ । ದೆಮ್ಮ ನುಡಿ ನಂಬೆಂದಳಾಕೆ ॥ 1 ॥ ನಿನ್ನ ಜತೆ ಮನೆಯೊಳಗೆ ಮತ್ತೆ ನಾಲ್ವರು ತರುಣಿ । ರನ್ನೆಯರಿಹರು ಸರ್ವರೆಸೆಯೆ ॥ ಮನ್ನಿಸುವೆನೆಲ್ಲರನು ಎರಕದಿಂದಲಿ ಬಾಳಿ । ರೆನ್ನಾಸೆಯೆಂದೊರೆದ ದ್ವಿಜನು ॥ 2 ॥

ಅವರೊಡಂಬಡಿಕೆಯೊಳು ಬದುಕುತಿರೆ ಕಾಲ ಚ । ಕ್ರವು ತಿರುಗಿ ತುಂಗಭದ್ರೆಯೊಳು ॥ ಪ್ರವಹಿಸಿತು ಬಹು ನೀರು ಸಂಪದವು ಬರಿದಾಗೆ । ಅವಿರತವು ಧನಕನಕ ಬಯಸಿ ॥ 3 ॥ ಕಾಡಿದರು ಗಣಿಕೆಯರು ಬಲು ದ್ರವ್ಯದಾಸೆಯಲಿ । ಊಡಲುಡಲೇನಿಲ್ಲವಾಯ್ತು ॥ ರೂಢಿಯಮ ರಾರ್ಜನೆಯ ಮಾರ್ಗವನು ಕಾಣದಿರೆ । ಪೀಡಿಸಿದ ದಾರಿಹೋಕರನು ॥ 4 ॥

### ಪುನ್ನಾಗ ಅಷ್ಟತಾಳ

ಬಂಗಾರವಜ್ರ ವ್ಯಾಪಾರಿ । ಹೆಸರು । ಶೃಂಗಾರ ಶ್ರೇಷ್ಠಿ ವಿಹಾರಿ ॥ ಉಂಗುರ ಬಳೆ ಸರ । ಮುಂಗೈ ಸರಪಣಿ । ಅಂಗದ ಚೆಂದಕೆ । ರಂಗೇರಿಸುವವು ॥ 1 ॥ ಕಾಯಕವೆನಗೆ ವ್ಯಾಪಾರ । ಎನ್ನೊಳ್ । ನ್ಯಾಯಕೆ ಕೊರತೆಯು ಬಾರ ॥ ಬೀಯಗ ನೆಂಟರು । ದಾಯಾದಿಗಳೆನೆ । ಧ್ಯೇಯವದೊಂದೇ । ಶ್ರೇಯವು ಬಾಳಿಗೆ ॥ 2 ॥

### ಮಾರವಿ ಏಕತಾಳ

ಶ್ರೀಪತಿಯನು ತಾ ಮನದಲಿ ನೆನೆವುತ । ವ್ಯಾಪಾರಿಯು ಪೊರಟ ॥ ಕೋಪಾಟೋಪದೊಳಾದ್ವಿಜ ಮಾರ್ಗವ । ವ್ಯಾಪಿಸಿ ತಡೆದೆಂದ ॥ 1 ॥ ॥ ಎಲೆ ಎಲೆ ವಣಿಕನೆ ತೆರಳುವುದೆಲ್ಲಿಗೆ । ಫಳಿಲನೆ ನೀನಿತ್ತ ॥ ಗಳಹದೆ ನಿನ್ನಯ ಹಣ ಮೇಣ್ ಒಡವೆಯ । ಸಲಿಸುತ ತೆರಳತ್ತ ॥ 2 ॥

### ಶಂಕರಾಭರಣ ಏಕತಾಳ

ವಸುಧೆ ಸುರರ ವೇಷವಾಂತು । ಎಸೆವ ಮಾರ್ಗ ಮಧ್ಯೆ ನಿಂತು । ಗಸಣೆಯಿಕ್ಕಿ ಸುಲಿಯುತಿರುವೆ । ಪೆಸರ ಪೇಳ್ವೆಯ ॥ 1 ॥

### ಮಾರವಿ ಏಕತಾಳ

ವೇಷವಿದಲ್ಲವು ದೂಷಿಪುದೇತಕೆ । ಭೂಸುರತನುಭವನು ॥ ಕಾಸನು ಗಳಿಸಲು ಪಥವಿದು ಧನವನು । ಭಾಷಿಸದಲೆ ನೀಡು ॥ 1 ॥

### ಶಂಕರಾಭರಣ ಏಕತಾಳ

ಏತಕಿಂತು ಬುದ್ಧಿ ಬಂತು । ಯಾತುಧಾನರಂತೆ ನುಡಿವೆ । ಘಾತವಲ್ತೆ ದ್ವಿಜರ ಪಥಕೆ । ಸಾತಿಶಯದಲಿ ॥ 1 ॥

### ಮಾರವಿ ಏಕತಾಳ

ನೀತಿಯ ಪೇಳುವ ಕೋತಿಯೆ ಕೇಳ್ನಾ । ಪೇತುಗನಲ್ಲವಲಾ ॥ ರೀತಿಯೊಳೀವುದು ಧನಸಂಪದವನು । ಘಾತಿಪೆ ನೀ ಕ್ಷಣದಿ ॥ 1 ॥

### ಶಂಕರಾಭರಣ ಏಕತಾಳ

ಪ್ರಾಣ ದಾನ ದಯೆಯೊಳಿತ್ತ । ರಾನು ತಿರಿದು ಬದುಕಿಕೊಂಬೆ । ದೀನನಾಗಿ ಬೇಡುತಿಹಗೆ । ಹಾನಿ ತರದಿರು ॥ 1 ॥

## ಭಾಮಿನಿ

ನೆತ್ತರೊಣಗಿದ ನೇತ್ರವುಳ್ಳನು । ಒತ್ತಿ ಗಂಟಲ ಕೊಂದು ವೈಶ್ಯನ । ಒತ್ತಿನಲ್ಲಿಹ ಹೊನ್ನುವಜ್ರವ ಕಂಡು ಹರುಷಿಸುತ ॥ ಉತ್ತಮದ ಕನಕಾಭರಣಗಳ । ನಿತ್ತು ಸ್ತ್ರೀಯರ ತೋಷಗೊಳಿಪೆನೆ । ನುತ್ತ ಪೊರಟನು ತನ್ನ ಗೃಹದೆಡೆಗಾಗಿ ತ್ವರಿತದಲಿ ॥ 1 ॥

## ಭೈರವಿ ತ್ರಿವುಡೆತಾಳ

ಘಾತಿಸುತ ಪಾಂಥಿಗರ ವಿಪ್ರನು । ಈ ತೆರದೊಳನುದಿನದಿ ದ್ರವ್ಯವ । ಸಾತಿಶಯದಿಂ ಕೂಡಿಸಿರ್ದ ನಿ । ಕೇತ ತುಂಬಿತು ಇಂತಿರಲ್ಕೆ ॥ ಕೇತು ಮಾಲಿನಿ ಚಂಪಕಳು ಸಹ । ಆತಳೋದರಿ ಕನಕವಲ್ಲರಿ । ಖ್ಯಾತೆ ಮಂದಾಕಿನಿಯು ಸುಂದರಿ । ಜಾತೆಯುತ್ಪಲ ಮಾಲೆ ಸರ್ವರು । ಭೀತಿ ಹೊಂದಿ । ಗಣಿಕಾ । ವ್ರಾತ ಮಂದಿ ॥ 1 ॥

## ಸಾಂಗತ್ಯ ರೂಪಕ ತಾಳ

ಒಟ್ಟಾಗಿ ಗುಟ್ಟಾಗಿ ಕಲೆತಾಲೋಚಿಸಿದರಿ । ಕ್ಕಟ್ಟಿನ ಸಂದರ್ಭ ಬಂತು ॥ ಕುಟ್ಟಿ ಕೊಲ್ಲುತ ತಂದ ಸಂಪದ ಶಾಶ್ವತ । ವೆಷ್ಟೆಂದರಲ್ಲವು ನಿಜದಿ ॥ 1 ॥ ಕಳ್ಳನ ಹೆಂಡತಿ ಮುಂಡೆಯೆಂಬುದು ಗಾದೆ । ಒಳ್ಳೆ ಚೌರ್ಯವ ನಾಶ್ರಯಿಸುತ ॥ ಬಳ್ಳಬಳ್ಳವು ಸ್ವರ್ಣ ಸಂಗ್ರಹವಾಯ್ತು । ಖುಲ್ಲ ನೀಚನು ದ್ವಿಜ ತಾನು ॥ 2 ॥ ನೊಂದಿಹ ಜನರೆಲ್ಲ ಜನಪಂಗಿತ್ತರೆ ದೂರ । ಬಂಧಿಸಿ ಸೆರೆಗೀವರ್ಯೆಸೆ ॥ ಸಂದೇಹವಿದಕೇಕೆ ಗತಿಹೀನರಾಪೆವು । ಎಂದುತ್ಪಲೆಯು ಪೇಳ್ದಳಾಗ ॥ 3 ॥ ರಾಜಿಪ ಧನಕನಕಾದಿ ವಸ್ತು ವಡವೆ । ರಾಜಭಟರ ಸೇರ್ವ ಮೊದಲು ॥ ಮಾಜದೆ ದುಷ್ಟಗೆ ಯಮನೂರ ಮಾರ್ಗವಾ । ಯೋಜಿಸಲ್ಕೌಚಿತ್ಯವಿಹುದು ॥ 4 ॥

## ಮಧು ಮಾಧವಿ ಏಕತಾಳ

ಅವನಿಂದು ಮನೆಗೀಗ ಬರುವ ಹೊತ್ತಾಯ್ತು । ವ್ಯವಹಾರ ಗುಟ್ಟಾಗಿಯಿರಲಿ ಯೆಂದರಿತು ॥ ರವಿತಾನು ಗೃಹಕ್ಕೈದ ಮೇಲೆ ಸಂಪದವ । ಸವನಾಗಿ ಹಂಚಿಕೊಂಬುದು ನಿಜದೊಲವ ॥ 1 ॥

## ಸೌರಾಷ್ಟ್ರ ಅಷ್ಟತಾಳ

ಸ್ವಾಗತಗೈವೆವು ಚಿತ್ತೈಸಿರೀಕಡೆ । ದ್ವಿಜವರೇಣ್ಯಾ । ನಿಮ್ಮ । ಆಗಮನವು ಹರ್ಷದಾಯಕ ನಿಜವೈಸೆ ॥ ದ್ವಿಜವರೇಣ್ಯಾ ॥ 1 ॥ ಸ್ನಾನ ಪಾನಕೆ ಸಿದ್ಧವಾಗಿದೆ ಬನ್ನಿರಿ । ದ್ವಿಜವರೇಣ್ಯಾ । ಮತ್ತ । ನೂನವಾಗಿಹ ಸೇವೆ ತೃಪ್ತಿ ತಂದಿತೆ ಪೇಳಿ । ದ್ವಿಜವರೇಣ್ಯಾ ॥ 2 ॥

## ಮಧ್ಯಮಾವತಿ ಏಕತಾಳ

ಚಪಲನೇತ್ರೆಯರೆಲ್ಲರೊಂದಾಗುತೀಪರಿ । ಉಪಚಾರ ಗೈಯ್ಯುವಿ ರಾಶ್ಚರ್ಯವರರೆ ॥ ವಿಪುಲ ಸಂತೋಷ ಸಂಭ್ರಮಗಳನೆನಲೇನು । ಕೃಪೆಯೊಳು ಮಿಂದೆನ್ನ ಜನ್ಮ ಸಾರ್ಥಕವು ॥ 1 ॥

### ವಾರ್ಧಿಕ

ಇಂತು ತಮ್ಮಂತರಂಗವ ಮುಚ್ಚಿ ವರ್ತಿಸುವ । ಕಾಂತೆಯರ ದುಂಧುಕಾರಿಯು ನಂಬಿ ಮನದಿ ಸಂ । ಭ್ರಾಂತನಾಗುತ ಕೂಟದಿಂ ದೂಟದಿಂ ಸ್ನಾನದಿಂ ಪಾನದಿಂ ನಲಿದನು ॥ ಸಂತವಿಸಿ ಮಲಗಿಸಿರೆ ನಿದ್ರೆಯಲಿ ಮೈ ಮರೆತ । ಬಂತು ಸಮಯವಿದೆನುತ ಗಣಿಕೆಯರು ಮೇಲ್ವಾಯ್ದದು । ರಂತರಿಸಲವಕಾಶವೀಯದಲೆ ಗಂಟಲೊತ್ತಿದರೊಂದು ಗೂಡುತಂ ॥ 1 ॥

### ಜಂಜೂಟಿ ಏಕತಾಳ

ಆದರು ಸಾಯದೆ ಗಜಬಜವೆದ್ದಿತು । ಪಾದರಿಯರು ಕೈತವವಿಡಿದೆ ॥ ಬಲ್ । ಕಂಗೆಡದೆ । ದಿ । ಟ್ಟತೆ ಬಿಡದೆ ॥ 1 ॥ ಬಾಯಿಗೆ ಬಟ್ಟೆಯ ತುರುಕುತುಪಾಯದಿ । ಕೈಯನು ಹಗ್ಗದಿ ಕಟ್ಟಿದರು । ಉರು । ಳಿಕ್ಕಿದರು । ಕಣ್ । ಕುಕ್ಕಿದರು ॥ 2 ॥ ಇಷ್ಟಾದರು ಪ್ರಾಣವದಿರೆ ಬೆಚ್ಚುತ । ಕಟ್ಟಿಗೆಯುರಿ ಕೊಳ್ಳಿಯೊಳಿಕ್ಕೆ । ಹಿಡಿ । ದೆಳೆತಕ್ಕೆ । ಕಾಲ್ । ತುಳಿತಕ್ಕೆ ॥ 3 ॥ ಪ್ರಾಣ ಶರೀರವ ತ್ಯಜಿಸಿರೆ ವೇಶ್ಯೆಯ । ರಾನಿಸಿ ಹರುಷವ ತಾಳಿದರು । ನಗೆ । ಬೀರಿದರು । ಮದ । ವೇರಿದರು ॥ 4 ॥ ದಿಂಡೆಯರೆಲ್ಲರು ಸಹಸದಿ ಶವವನು । ಹೊಂಡವ ತೋಡುತ ಹೂಳಿದರು । ಮರೆ । ಮಾಚಿದರು । ಸು । ಳ್ಳುಸುರಿದರು ॥ 5 ॥ ಸಂಚಯಿಸುತ ದ್ರವ್ಯವ ದೇಶಾಂತರ । ಸಂಚರಿಸುತ ಲಿಹ ದ್ವಿಜನೆನುತ । ಗು । ಲೆಬ್ಬಿಸುತ । ಸ್ತ್ರೀ । ಯರು ನಿರುತ ॥ 6 ॥

### ಶಂಕರಾಭರಣ ರೂಪಕತಾಳ

ಅತಿ ದುರಾಸೆ ಹೊಂದಿದಂಥ ಸ್ತ್ರೀಯರೆಲ್ಲರು । ಪತಿತ ಕಾರ್ಯಗೈಯ್ಯೆ ಹೇಸದಿರುವ ಶುಂಠರು ॥ ವಿತತಿಯಲ್ಲೇ ಧನವನೆಲ್ಲ ಹಂಚಿಕೊಂಡರು । ಸತತ ಸಟೆಯ ನುಡಿದು ಜನರ ನಂಬಿಸಿರ್ದರು ॥ 1 ॥

### ಮಾರವಿ ಝಂಪೆತಾಳ

ಪೈಶಾಚ ಜನ್ಮವನು ದುಂಧುಕಾರಿಯು ತಳೆದ । ದೂಷಿತದ ಜೀವನದ ಫಲರೂಪವಲ್ತೆ ॥ ಬೀಸುತಿಹ ಗಾಳಿ ತೆರ ಅದೃಶ್ಯನಾಗಿದ್ದು । ಭಾಷಿಪನು 'ಹಾದೈವ' ವೆಂದೆಂಬ ಮೊರೆತ ॥ 1 ॥ ಬಿಸಿಲು ಗಾಳಿಗೆ ಬೆಂದ ಮಳೆ ಚಳಿಗೆ ಮೈಯೊಡ್ಡಿ । ಹಸಿವು ಬಾಯಾರಿಕೆಗೆ ಬಳಲಿದನು ದಿನದಿ ॥ ವಶವಿಲ್ಲದೊಳಗಲೆವ ಹಗಲು ರಾತ್ರಿಯೊಳು ರ । ಕ್ಷಿಸುವ ಜನರಿಂಗೆ ಹಂಬಲಿಸಿ ಹಲುಬಿದನು ॥ 2 ॥

### ಆರ್ಯಸವಾಯಿ ಏಕತಾಳ

ಕರ್ಣಾಕರ್ಣಿಕೆ ವೃತ್ತಾಂತವು ಗೋ । ಕರ್ಣಗೆ ತಲುಪಿತು 'ಹಾ' ಎಂದ ॥ ನಿರ್ಣಯಿಸಿ ಗಯಾಶ್ರಾದ್ಧವ ಮಾಡಿದ । ಪೂರ್ಣತೆ ತಾಒದಗಲಿಯೆನುತ ॥ 1 ॥ ಧಾತ್ರಿಯೊಳಗೆ

ಸುಕ್ಷೇತ್ರವನೆಲ್ಲವ । ಯಾತ್ರೆಯ ಮುಗಿಸಿ ಸ್ವ ಪಟ್ಟಣಕೆ ॥ ರಾತ್ರಿಯೆ ಹಿಂತಿರುಗಿದ ಗೋಕರ್ಣನು । ಧೋತ್ರವ ಹಾಸುತ ಒರಗಿರಲು ॥ 2 ॥

### ಕೇದಾರಗೌಳ ಅಷ್ಟತಾಳ

ಮಧ್ಯರಾತ್ರಿಯ ಕಾಲ ಸದ್ದು ಕೇಳಿಸಲಾಗ । ಎದ್ದು ಕುಳಿತ ಗೋಕರ್ಣ ॥ ಗ್ರಧ್ರವೇನ್ ಮಹಿಷವೇನ್ ಹುಲಿ ಯೇನ್ ಕರಡಿ ಯೇನ್ । ಬದ್ದ ರೂಪವ ಕಂಡನು ॥ 1 ॥ ಒಮ್ಮೆಗಿಂದ್ರಾಗ್ನಿ ವರುಣ ಯಮರೂಪವು । ಒಮ್ಮೆ ಪುರುಷರಂತೆಸೆಯೆ ॥ ಒಮ್ಮೆ ಭಯಂಕರ ಕರ್ಕಶ ಸ್ವರ ಮಗು । ಖೊಮ್ಮೆ ಮರುಕದಿರವು ॥ 2 ॥ ಕಂಗೊಳಿಸಿರಲಾ ಶ್ರೋತ್ರಿಯ ಸ್ವಲ್ಪ ಸಹ ಧೈರ್ಯ । ಹಿಂಗದೆ ಯೋಚಿಸಿದ ॥ ಭಂಗ ಗೊಂಡವನಾರೊ ಪಾಪಕರ್ಮದ ಬೇಗೆ । ಸಂಗತಿಯರಿಯುವೆನು ॥ 3 ॥

### ಸೌರಾಷ್ಟ್ರ ತ್ರಿವುಡೆ ತಾಳ

ಎಲೆ ಪಿಶಾಚಿಯೆ ನೀನದಾರ್ಯೆ । ಬಲಿತ ಪ್ರೇತವೊ ಬ್ರಹ್ಮ ರಾಕ್ಷಸ । ರಳವಿಯರಿಯೆನು ಕ್ರೂರ ರೂಪದ । ಒಲವ ನುಸುರು ॥ 1 ॥ ಮಾತ ಕೇಳುತ ಲಾಕ್ಷಣದೊಳಾ । ಪ್ರೇತ ಗಳ ಗಳ ಗಳನೆ ರೋಧಿಸಿ । ಕಾತರಿಸಿ ಸನ್ನೆಯನು ಮಾಡಿತು । ಭೀತಿಯೊಳಗೆ ॥ 2 ॥ ಮಂತ್ರ ಜಲ ಪ್ರೋಕ್ಷಣೆಯ ಗೈಯೆಸ್ವ । ತಂತ್ರ ವಾಗಿಯೆ ನುಡಿಯಿತಾಗ ಕು। ತಂತ್ರ ಕುಮತಿಯ ಪಾಪ ಕರ್ಮದಿ । ಬೆಂತ್ರನಾದೆ ॥ 3 ॥ ನಿನ್ನ ಹಿರಿಯನು ದುಂಧುಕಾರಿಯು ॥ ಗನ್ನ ಘಾತಕಿಯಾದನೀದಿನ । ಬನ್ನ ಪಡಿಸಿದೆ ಸುಜನ ವ್ರಾತವ । ಎನ್ನಲೇನು ॥ 4 ॥ ಹೆತ್ತವರಿಗಾಪತ್ತ ತಂದಿಹೆ । ನಿತ್ಯ ಕಷ್ಟವ ನಿತ್ತೆ ಜನರಿಗೆ । ಮಿತ್ರರೆಂದಿಹ ಸ್ತ್ರೀಯರಿಂದಲೆ । ಮೃತ್ಯುವಾಯ್ತು ॥ 5 ॥ ಪ್ರೇತ ರೂಪದೊಳನಿಲ ಸೇವಿಸಿ । ಆತುಕೊಂಡಿಹೆ ಕಷ್ಟ–ಕೋಟಲೆ । ನೀತಿಯುತ ಕರುಣಾ ಸಮುದ್ರನೆ । ಭೀತಿ ನೀಗಿ ॥ 6 ॥ ಉದ್ಧರಿಸು ಬಲುಪಾಪ ರಾಶಿಯ । ಹೊದ್ದಿರುವ ಪಾತಕಿಯು ನಾನಿಹೆ । ಆದ್ದರಿಂದಲೆ ಬೇಡಿಕೊಳ್ಳುವೆ । ಬದ್ದನಾಗಿ ॥ 7 ॥

### ಮಿಶ್ರ ಶಂಕರಾಭರಣ ಅಷ್ಟತಾಳ

ವ್ಯಾಕುಲ ತಾಳಿ ಗೋಕರ್ಣ । ದಂತದಿ ತುಟಿ । ಯೌಕುತ ಪೇಳ್ದ ವಿವರಣ ॥ ಲೋಕ ಸಂಚಾರದಿ ನಾನು । ಗಯಾ ಶ್ರಾದ್ಧ ವಿ । ವೇಕ ವೆನ್ನುತ ಲೆಸಗಿಹೆನು ॥ 1 ॥ ಈ ಚರ್ಯೆಯಿಂದಲೂ ಹೀಗೆ । ಪ್ರೇತಾತ್ಮ ವಿ । ಮೋಚನೆಯಾಗದ ಮೇಗೆ ॥ ಯೋಚನೆಗಾಸ್ಪದವಾಯ್ತು । ನೀನೆ ಮಾರ್ಗವಿ । ವೇಚಿಸಿ ಪೇಳುವುದೊಳಿತು ॥ 2 ॥

### ನೀಲಾಂಬರಿ ಝಂಪೆತಾಳ

ನಿಡುಸುಯ್ಯು ತಿಂತುಸಿರೆ ಪ್ರೇತ । ಶತಸಂಖ್ಯೆ । ಬಿಡದಲೆ ಗಯಾಶ್ರಾದ್ಧ ಸತತ ॥ ನಡೆಸಿದರು ತೊಲಗದಿಹ ಪಾಪ । ಎನ್ನೊಳಗೆ । ಅಡರಿಹುದು ನೀನೆನಗೆ ದೀಪ ॥ 1 ॥ ಶಿಕ್ಷೆಗಳನನುಭವಿಸಿ ಬೆಂದೆ । ಸ್ವಾತಂತ್ರ್ಯ । ಕಕ್ಷೆಯರಿಯದೆ ಬಳಲಿ ನಿಂದೆ ॥ ಲಕ್ಷ್ಯವೊಂದೇ

ಮೋಕ್ಷ ದಾರಿ । ಕರುಣದೊಳ । ಪೇಕ್ಷಿಪೆನು ನೀನು ಬಲುದಾರಿ ॥ 2 ॥

## ಕುಸುಮ ಷಟ್ಪದಿ

ಇಂತುಸುರೆ ಗೋಕರ್ಣ । ಎಂತಿದನು ಪರಿಹರಿಪೆ । ಅಂತರ್ಯದಲಿ ಯೋಚಿಸುತ ಪೇಳ್ದನು ॥ ಚಿಂತಿಸದೆ ಕೆಲ ಕಾಲ । ಮುಂತೆಸಹ ಸಹಿಸಿದ ಮ । ಹಾಂತರಿಂದರಿತು ಗೈದಪೆನು ಕಾರ್ಯ ॥ 1 ॥

## ಶಂಕರಾಭರಣ ತ್ರಿವುಡೆತಾಳ

ಒರೆದುದಕೆ ಸಂತಸವ ತಾಳುತ । ಮರುಳು ಮರಳೆ ಸ್ವಸ್ಥಾನಕೆ ॥ ಒರಗಿರುವ ಗೋಕರ್ಣ ನಿಶಿಯಿಡಿ । ಪರಿಪರಿಯಲಿ ॥ 1 ॥ ಯೋಚಿಸಲು ಪಥ ಕಾಣದಾಯಿತು । ಆಚಯದ ಗ್ರಾಮಸ್ಥರ ॥ ಯಾಚಿಸಲ್ಕೆ ನಿರುತ್ತರವೆಗತಿ । ಯಾಚರಿಸಲು ॥ 2 ॥ ಬ್ರಹ್ಮವಾದಿಗಳನ್ನು ಜ್ಞಾನಿಗ । ಳೊಮ್ಮತದಿ ಯೋಗಿಗಳ ॥ ಒಮ್ಮೆ ಪ್ರೇತೋದ್ಧಾರ ಹಾದಿಯ । ಸಮ್ಮತಿಸಿರಿ ॥ 3 ॥ ಎನಲು ಶಾಸ್ತ್ರ ಗ್ರಂಥ ಪರಿಕಿಸೆ । ಸನುಮತದ ಪರಿಹಾರವು ॥ ಮನಕೆ ಬರದಿರೆ ಕಂಗೆಡುವ ಸ್ಥಿತಿ । ಅನುವನಾಂತು ॥ 5 ॥ ಕಮಲ ಬಾಂಧವ ಸೂರ್ಯನೊಲುಮೆಯ । ವಿಮಲ ಭಾವದಿ ಗಳಿಸಲು ॥ ಸಮನಿಸಿದ ಪೈಶಾಚ ಜನ್ಮವು । ಗಮಿಸಲಿಹುದು ॥ 6 ॥

## ಪರಿವರ್ಧಿನಿ

ಆತಪಧರ ದಯೆದೋರ್ದರೆ ಮಾತ್ರವೆ । ಪ್ರೇತೋದ್ಧಾರದ ಮಾರ್ಗವು ದೊರೆವುದು । ಈ ತೆರ ಪಂಡಿತನೋರ್ವನು ಮಂಡಿಸೆ ದ್ವಿಜವರ ಗೋಕರ್ಣ ॥ ಅತುರದಲಿ ಕೈಗೊಂಡನು ಕಾರ್ಯವ । ಸಾತಿಶಯ ಮಹಾ ಯೋಗದಿ ವಾರಿಜ । ನಾಥ ವಿಕರ್ತನ ಗತಿಯನು ತಾನಡ್ಡೈಸುತ ನುತಿಸಿದನು ॥ 1 ॥

## ನಾಟಿ ಆದಿತಾಳ

ಪಾಲಿಸೊ ತಪನ । ಖದ್ಯೋತ ವಿಕರ್ತನ । ಪಾಲಿಸೊ ತಪನ ॥ ಪಾಲಿಸೆನ್ನ ಜಯಭದ್ರ ಪ್ರಭಾಕರ । ಬಾ ಲೋಕೇಶ ವಿಭಾವಸು ಭಾಸ್ಕರ ॥ 1 ॥ ದ್ಯುಮಣಿ ವಿಭಾಕರ ತರಣಿ ವಿವಸ್ವಂತ । ಜಗಚಕ್ಷುತ್ವಿಷಾಂಪತಿ । ತಮಹರ ಖೇಚರ ಮಿತ್ರ ಕಿರಣ್ವಂತ ॥ ಕಮಲ ಬಂಧು ಸಪ್ತಾಶ್ವ ದಿನೇಶಾ ॥ ರ್ಯಮ ವಿಶ್ವಾವರ ಸೂರ್ಯ ವಿಯನ್ಮಣಿ ॥ 2 ॥ ಆದಿ ದೇವ ಪ್ರದ್ಯೋತನ ಭ್ರಾಜಿಷ್ಣು । ಹರಿ ಭಾನು ಸುರೋತ್ತಮ । ದ್ವಾದಶಾತ್ಮ ರವಿ ಮಿಹಿರ ವಿರೋಚಿಷ್ಣು ॥ ಆದಿತ್ಯಾರುಣ ಸವಿತ ಶರಣ್ಯನೆ । ನೀ ದಯದೋರುತಲೆನ್ನನು ರಕ್ಷಿಸು ॥ 3 ॥

## ಶ್ರೀ ಏಕತಾಳ

ಸ್ತೋತ್ರವ ಕೇಳುತ ಮಿತ್ರನು ಪೇಳಿದ । ಶಾಸ್ತ್ರಾರ್ಥವನರಿತ ॥ ಶ್ರೋತ್ರಿಯ ನಿನಗೇತರ ಸಂಕಟ ನುಡಿ । ಮೈತ್ರಿಯ ಭಾವದೊಳು ॥ 1 ॥

## ಭೂಪಾಳಿ ಏಕತಾಳ

ಮಿಹಿರ ನಿನ್ನ ಪದಕೆ ನಮಿಪೆ । ಇಹದ ಸೌಖ್ಯ ಬಯಸಲಾರೆ ॥ ಕಹಿಯ ವಿಷಯ ಬೇರೆಯಿಲ್ಲ । ಮಹಿಯೊಳಗ್ರ ಭವನು ತಾನು ॥ 1 ॥ ಭೀತಿ ರಹಿತನಾಗಿ ಗೈದ । ಪಾತಕಂಗಳೆಲ್ಲ ಸೇರಿ ॥ ಪ್ರೇತ ರೂಪದಿಂದಲಲೆವ । ನೋತು ಕೊಂಬ ಮಾರ್ಗ ಪೇಳು ॥ 2 ॥

## ಬೇಗಡೆ ಏಕತಾಳ

ಆಪ್ತ ಭಾವವ ತಳೆದು ಗೋಕರ್ಣ । ಇಂತುಸುರೆವಾರಿರು । ಹಾಪ್ತ ಹರುಷದಿ ಪೇಳ್ದನಾಚರಣ ॥ ಗುಪ್ತವೇನಿಲ್ಲಿದಕೆ ನಡೆಸ್ಯೆ । ಸಪ್ತ ದಿನಗಳ ವಿಧಿಯ ತೆರದಲಿ । ದೀಪ್ತ ಭಾಗವತ ಶ್ರವಣವನು । ಪ್ರಾಪ್ತ ವಹುದೆಲೆ ದಿವ್ಯತೆಯು ದಿಟ ॥ 1 ॥ ಈಗಲೀಪರಿ ಭಕ್ತಿ ಶ್ರದ್ಧೆಯನು । ಹೊಂದುತ್ತ ಕೇಳ್ವೆಯ । ಆಗಮಂಗಳ ನಾನು ಪೇಳ್ದಪೆನು ॥ ಭಾಗವತ ಸಪ್ತಾಹ ವಿಧಿಯಿದು । ಯೋಗ ಪುಣ್ಯಾರ್ಜನೆಗೆ ಮಾರ್ಗವು । ಓಘವಹುದ್ಯೆ ಪಾಪ ನಾಶಕೆ । ಬೇಗದಲಿ ನೀ ಪಠಿಸು ಶುಭವಿದೆ ॥ 2 ॥

## ಭಾಮಿನಿ

ಅನ್ಯಪಥವಿಲ್ಲವು ಪಿಶಾಚಗ । ಳನ್ನು ಬಿಡುಗಡೆ ಗೊಳಿಸಲಿಂದಿಲಿ । ಎನ್ನುತಲಿ ರವಿಯುಸುರೆ ದ್ವಿಜವರನಂದು ಚಿಂತಿಸಲು ॥ ಮುನ್ನ ಸೂರ್ಯನ ಧರ್ಮರೀತ್ಯದ । ಚೆನ್ನ ನುಡಿ ಜನ ಕೇಳುತೆಂದರು । ಮುನ್ನಡೆಸು ಭಾಗವತ ಸಪ್ತಾಹವನು ಹಿತವಹುದು ॥ 1 ॥

## ಮೋಹನ ಅಷ್ಟ ತಾಳ

ನುಡಿಕೇಳಿ ಗೋಕರ್ಣನು । ಕಥಾ ಪಠಣಕೆ । ದೃಢದಿ ನಿಶ್ಚೈಸಿದನು ॥ ಬಿಡದೇಳು ದಿನ ಭಾಗವತ ಕಥಾಸಂಧಾನ । ಕಡಿಯಿಡೆ ಕಡುದಾರಿದ್ರ್ಯರು ಬಂದು ಸೇರ್ದರು ॥ 1 ॥

## ಸಾಂಗತ್ಯ ರೂಪಕ ತಾಳ

ಪಾರ್ವ ನೀ ತೆರದಲ್ಲಿ ಸಪ್ತಾಹ ನಡೆಸಿರೆ । ಊರ್ವಿಯೊಳ್ ತುಂಬಿತು ವಸಗೆ ॥ ಪೂರ್ವಾರ್ಜಿತದ ಪಾಪ ಶೇಷವ ಕಳೆಯುವ । ಪರ್ವ ಕಾಲವನಾಶಿಸುತ್ತ ॥ 1 ॥ ಕುರುಡ ಕುಂಟರು ಮೊದಲಾದಂಗ ಹೀನರು । ಸರುವರಾಸ್ತಿಕ ಜನರೆಲ್ಲ ॥ ಇರದೆ ಸೇರಲು ಜನಸಮುದಾಯವಾಯಿತು । ನೆರೆದರು ತೋಷವನಾಂತು ॥ 2 ॥ ಕತೆ ಪ್ರಾರಂಭಕೆ ಪ್ರೇತ ರೂಪನಲೆಯುತ ನಿ । ಶಿತ ಕಾಲಕಲ್ಲಿಗೈತಂದು ॥ ಮಿತವಾಗೇಳ್ಗಣ್ಣಿಹ ಬಿದಿರಿನ ರಂಧ್ರದಿ । ಅತಿಗುಪ್ತನಾಗಲ್ಲಿ ಕುಳಿತ ॥ 3 ॥ ವಾಯುವಿನಂತೆಸದಾ ಗತಿಶೀಲನಾ । ಬಾಯಿಯ ಮುಚ್ಚಿ ಕುಳ್ಳಿರಲು ॥ ಆಯವಿದಾಯಿತು ಭಾಗವತವ ಕೇಳಿ । ಮಾಯೆ ಮುಕ್ತಿಯ ನಿರೀಕ್ಷಿಪೆನು ॥ 4 ॥ ಭಾಗವತದ ಪಠಣಕೆ ಮುಖ್ಯ ಶ್ರಾವಕ । ನಾಗಿ ಶುದ್ಧ ಚರಿತ್ರನಾದ ॥ ಮೇಘವರ್ಣನ ಭಕ್ತನೋರ್ವನ ಮುಂದಿಡು । ತಾಗಲೆ ಪ್ರಾರಂಭಿಸಿದನು ॥ 5 ॥

## ಭೋಗ ಷಟ್ಪದಿ

ಸೊಗದಿ ಮೊದಲ ಸ್ಕಂಧ ಮೊದಲ । ಹಗಲು ಮುಗಿಯೆ ಬಿದಿರ ಗಣ್ಣು । ಸಿಗಿಯಿತೊಂದು ಸದ್ದದಾಗೆ ಜನರು ಕಣ್ಬಿಡೆ ॥ ಬಗೆಯೊಳೇಳು ದಿನವು ಹೀಗೆ । ಬಗೆಯಲಾಗ ವಂಶಪರ್ವ । ಅಘ ವಿಮೋಚವಾಗಿ ದಿವ್ಯ ದೇಹ ಶೋಭಿಸೆ ॥ 1 ॥

## ಕಲ್ಯಾಣಿ ಝಂಪೆತಾಳ

ಏಳು ದಿನಗಳ ಕಾಲ ಭಾಗವತ ಕಥೆಯ । ಪೇಳಿದನು ಗೋಕರ್ಣ ಸಪ್ತಾಹ ವಿಧಿಯ ॥ ತಾಳುತಲಿ ಹನ್ನೆರಡು ಸ್ಕಂಧಗಳನೆಲ್ಲ । ಸೀಳಿತದು ವಂಶದೇಳೂ ಪರ್ವವೆಲ್ಲ ॥ 1 ॥ ಆಶಿಸುತ ಸತ್ಕಥೆಯ ಕೇಳಿದುದ ಫಲವು । ಪೈಶಾಚ ಜನ್ಮವದು ನೀಗಿತಾಗೊಲವು ॥ ಕಾಶದಿಂದಲಿ ಬೆಳಗಿ ದಿವ್ಯತರ ದೇಹ । ಆ ಶೋಭೆಯೇನೆನಲಿ ಪ್ರಕಟದುತ್ಸಾಹ ॥ 2 ॥ ಕೊರಳೊಳಗೆ ವರತುಳಸಿ ಮಾಲಿಕೆಯ ಥಳಕು । ಧರಿಸಿ ಪೀತಾಂಬರವ ನಡುವಿನೊಳು ಜೋಕು ॥ ಉರೆ ಮೇಘವರ್ಣ ಕಾಂತಿಯ ಬೀರುತಾಗ । ಮೆರೆವಂಥ ದುಂಧುಕಾರಿಯು ಪೇಳ್ದ ಬೇಗ॥ 3 ॥

## ಭಾಮಿನಿ

ಎಲೆ ಮಹಾತ್ಮನೆ ನಿನ್ನ ಕೃಪೆಯೊಳು । ಅಲೆವಲೆವ ಪೈಶಾಚ ಜನ್ಮಕೆ । ಸಲೆ ವಿಮೋಚನವಾಯ್ತದಿಂದಿಲಿ ಕೇಳು ಗೋಕರ್ಣ ॥ ಇಳೆಯೊಳಗೆ ಭಾಗವತವೊಂದೇ । ಬಲಿತ ಪಾಪಾನೀಕವೆಲ್ಲವು । ಜ್ವಲನ ಸಂಸ್ಪರ್ಶಿತ ಸಮಿತ್ತು ವಚನಾತೀತವಿದು ॥ 1 ॥

## ವಾರ್ಧಿಕ

ಭಾಗವತ ಸಪ್ತಾಹ ವಿಧಿಯಲ್ತೆ ಸುರಧೇನು । ಭಾಗವತ ಸಪ್ತಾಹ ವಿಧಿಯಲ್ತೆ ಕಲ್ಪತರು । ಭಾಗವತ ಸಪ್ತಾಹ ವಿಧಿಯಲ್ತೆ ಸರ್ವತ್ರ ಪಾಪ ನಾಶನ ಯಜ್ಞವು ॥ ಭಾಗವತ ಸಪ್ತಾಹ ವಿಧಿಯಲ್ತೆ ಪೀಯೂಷ । ಭಾಗವತ ಸಪ್ತಾಹ ವಿಧಿಯಲ್ತೆ ಪಾವನವು ॥ ಭಾಗವತ ಸಪ್ತಾಹ ವಿಧಿಯಲ್ತೆ ಮುಕ್ತಿಪ್ರದ ಸಾಧನವು ಭೂಮಿಯೊಳಗೆ ॥ 1 ॥

## ಸಾರಂಗ ಅಷ್ಟತಾಳ

ರಕ್ತ ಮಾಂಸಗಳಿಂದಲಿ । ತುಂಬಿದ ದೇಹ । ಶಕ್ತವೆನ್ನುವ ಭ್ರಮೆಯಲಿ ॥ ಯುಕ್ತಾಯುಕ್ತತೆಯರಿಯದತೆರ ವರ್ತಿಸಿ । ರಿಕ್ತರಾಗಿಯೆ ನಿರ್ಗಮಿಪ ರೇನೆಂಬೆನಹಹ ॥ 1 ॥ ಸಪ್ತಾಹ ಶ್ರವಣದಿಂದ । ಅಜ್ಞಾನ । ವ್ಯಾಪ್ತಿತ ಗ್ರಂಥಿ ಭೇದ ॥ ಪ್ರಾಪ್ತತೆಯಹುದಲ್ಲೈ ಸಂದೇಹವಿದಕಿಲ್ಲ । ಸುಪ್ತ ಸದ್ಭಾವನೆ ಜಾಗೃತಿಯಪ್ಪುದು ॥ 2 ॥

## ಯಮನ್ ಕಲ್ಯಾಣಿ ತ್ರಿವುಡೆತಾಳ

ಒಮ್ಮೆಯಾದರೂ ಶ್ರವಣ ಮಾಡದ । ಜನ್ಮಕಿಲ್ಲವು ಸಾರ್ಥಕ ॥ ಕರ್ಮ ಫಲಪ್ರದ ದೋಷನಾಶದಿ । ಬ್ರಹ್ಮ ಪದವೀದಾಯಕ ॥ 1 ॥ ಎಂದು ಪೇಳುವ ಸಮಯಕಲ್ಲಿಗೆ ।

ಬಂದು ಶ್ರೀಹರಿ ದೂತರು ॥ ದುಂಧುಕಾರಿ ಯೊಳೆಂದರಾಗಲೆ । ಬಂದಿಹೆವು ಕರೆದೊಯ್ಯಲು ॥ 2 ॥ ದಿವ್ಯ ತರದ ವಿಮಾನ ತಂದೆವು । ಭವ್ಯವಾಗಿಹ ಸ್ವಾಗತ ॥ ಶ್ರಾವ್ಯ ಫಲ ದೊರೆತುದುದು ಬಾ ಬಾ । ಅವ್ಯಯನ ಗೃಹಕೀಗಲೆ ॥ 3 ॥

## ಸಾವೇರಿ ರೂಪಕತಾಳ (ಆತೀತಾಕ್ಷರ)

ದ । ನ್ಮಾನ್ಯನಾದೆ ನೀನದಿಂದು ಓ ವಿಚಕ್ಷಣ । ಎನ್ನುತಾಗ ಪ್ರೇಮವಿಡಿದು ಕರೆದರಾಕ್ಷಣ ॥ 1 ॥ ಗೋ । ಕರ್ಣ ಕಂಡು ಚಕಿತನಾಗಿ ಹರಿಯ ದೂತರ । ವರ್ಣವರಿಯದಾಗಿ ಪ್ರಶ್ನೆ ಗೈದನೀತೆರ ॥ 2 ॥ ಶ್ರೀ । ಹರಿಯ ದೂತರಿಂತು ಪಂಕ್ತಿ ಭೇದಗೈವಿರೆ । ಸರಿಯೆ ಸಭೆ ಜನಂಗಳೆಲ್ಲರರ್ಹ ರಾಗರೆ ॥ 3 ॥ ಈ । ದುಂಧುಕಾರಿಯನ್ನು ಮಾತ್ರ ಕರೆಯುತೊಯ್ವಿರಿ । ವೃಂದವೆಲ್ಲ ಸಮತೆ ಹೊಂದೆ ತೊರೆಯುತಿರುವಿರಿ ॥ 4 ॥ ಯಾ । ಕಿಂತು ಗೈವಿರೇನೊ ತಿಳಿಯೆನೆಂದು ಪೇಳಲು । ಶಾಂತರಾಗಿ ವಿಷ್ಣು ದೂತರೆಂದರಾಗಲು ॥ 5 ॥

## ನವರೋಜು ಏಕತಾಳ

ಮಹಿಯಮರಾಗ್ರೇಸರನೆ । ಕೇಳ್ । ಸಹಜವಲ್ಲೈ ಈ ಪ್ರಶ್ನೆ ॥ ಬಹುತರ ಶ್ರದ್ಧೆಯೊಳಿವ ಶ್ರವಣವ ನಿ । ರ್ವಹಿಸುತಲುಪವಾಸದಿ ದಿನ ಕಳೆದನು ॥ 1 ॥ ದೃಢಮನ ಹೊಂದುತಲಿವನು । ಕತೆ । ಬಿಡದೇಳೂ ದಿನಗಳನು ॥ ಗೊಡವೆಯ ತ್ಯಜಿಸುತಲಿವ ಕೇಳಿದ ಗಡ । ಒಡನಿದ್ದರಿಗಿವಗಿಂತಹ ಭೇದವು ॥ 2 ॥

## ವಾರ್ಧಿಕ

ಉರುತರದ ದೃಢತೆಯೇ ಜ್ಞಾನಕ್ಕೆ ಸಾರ್ಥಕವು । ಇರದೆಚ್ಚರದ ಶಾಸ್ತ್ರದಭ್ಯಾಸ ವ್ಯರ್ಥವಲ । ಎರವೈಸೆ ನಂಬದಿಹ ಮಂತ್ರಗಳು, ಅರ್ಹನಲ್ಲದಗಿತ್ತ ದಾನಂಗಳು ॥ ಸ್ಥಿರವಿರದ ಮನವಿರಲು ಜಪಶೂನ್ಯವಾಗುವುದು । ಹರಿಭಕ್ತರಿಲ್ಲದಿಹ ದೇಶಗಳು, ಆಚಾರ । ವಿರದ ಕುಲವೆಲ್ಲ ಬರಿದಾಗಿಹವು ಕಾರ್ಯಕಾರಣ ಫಲಕೆ ಶ್ರದ್ಧೆ ಬೇಕೂ ॥ 1 ॥

## ಶಂಕರಾಭರಣ ಏಕತಾಳ

ಕತೆಯ ಶ್ರವಣ ಮಾಳ್ಪನಿಂಗೆ । ಸತತ ಗುರುವಿನಲ್ಲಿ ಭಕ್ತಿ । ಮತಿಯೊಳೆಲ್ಲ ದೈನ್ಯ ಭಾವ । ವತಿಯವಶ್ಯವು ॥ 1 ॥ ಮನವ ಗೆದ್ದು ದೃಢದೊಳಿಟ್ಟು । ವನಜನಾಭನಲ್ಲಿ ಶ್ರದ್ಧೆ । ಯನುವನಾಂತು ಕತೆಯ ಕೇಳ । ಲಿನಿದು ದಿವ್ಯತೆ ॥ 2 ॥ ಓ ಮಹಾತ್ಮ ಮರಳಿ ಪಠಿಸು । ಸೀಮೆ ಜನರು ಮನನ ಶ್ರದ್ಧೆ । ನೇಮ ದಿಂದ ಕೇಳಲ್ಕದು । ದ್ಧಾಮ ಪಥವದು ॥ 3 ॥ ಸ್ಪಷ್ಟವಾಗಿ ಪೇಳ್ವೆ ಜನಕೆ । ಶ್ರೇಷ್ಠ ಲೋಕ ದೊರೆಯಲೀಗ । ದೃಷ್ಟವಹುದು ಕಥಾ ಶ್ರವಣ । ಇಷ್ಟ ಪ್ರಾಪ್ತಿಗೆ ॥ 4 ॥

## ಭಾಮಿನಿ

ಘನ ಪುರಾಣ ಶ್ರವಣಕರ್ಹತೆ । ಮನವ ಜಯಿಸುತ ಮೇಣ್ ಗುರುಗಣ । ಜನರ ಸದ್ಭಕ್ತಿಯೊಳು ಸೇವಿಸಬೇಕು ನಿಜದಲ್ಲಿ ॥ ಪುನರಪಿಯು ಭಾಗವತ ಕತೆಯನು । ಸನುಮತದಿ ನೀ ಪಠಿಸು ನಿನ್ನನು । ಅನುಕರಿಸುತೆಲ್ಲರಿಗು ಶುಭವಹುದೆಂದು ತೆರಳಿದರು ॥ 1 ॥

## ಆರ್ಯಸವಾಯಿ ಏಕತಾಳ

ದುಂಧುಕಾರಿಯನು ಜತೆಯೊಳು ಗೊಂಡಾ । ಇಂದಿರೆ ಯಾಣ್ಮನಸೇವಕರು ॥ ಬಂಧುರದಲಿ ವೈಕುಂಠಕೆ ತೆರಳೆ ವ । ಸುಂಧರೆಯಮರನು ಗೋಕರ್ಣ ॥ 1 ॥ ಶ್ರಾವಣ ಮಾಸದಿ ವಿಧಿ ಸಪ್ತಾಹವ । ಆವಿಬುಧನು ಸಂತಸವೆರೆಸಿ ॥ ಗೈವರೆ ಸಂಕಲ್ಪದಿ ಮುಂದಾದನು । ಭಾವಿಸಿ ಭಕ್ತಿಯೊಳನಿತರೊಳು ॥ 2 ॥ ಸಪ್ತಾಹಕೆ ಸಂಪೂರ್ಣತೆ ತಾನೇ । ಪ್ರಾಪ್ತಿಸಲಾಶ್ಚರ್ಯವು ತೋರಿ ॥ ಕ್ಲಪ್ತ ಕಾಲದಲಿ ಹರಿ ಮೈದೋರಿದ ॥ ದೀಪ್ತಿಯ ಬೀರಿ ಪ್ರಭಾವಿಸುತ ॥ 3 ॥

## ಭೈರವಿ ಝಂಪೆತಾಳ

ಮೇಲಾದ ಮಮತೆಯಲಿ । ಮಾಲೋಲ ಮೈದಳೆದ । ಮೀಲೀಲೆ ಬೃಂದೆಯಾ । ಮಾಲನಿಗೆ ಸಹಜ ॥ 1 ॥ ಶಂಖ ಚಕ್ರದ ಶೋಭೆ । ಪಂಕರುಹ ನೇತ್ರ ವಿ । ಶೃಂಖಲಾಹಿಪತಿ ಪ । ರ್ಯಂಕ ಶ್ರೀ ಹರಿಗೆ ॥ 2 ॥ ಪೀತಾಂಬರಾನ್ವಿತನು । ಶ್ವೇತ ವರ್ಣದಿ ಬೆಳಗಿ । ಪ್ರೀತಿಯೊಳು ತೆಗೆದಪ್ಪೆ । ಭೂತಳಾಮರನ ॥ 3 ॥ ಪೊಡವಿ ಸುರನಾಕ್ಷಣಕೆ । ನುಡಿಸಿದನು ಮೈ ಮರೆತು । ಕಡಲ ಶಯನನೆ ಕಾಯೊ । ದೃಢದಿಂದಲೆಮ್ಮ ॥ 4 ॥

## ಶರ ಷಟ್ಪದಿ

ಭವತಾರಕ ಶ್ರೀ । ಧವ ಮಧುಸೂದನ । ನವತೇಜೋಲ್ಲಾಸಿತ ವಿಷ್ಣು ॥ ಶಿವ ಸಖ ಹರಿಕೇ । ಶವ ಧ್ರುವ ಪದಪ್ರದ । ರವಿಶತ ಕೋಟಿ ವಿಭಾಸವಿಧು ॥ 1 ॥

## ಆರಭಿ ಆದಿತಾಳ

ಭಕ್ತವತ್ಸಲ ಕೇಶವ । ಜಗದ್ರಕ್ಷಣಾ । ವ್ಯಕ್ತ ಶ್ರೀ ಹರಿ ಮಾಧವ ॥ ಮುಕ್ತಿ ಪ್ರದಾಯಕ ವಿಶ್ವ ವಿಧಾಯಕ । ನಕ್ತಂಚರಾತಂಕ ರಕ್ಷಿಸೆಮ್ಮನುದಿನ ॥ 1 ॥

## ಗೌಳ ಆದಿತಾಳ

ಧನ್ಯೋಸ್ಮಿ ನಾರಾಯಣಾರ್ಣವ ಶಯನ । ಶೂನ್ಯಾವರಣ ವಿಷ್ಣು ಪಾಪ ಪರ್ವತ ಜಿಷ್ಣು ॥ಪಲ್ಲವಿ॥ ವಿಮಲ ಷಡ್ಗುಣ ಪೂರ್ಣ ಕಮಲಾಯತೇಕ್ಷಣ । ಹಿಮಕರ ಧರ ಸಖ ಸುಮಶರ ಜನಕ ॥ 1 ॥ ಪಕ್ಷಿ ವಾಹನ ವಿಧು ಲಕ್ಷ್ಮಿ ವಕ್ಷದೆ ವಧು । ರಾಕ್ಷಸಾಂತಕ ಹರೆ ದಕ್ಷ ಮುರಾರೆ ॥ 2 ॥ ಸಂಸಾರ ಚಕ್ರವ ಧ್ವಂಸ ಗೊಳಿಸಿ ದೇವ । ನೀಂ ಸಲಹೆಲ್ಲರ ಕಂಸಾಸುರಹರ॥ 3 ॥

## ಕಂದ

ಶ್ರೀ ವನಿತೆಯರಸನಂ ದ್ವಿಜ । ನೀ ವಿಧ ಬಹುತರದಿ ಸ್ತವನ ಗೈಯುತಿರಲ್ಕಂ ॥ ಭಾವಿಸಿ ಶ್ರೀ ಹರಿ ಪ್ರೇಮದಿ । ನೇವರಿಸುತ ಶಿರವ ನುಡಿದನೀತೆರದಿಂದಂ ॥ 1 ॥

## ಕಾಂಬೋಧಿ ಅಷ್ಟತಾಳ

ಮೆಚ್ಚಿದೆ ಮೆಚ್ಚಿದೆ ಭಕ್ತ । ನಿನ್ನ । ಹೆಚ್ಚಿನ ಸದ್ಭಾವಕಾನನುರಕ್ತ ॥ ಅಚ್ಚಳಿಯದ ಸುಚರಿತ್ರೆಯ ಗೈದೆಯ । ಇಚ್ಛೆಯ ನೊರೆಯ್ಯೆ ಯಿತ್ತಪೆ ಹರುಷದಿ ॥ 1 ॥ ಶ್ರದ್ಧಾ ಶ್ರೇಷ್ಠರ ಸಾಲಿನಲ್ಲಿ । ನೀ । ನಿದ್ದಪೆ ನಿರತವೆನ್ನಯ ಮನದಲ್ಲಿ ॥ ಬದ್ಧದಿಗೈದುದಕೀ ಭುವಿಯಲಿ ಫಲ । ಶುದ್ಧಿಯು ದೊರೆವುದು ಸಹಜ ಪ್ರಭಾವದಿ ॥ 2 ॥

## ಕಲ್ಯಾಣಿ ಝಂಪೆತಾಳ

ಶ್ರೀಕರಗೆ ಶಿರಬಾಗಿ ಗೋಕರ್ಣ ನುಡಿದ । ಸಾಕೆಮಗೆ ದುಃಖಪ್ರದ ಸಂಸಾರ ಬಂಧ ॥ ಆಕಲಿತ ತಮದಿಂದ ಅಜ್ಞಾನ ಬೀಡು । ನೀ ಕರುಣೆ ದೋರುತಲಿ ಮೋಕ್ಷವನು ನೀಡು ॥ 1 ॥

## ಹಂಸನಂದಿ ತ್ರಿವುಡೆ ತಾಳ

ಅಹುದಹುದು ಭೂದಿವಿಜ ಶ್ರೇಷ್ಠನೆ । ಸಹಚರರ ನುದ್ಧರಿಪ ಭಾವದಿ । ಮಹಿಯೊಳಗ್ರೇಸರನು ನೀನೆಲೆ । ಇಹುದು ವೈಕುಂಠದಲಿ ಪದವಿಯು । ಬಹುದು ನೀನು । ...... ಬಯಸಿದೆ । ಸುಹಿತವನ್ನು ॥ 1 ॥ ಶುದ್ಧ ಭಾವವ ವೆರೆಸಿ ಜನಗಳು । ಶ್ರದ್ಧೆಯಲಿ ಕತೆ ಕೇಳ್ದುದಕೆ ಫಲ । ವಿದ್ದು ಮನ ತೋಷದೊಳಗಿತ್ತೆನು । ಬದ್ಧರಿಗೆ ವೈಕುಂಠ ವಾಸವ । ನುದ್ಧರದಲಿ । ಹಾರ್ದಿಕ । ಬಿದ್ದಣದಲಿ ॥ 2 ॥

## ಭಾಮಿನಿ

ಮಂದಹಾಸದಿ ಹರಿಯು ಜನಗಳ । ವೃಂದ ಮೇಣ್ ಪಶುಪಕ್ಷಿ ನಿಕರಕೆ । ಅಂದದಲಿ ವೈಕುಂಠ ಪಥವನು ತೋರ್ದಲೀಲೆಯಲಿ ॥ ಮುಂದೆ ಗೋಕರ್ಣನಿಗೆ ತಾನಾ । ನಂದದಲಿ ಸಾರೂಪ್ಯ ಮೋಕ್ಷವ । ಚೆಂದದೊಳಗೀಯುತಲಿ ತನ್ನೊಡನೊಯ್ದ ಪ್ರೇಮದಲಿ ॥ 1 ॥ ಭೂಸುರನ ನೊಡಗೊಂಡ ಶ್ರೀಹರಿ । ಭಾಸುರದ ಗೋ ಲೋಕ ಕೈಯ್ದನು । ಭಾಷಿಸಿದ ಭಾಗವತ ಸತ್ಕತೆಯೇಳು ದಿನಗಳಲಿ ॥ ಬೇಸರಿಕೆಯರಿಯದಲೆ ಶ್ರದ್ಧೆಯ । ನಾ ಸರಿಸಿ ಕೇಳಿರುವ ಜನರಿಗೆ । ಈ ಸುಲೋಕವು ದೊರೆವುದ್ಯೆ ಚಂದ್ರಾರ್ಕರಿಹತನಕ ॥ 2 ॥

## ಪ್ರೌಢ ಷಟ್ಪದಿ

ಇಧ್ಮವು ಯಜ್ಞದೊಳು ಹುತವಹ ತೆರದಲ್ಲಿ । ಹೊದ್ದಿದ ಪಾಪಂಗಳೆಲ್ಲವು ತಡವಿರದೆ । ಶುದ್ಧ ಮನದಿ ಭಾಗವತ ಸಪ್ತಾಹ ವಿಧಿಯೊಳಗಾಲಿಸೆ ನಶಿಪುದು ॥ ಪದ್ಮ ಪುರಾಣೋಕ್ತ ಹೃದ್ಯಮಹಾತ್ಮ್ಯವಿದು । ಪದ್ಯಂಗಳು ಯಕ್ಷಗಾನದ ಕ್ರಮದಲ್ಲಿ । ಸಿದ್ಧಾಪುರದೂರಿನಿಟಗಿ ಮಹಾಬಲೇಶ್ವರ ರಚಿಸಿರ್ಪೆ ನಾನು ॥ 1 ॥

## ಶುಭ ಏಕತಾಳ

ಮಂಗಲವೆನ್ನಿರೆ ಆರತಿ ಬೆಳಗಿ ಭು । ಜಂಗ ಶಯನ ಗೋವಿಂದನಿಗೆ ॥ ಮಂಗಲಾಂಗ ಶ್ರೀ ರಂಗನಿಗೆ । ನೀಲಾಂಗನಿಗೆ । ನರ । ಸಿಂಗನಿಗೆ ॥ ಸಂಗೀತ ಸುನಾಟ್ಯ ಪ್ರಿಯ ದೇವೋ । ತ್ತುಂಗನಿಗೆ .... ಸುರ । ಪುಂಗವಗೆ ॥ ಶೃಂಗಾರಾಂಚಿತ ಗಂಗಾಜನ ಕವಿ । ಹಂಗಾರೂಢ ಮುಕುಂದನಿಗೆ ॥ ಮಂಗಳಂ । ಜಯ । ಮಂಗಳಂ ॥ 1 ॥

**॥ ಭದ್ರ ಶುಭಂ ಮಂಗಳ ॥**

ಕ್ಲಿಷ್ಟ ಶಬ್ದಾರ್ಥ :

| | |
|---|---|
| ಇಧ್ಮ | = ಸಮಿತ್ತು |
| ಬೆಂತ್ರ | = ಪಿಶಾಚಿ |
| ಆಕಲಿತ | = ಸೇರಿದ |
| ಘೂರ್ಣಿಸು | = ಹೆಚ್ಚಾಗು |
| ಗೋಷ್ಠ | = ಕೊಟ್ಟಿಗೆ |
| ಆಪತ್ಯ | = ಮಗ |
| ಹವಳೆ | = ಹಸು |
| ದಂದುಗ | = ಸಮಸ್ಯೆ |
| ಅಲರಂಬ | = ಮನ್ಮಥ |
| ಅಸತಿ | = ಸೂಳೆ |
| ಕಾಶ | = ಬೆಳಕು |
| ಬಿದ್ದಣ | = ಊಟ, ಔತಣ |

॥ಶ್ರೀ॥

# ಮಾರಿಷಾ ಕಲ್ಯಾಣ

ಪಾತ್ರಗಳು:

1. ಪ್ರಚೇತಸ
2. ಈಶ್ವರ
3. ಚಾರಕ
4. ಮಾರಿಷೆ
5. ಚಂದ್ರ

॥ಶ್ರೀ॥

# ಮಾರಿಷಾ ಕಲ್ಯಾಣ

## ಕುಸುಮ ಷಟ್ಪದಿ

ಸಾವಿರದ ಬಯಕೆಗಳು । ಆವರಣವಾಗಿಸಿವೆ । ಸಾವಿರದ ಒಂದರೆಡೆ ಮನವೆಳಸದೆ ॥ ಭಾವ ಬಿನ್ನಪ ಪ್ರಕೃತಿ । ದೇವಿಯೊಳು ತಮಗಳನು । ನೀವಿ ರಕ್ಷಿಪುದನವರತವೆಮ್ಮನು ॥ 1 ॥

## ಭಾಮಿನಿ

ಗಣಪ ಶಾರದೆಯರಿಗೆ ವಂದಿಸಿ । ಮನದಿ ನಾರಾಯಣಪದಾಬ್ಜವ । ನೆನೆದು ತ್ರೈಜಗದೀಶ ಶಿವನನು ಸ್ಮರಣೆ ಗೈವುತಲಿ ॥ ವನಧಿಸುತೆಯನು ಶಿವೆಯ ಪ್ರಾರ್ಥಿಸಿ । ಮುನಿಜನಂಗಳಿಗೆರಗಿ ಪೇಳುವೆ । ವನಸುರಕ್ಷೆಯ ವೃಕ್ಷ ಕನ್ಯಾ ಮಾರಿಷೆಯ ಕಥೆಯ ॥ 1 ॥

## ವಾರ್ಧಿಕ

ಪೃಥುಜನಂತರ್ಧಾನ ಮಡದಿಯು ಶಿಖಂಡಿನಿಗೆ । ಅತುಳಬಲ ನಾಗಿಹ ಹವಿರ್ಧಾನ ಜನಿಸಿದನು । ಸತಿ ಧಿಷಣೆಯೊಳವನಿಗೆ ಪ್ರಾಚೀನಬರ್ಹಿಯುದಿಸಿದನು ಮೇಲ್ಟೈದನುಜರು ॥ ಪೃಥುವಿಯೊಳು ಪ್ರಾಚೀನಬರ್ಹಿ ನೆರೆ ಮೆರೆದನಂ । ಕಿತಕೆಯನ್ವರ್ಥನೆನಿಸುತ್ತಲಿರೆ ವಾರಿಧಿಯ । ಸುತೆ ಸುವರ್ಣೆಯನು ವರಿಸುತ ಪ್ರಚೇತಸರೆನುವ ದಶ ಸಂಖ್ಯೆ ಸುತರ ಪಡೆದ ॥ 1 ॥

## ಕೇದಾರಗೌಳ ಅಷ್ಟತಾಳ

ಪ್ರಚೇತಸ : ದಶ ಪ್ರಚೇತಸರಾವು ಪ್ರಾಚೀನಬರ್ಹಿಜ । ವಸುಧೀಶರಾಗಿಹೆವು ॥ ಎಸೆವ ಲೋಕೋತ್ತರ ದೆಸೆಯಲ್ಲಿ ಕೀರ್ತಿಯು । ವಶವಹ ಕಾರ್ಯವನು ॥ 1 ॥ ಎಸಗುವ ಸಂಕಲ್ಪ ಹೊಂದುವ ಕಿರಿಯರ । ರಸೆಯ ರಕ್ಷೆಗೆ ನೇಮಿಸಿ ॥ ಅಸಿತಕಂದರನೇಕೋ ಭಾವದಿ ಧ್ಯಾನಿಪೆ । ಹಸುರಿನೇಕಾಂತದಲಿ ॥ 2 ॥

## ಭಜನೆ – ಏಕತಾಳ

ಶಂಭು ಮಹೇಶ್ವರ ಶಶಿಧರ ಶಂಕರ । ಸಾಂಬ ಸದಾಶಿವ ಶೂಲಿ ಜಟಾಧರ । ಅಂಬಿಕೆಯರಸ ದಿಗಂಬರ ಪುರಹರ । ತ್ರ್ಯಂಬಕ ದೇವ ಮಹಾಬಲ ಸ್ಮರಹರ ॥ 1 ॥

## ಶ್ರೀ ಏಕತಾಳ

ಈಶ್ವರ : ದೃಢವನು ಮೆಚ್ಚುತ । ಮೃಢ ಮೈದೋರಿದ । ಉಡುಪತಿ ಧರ ಶೂಲಿ ॥ ಕಿಡಿಗಣ್ಣನ ಪ್ರಭೆ । ಪೊಡವಿಯ ವ್ಯಾಪಿಸೆ । ಸಡಗರವೇನೆನಲಿ ॥ 1 ॥

## ನವರೋಜು ಏಕತಾಳ

ಈಶ್ವರ : ವತ್ಸನೆ ಮೆಚ್ಚಿದೆ ನಿನ್ನ । ತಪ । ದುತ್ಸಹಕೆ ಸಂಪನ್ನ ॥ ಷಟ್ಸ್ಥಲ ಸಾಧಕ ಮನದೊಲವರಿಯಲು । ಉತ್ಸುಕನಾಗಿಹೆ ನೀನೊರೆ ವಹಿಲದಿ ॥ 1 ॥

## ತೋಡಿ ರೂಪಕತಾಳ

ಪ್ರಚೇತಸ : ನಿನ್ನ ಕಂಡ ಜನ್ಮ ಪಾವನ । ಸರ್ವಜ್ಞ ಶಂಭೋ । ಚಿನ್ಮಯಾತ್ಮ ನಿಟಿಲಲೋಚನ ॥ ಅನ್ನಾಹಾರ ತೊರೆವುತೀಗ । ಗಣ್ಯತೆಯ ಪ್ರಜಾಧಿಪತ್ಯ । ವನ್ನು ಬಯಸಿ ತಪವಗೈದೆ । ಧನ್ಯನಹೆನು ವರವ ನೀಯೋ ॥ 1 ॥

## ಸುರುಟಿ ಏಕತಾಳ

ಈಶ್ವರ : ತವಕವು ಸರಿಯಲ್ಲ । ಈಯೋ । ಗವ ನೀ ಪಡೆದಿಲ್ಲ ॥ ಸವನಿಸಿದಂತಹ ಪುಣ್ಯದ ಸಿದ್ಧಿಯು । ತವಸುತಗಾಪಟ್ಟವ ಕಟ್ಟುದ ತಿಳಿ ॥ 1 ॥ ಸುಪವಿತ್ರನೆ ನಿನಗೆ । ಕೊಡುತಿಹೆ । ತಪಸಿನ ಫಲಮೇಗೆ ॥ ವಿಪುಲ ಸುಶಕ್ತಿಯ ಕಂಕಾಲಾಸ್ತ್ರವು । ನಿಪುಣನೆ ಸಾಧಿಸಿ ಕೀರ್ತಿಯ ಪಡೆದುಕೋ ॥ 2 ॥

## ಭೈರವಿ ಝುಂಪೆತಾಳ

ಪ್ರಚೇತಸ : ಧನ್ಯೋಸ್ಮಿ ಮಹದೇವ । ಎನ್ನಸುತಗಹುದು ಪದ । ಮಾನ್ಯನಿಹೆ ಈಯೋಗ । ಇನ್ನಾರಿಗಿಹುದು ॥ 1 ॥ ಅಸ್ತ್ಬೆಂದು ಹಾರೈಸಿ । ಕೃತ್ತಿವಾಸನು ಚಣಕೆ । ಪೃಥ್ವಿಯಿಂ ಮೈಗರೆಯೆ । ಧಾತ್ರೀಶ ತಾನು ॥ 2 ॥ ಎತ್ತೆತ್ತ ನೋಡಿದರೆ । ಒತ್ತಿನಲಿ ವೃಕ್ಷಗಳು ॥ ಇತ್ತಪೆನು ಚರಣವೆನೆ । ಸ್ವಲ್ಪ ತಳವಿಲ್ಲ ॥ 3 ॥ ಸುತ ಪ್ರಜಾಧಿಪನಾಗೆ । ಪೃಥುವಿಯೊಳು ಠಾವಿಲ್ಲ । ಸತತ ಗೈಯ್ಯಲು ಬೇಕು । ಯತುನವೊಂದನ್ನು ॥ 4 ॥ ಯಾರಲ್ಲಿ ಸೇವಕರೆ । ಗಾರುಗೆಡಿಸಿರಿ ವನವ । ತೋರಲಿಲ್ಲೆನಗೆ ಬೃಂ । ದಾರಕರ ಪುರವು ॥ 5 ॥

## ಪುನ್ನಾಗ ಅಷ್ಟಾತಾಳ

ಚಾರಕ : ಉಪ್ಪನ್ನವಿತ್ತಿಹ ಒಡೆಯ । ನಿಮ್ಮ । ಅಪ್ಪಣೆಗಿತ್ತೆನು ತಲೆಯ ॥ ತಪ್ಪದೊಳಡವಿಯ ಸೊಪ್ಪರಿವೆನು ನಾ । ದೊಪ್ಪನೆ ತಡೆವರನೊಟ್ಟಿಗೆ ಸುಟ್ಟಪೆ ॥ 1 ॥ ಕಡಿಯಿರಿ ದೊಡ್ಡೊಡ್ಡ ಮರವ । ಮೇಲೆ । ಸುಡಿರಿ ಮತ್ತುಳಿದಂಥ ವನವ ॥ ಪೊಡವಿಪನಾಜ್ಞೆಯ । ಬಿಡದಲೆ ನಡೆಯಿಸಿ । ಉಡುಗೊರೆ ಪಡೆಯುವ । ಸಡಗರದೀಕ್ಷಣ ॥ 2 ॥

## ಸೌರಾಷ್ಟ್ರ ತ್ರಿವುಡೆ ತಾಳ

ಇತ್ತ ವೃಕ್ಷ ಸುಪೋಷಿತಾಂಗನೆ । ಚಿತ್ತಜನ ಸತಿ ರೂಪು ಮೀರುವ ॥ ವೃತ್ತ ಕುಚೆ ಮಾರಿಷೆಯೆನುವವಳ । ವಿಸ್ತರಿಪೆನು ॥ 1 ॥

## ಕಮಾಚು ಏಕತಾಳ

ಮಾರಿಷೆ : ಘುಲುಘುಲು ಗೆಜ್ಜೆಯ ನಾದದಿ ಬಂದಳು । ನಳಿನಾಕ್ಷಿಯು ಮಾರೀಷೆ ॥ ಚೆಲುವಿನ ಗಣಿ ನಭ । ದಲಿ ಹೊಳೆಯುವ ಮಣಿ । ಉಲಿಯುವುದೇನ್ ಬಲು ತೋಷೆ ॥ 1 ॥

## ರೂಪಕ ತಾಳ

ಅಹಹ ಪ್ರಕೃತಿ ಸೊಬಗ ನೊರೆಯೆ ಮೋದವಪ್ಪುದು ॥
ಗಹನವಿದು ಸುರಮ್ಯ ನೋಟ ಮನವ ಸೆಳೆವುದು ॥ 1 ॥
ನವಿಲ ನಾಟ್ಯ ಜಿಂಕೆಯೋಟ ಕಾಂಬ ತಹತಹ ।
ನವಿರು ಭಾವ ಸೋದರತ್ವ ಬಲು ಮುದಾವಹ ॥ 2 ॥
ಶುಕಪಿಕಂಗಳುಲಿಯೆ ಶ್ರವಣ ಸುಹಿತ ಚೇತನ ।
ಸಕಲ ಜೀವ ರಾಶಿ ಸಂಗ ಸಾರ್ಥ ಜೀವನ ॥ 3 ॥

## ಸೌರಾಷ್ಟ್ರ ತ್ರಿವುಡೆ ತಾಳ

ಉರಿಚಡಾಳಿಸಿತಾಗ ವನದಲಿ । ಭರದಲೋಡಿದ ಪ್ರಾಣಿ ವರ್ಗವು । ಭರಿತ ಹಾಹಾಕಾರವೆಲ್ಲೆಡೆ । ಒರೆಯಲೇನು ॥ 1 ॥ ಬೇಗೆಯನು ತಾ ಸಹಿಸಲಾರದೆ । ಆಗಲಾ ಮಾರೀಷೆ ನೊಂದಳು । ಕೂಗಿ ಕರೆದಳು ಚಾರಕರ ಈ । ಸೋಗಿದೇಕೆ ॥ 2 ॥ ಯಾರು ನೀನೆಲೆ ಭಟನೆ ಭರದಲಿ । ಘೋರ ವಿಪಿನವ ನಾಶ ಗೈವೆಯ । ಯಾರ ಪ್ರೇರಣೆ ಹೀನ ಕಾರ್ಯಕೆ । ಬೋರನುಸುರು ॥ 3 ॥

## ಮಾಂಡ್ ಏಕತಾಳ

ಚಾರಕ : ಅಹಹ ಯಾರು ಹುಡುಗಿ ನೀನು । ಗಹನದಲ್ಯಾಕೆ ಇರುವೆ । ಬಹಳ ಶೆಂದಾಕೆ ಕಾಣ್ತಿ ॥ ಕುಹಕವಲ್ಲವೇ ಇದು ॥ 1 ॥ ಚೆಲುವೆ ಜನಕನಿರುವನೇನೆ । ಸಲುಗೆ ಹೊಂದುತ ಕೇಳ್ವೆ । ಒಲವ ದೋರುವ ಗಂಡ । ನಾರೆ ಜಗದಲಿ ॥ 2 ॥ ಕರಕರ ಮಾಡದಿತ್ತ । ಸರಸರ ಹೋಗು ಅತ್ತ । ದೊರೆ ನುಡಿ ನಮಗೆ ಮುಖ್ಯವು ॥ ಅರಿತುಕೊ ಇದನು ॥ 3 ॥

## ಪಂತುವರಾಳಿ ಏಕತಾಳ

ಮಾರಿಷೆ : ಪ್ರಕೃತಿ ದೇವಿಯ ಸೆರಗ । ಸೆಳೆಯುತ್ತಿಹ । ವಿಕಲ ಮತಿಯೆ ನೀನೀಗ ॥ ವಿಕಟಕರ್ಮಕಡಿಯುನಿತ್ತುದೇತಕೆ ಪೇಳು । ಸಕಲ ಜೀವದ ರಕ್ಷೆಯ । ಹಾನಿಯ ಗೈಯ್ಯೆ । ಸುಖಕಾಪತ್ತಿದೆ ನಿಶ್ಚಯ ॥ 1 ॥

## ಶಂಕರಾಭರಣ ಮಟ್ಟೆ ತಾಳ

ಚಾರಕ : ಬಂದು ಪ್ರಶ್ನೆಗೈವ ನಿನಗೆ । ಮಂದಬುದ್ದಿಯಲ್ತೆ ವರ ವ । ಸುಂದರೇಶನಾಜ್ಞೆಯಿಹುದು । ಹಿಂದೆ ಪೋಗೆಲೆ ॥ 1 ॥

ಮಾರಿಷೆ : ದೋಷಪ್ರದ ಕುಕೃತ್ಯವನ್ನು । ಹೇಸದಂತೆ ಗೈವ ನೀವು । ನಾಶದನುವ ಬಿಡಿಬಿಡೆಂದು ಮಾ । ರೀಷೆ ಪೇಳ್ದಳು ॥ 2 ॥

## ಕಂದ

ಸೇವಕನಲ್ಲೀ ತೆರದಿಂ । ಭಾವಕಿ ಪೇಳುತಿರೆ ಹಿತವ ಕೇಳುತ ಭೂಪಂ ॥ ಆವನಿತೆಯ ತಡೆದೊಲವೊಳ್ । ಈ ವಿಧದಿಂದೀಗ ತರುಣಿಯನು ನುಡಿಸಿರ್ದಂ ॥ 1 ॥

## ಶಂಕರಾಭರಣ ಮಿಶ್ರ ಅಷ್ಟಾತಾಳ

ಪ್ರಚೇತಸ : ಯಾರು ನೀನೆಲೆ ಕಡು ಚೆಲುವೆ । ಘೋರಾರಣ್ಯದಿ । ಓರುವಳೆಹುದೇನು ತರವೆ ॥ ಸಾರಸಾಕ್ಷಿಯೆ ನಿನ್ನ ಜನಕ । ಜನನಿಯರಾರೆ । ಊರಾವುದೆಂದುಸಿರನಕ ॥ 1 ॥

## ಕಲ್ಯಾಣಿ ಅಷ್ಟತಾಳ

ಮಾರಿಷೆ : ಕಾಡಕನ್ನಿಕೆ ನಾನಿಹೆ । ದೈವಾಯತ್ತ । ಗಾಡಿಕೆಯಿದು ಎಂದಹೆ ॥ ಗಾಢತಪದಲಿ ಕಂಡು ಮುನಿಯಿರೆ । ನೋಡಿ ಪ್ರಮ್ಲೋಚನೆಯು ಅಪ್ಸರೆ । ಕೂಡಿ ಗರ್ಭವನಾಂತಿರಲು ಭಯ । ಕೀಡು ಹೊಂದಲು ಪಾತವಾದುದು ॥ 1 ॥

## ಭಾಮಿನಿ

ಎಲೆಗಳಿಗೆ ತಾನಂಟಿಸುತ ತೆರಳಲು । ತಳಿರ ಮಧ್ಯದೊಳಾನು ಜೀವವ । ತಳೆದಿರಲು ವೃಕ್ಷಂಗಳೆಲ್ಲವು ಸಾಕಿ ಸಲಹಿದವು ॥ ಇಳೆಯೊಳಗೆ ಮಾರೀಷೆಯೆನ್ನುವ । ಚೆಲುವ ನಾಮವ ಹೊಂದಿ ಬಾಳಿಹೆ । ಸಲುವುದೇ ನಿನಗಿಂಥ ಕೃತ್ಯವು ಭೂಪ ಪೇಳೆನಲು ॥ 1 ॥

## ಸಾರಂಗ ಅಷ್ಟತಾಳ

ಪ್ರಚೇತಸ : ದಿಟ್ಟನೋರ್ವನ ವರಿಸಿ । ಮೇಲ್ನಿನ್ನೊಳು । ಹುಟ್ಟುವ ಶಿಶು ಧರಿಸಿ ॥ ತೊಟ್ಟಿಲ ತೂಗುವ ಬಟ್ಟೆಯೊಳಿರದಲೆ । ದಟ್ಟಾರಣ್ಯದೊಳೇಕೆ ವಾಸಿಸುತಿಹೆ ಬಾಲೆ ॥ 1 ॥

## ನವರೋಜು ಏಕತಾಳ

ಮಾರಿಷೆ : ಎನ್ನ ವಿಚಾರಗಳನ್ನು । ಬಿಡು । ಮುನ್ನವೆ ಪೃಥ್ವಿಪ ನೀನು ॥ ಇನ್ನೀತೆರ ವನ ಧ್ವಂಸವಗೈವುದು । ಮಾನ್ಯವೆ ತುಸು ನೀ ನಿಂತಾಲೋಚಿಸು ॥ 1 ॥

## ಕೇದಾರಗೌಳ ಝಂಪೆತಾಳ

ಪ್ರಚೇತಸ : ನೀತಿಯನು ಪೇಳ್ವೆಯೇನೆ । ಕೇಳಿ ನಡೆ । ವಾತ ನಾನಲ್ಲಕಾಣೆ ॥ ಮಾತಿನಲಿ ಮರುಳು ಮಾಡಿ । ಹಾದಿಗೆಡಿ । ಪಾತುರವೆ ನಿನಗೆ ಪ್ರೌಢಿ ॥ 1 ॥ ಯಾರೇನ ಪೇಳ್ದರಾನು । ಪಿಡಿದಿರುವ । ದಾರಿಯನು ಬಿಡುವೆನೇನು ॥ ಯಾರಿಲ್ಲವೆನ್ನ ತುಡುಕೆ । ಎಂದೊರೆದು । ಸಾರುತ್ತೈದನು ಮುಂದಕೆ ॥ 2 ॥

## ನಾದನಾಕ್ರಿಯೆ ಅಷ್ಟಾತಾಳ

ಮಾರಿಷೆ : ಮೂರ್ಖರ ತಿದ್ದುವ ಪರಿಯೆಂತೊ । ಮೇಣ್ । ಕರ್ಕಶರಾದರ ನಡೆಯೆಂತೊ ॥ ಸೊರ್ಕಿಗೆ ಮದ್ದನು ತಿಳಿಯೆನು । ಇಲ್ಲಿ । ತರ್ಕಕೆಳಸೆ ಪ್ರಯೋಜನವೇನು

॥ 1 ॥ ಚಂದ್ರಮ ಕರುಣೆದೋರ್ದರೆ ಮಾತ್ರ । ವ । ಸುಂಧರೆ ರಕ್ಷಣೆಯನ್ನತ್ರ ॥ ಹೊಂದದು ದಿಟವಿದು ಜಗದಲಿ । ತಾ । ನಂದು ತರುಣಿ ಸ್ತುತಿಸಿದಳಲ್ಲಿ ॥ 2 ॥

## ನಾಟಿ ಆದಿತಾಳ

ರಕ್ಷಿಸೋ ಚಂದ್ರ । ಮೃಗಧರ ಗುಣ ಸಾಂದ್ರ । ರಕ್ಷಿಸೋ ಚಂದ್ರ ॥ ರಕ್ಷಿಸು ನೀಬಲು ಕರುಣೆಯ ದೋರುತ । ನಕ್ಷತ್ರಾಧಿಪ ಪ್ರಾಲೇಯದ್ಯುತಿ ॥ 1 ॥ ಅಮೃತಾಂಶು ದ್ವಿಜರಾಜ ಕಲಾಧರನೆ । ಕ್ಷೀರಾರ್ಣವ ಸಂಭವ । ವಿಮಲ ಹರಶಿರವಿಹಾರನಿಶಾಕರನೆ ॥ ಕುಮುದ ಬಂಧು ಶಶಿ ವಿಧು ರೋಹಿಣಿಪತಿ । ತಮಹರ ಹಿಮಕರ ಪೊರೆ ನೀ ಬೇಗದಿ ॥ 2 ॥

## ಜಂಜೂಟಿ ಏಕತಾಳ

ಚಂದ್ರ : ಆರ್ತಳ ನುಡಿಯನು ಕೇಳುತಲಾಗಲೆ । ಅತ್ರಿಜ ಧರೆ ಗವತರಿಸಿದನು ॥ ನಗೆ । ಬೀರಿದನು । ಅವಳೆತ್ತಿದನು ॥ 1 ॥

## ಮಧು ಮಾಧವಿ ಏಕತಾಳ

ಏನಾದುದೆಲೆ ಬಾಲೆ ಸದ್ಗುಣ ಶೀಲೆ । ನ್ಯೂನತೆ ಒದಗಿತೇನೆನ್ನುತ ಪೇಳೆ ॥ ಮ್ಲಾನ ಮುಖವ ಕಂಡು ಸೈರಿಪುದೆಂತು । ಮಾನಿಸಿ ನುಡಿಯೆ ಕನ್ನಿಕೆ ಪೇಳ್ದಳಿಂತು ॥ 1 ॥

## ಭೋಗ ಷಟ್ಪದಿ

ಮಾರಿಷೆ : ಓಷಧೀಶ ಕೇಳು ವಸುಧಾ । ಧೀಶ ಕಾಡ ನಾಶ ಗೈವ । ಓಸರಿಕೆಯ ತಿದ್ದಲೆಂತು ಕಠಿಣನಾಗಿಹ ॥ ಹೇಸದಿರುವ ಕಾರ್ಯದಿಂದ । ಘಾಸಿಯಹುದು ಮುಂದೆ ಜಗಕೆ । ಕ್ಲೇಶ ಹರಿಸಿ ರಕ್ಷಿಸಯ್ಯ ಶರಣು ಬಂದಿಹೆ ॥ 1 ॥

## ಮಧುಮಾಧವಿ ತ್ರಿವುಡೆತಾಳ

ಚಂದ್ರ: ಯೋಚನೆಯ ಬಿಡು ಬಾಲೆ ಭೂಪನ । ಮಾಚದಂತೆ ವಿಚಾರಿಸುವೆ ನಾ । ನೀಚ ಕೃತ್ಯಕೆ ನಿಲುಗಡೆಯ ನಿ । ತ್ತೀ
ಚಣದಿ ಸುಖವೀಯುವೆ ॥ 1 ॥

## ವಾರ್ಧಿಕ ಅರ್ಧ

ಚಂದ್ರ : ಅನುವಿನಿಂದಾಕೆಯನು ಸಂತವಿಸಿ ರಜನೀಶ । ಧನುವ ಝೇವಡೆ ಯುತ್ತ ಕೋಪದಿಂದಾಕ್ಷಣದಿ । ಜನಪತಿ ಪ್ರಚೇತಸನ ಮುಂಭಾಗಕ್ಕೈದುತಲಿ ನೀತಿಯನು ಪೇಳ್ದನಿನಿತು ॥

### ಭೈರವಿ ಅಷ್ಟಾತಾಳ

ಚಂದ್ರ : ಅವಿವೇಕಿಯಾದೆಯಲ್ಲ । ತರುಸಂಹಾರ । ಭುವನೇಶ ನಿನಗೆ ಸಲ್ಲ ॥ ತವಕಾರ್ಯಗಳನೆಲ್ಲ ಶಿವಸಹಮೆಚ್ಚನು । ನಿವಹಕಿದೊಳ್ಳಿತಲ್ಲ ॥

### – ಮಧ್ಯಮಾವತಿ ತ್ರಿವುಡೆ ತಾಳ–

ಪ್ರಚೇತನ : ಜನಪದಕೆ ಹಿತವಪ್ಪಕಾರ್ಯವ । ಸನುಮತದಿನಾ ಮಾಳ್ಪ ಬಗೆಯಿದು । ವನ ನಿಬಿಡತೆಯ ತೆರವುಗೊಳಿಸಿದೆ । ನಿನಗದೇನಿದೆ ಸಂಕಟ ॥ ಪೇಳ್ವುದೀಗ ॥

### ಭೈರವಿ ಅಷ್ಟತಾಳ

ಚಂದ್ರ : ಪ್ರಕೃತಿಮಾತೆಯ ಒಡಲು । ಮೂಲಿಕೆ ಹೊಂದಿ । ಸಕಲ ಸ್ವಾಸ್ಥ್ಯದಕಡಲು ॥ ಸುಖಕೆ ಕೊಳ್ಳಿಯನಿಟ್ಟ । ವಿಕಟಕೃತ್ಯಕೆ ವಿಶ್ವ । ಸಖಸುಮ್ಮನಿರೆ ಸಾಧ್ಯವೇ ॥

ಪ್ರಚೇತನ : ನಾಗರೀಕರ ಜೀವನ । ಸುರ ಸುಂದರ । ವಾಗ ಬೇಕಿದೆ ಪಾವನ ॥ ನೀಗಿ ಪ್ರಾಣವನಾದ । ರೀಗ ಹೋರಾಡುವೆ । ಸಾಗುವುದೊಳಿತೀಕ್ಷಣ ॥

### ಮಟ್ಟೆ ತಾಳ

ಚಂದ್ರ : ಕಳೆದ ಕಾಡ ಫಲವ ತಿಳಿಯೊ । ಇಳೆಗೆ ಮಳೆಯ ಕೊರತೆಯಾಗಿ । ನೆಲವು ಬರಡು ಬಂಜರಹುದು । ಕೆಲವೆ ಕಾಲಕೆ ॥ 1 ॥

ಪ್ರಚೇತಸ : ಅಡಿಯ ಹಿಂದೆ ಪಡೆಯಲಾರೆ । ಮೃಢನ ವರದ ಬಲುಮೆಯಿಹುದು । ತೊಡುವೆನು ಕಂ–ಕಾಲ ಶರವ । ತಡೆದುಕೊಂಬೆಯ ॥ 2 ॥

ಚಂದ್ರ : ಶಶಿಯು ಕನಲುತೆಂದನಾಗ । ಬಿಸಜಪೀಠನಸ್ತ್ರ ತಾಳ್ದಿ । ಎಸುಗೆಯನ್ನು ತಾಳಿಕೊಂಡು । ಅಸುವನುಳಿಹಿಕೊ ॥ 3 ॥

### ಕುಸುಮ ಷಟ್ಪದಿ

ಮಿಗುವರಿಯೆ ಹೋರಾಟ । ಗಗನದಿ ಮಹಾಸ್ತ್ರಗಳು । ಮಿಗೆ ಘರ್ಷಣೆಯ ನಿಕ್ಕುತಿರೆ ಭರದಲಿ ॥ ಜಗದಿ ಹೋ ಹೋ ಎನುವ । ಬಗೆ ಬಗೆಯ ದನಿಯೇಳೆ । ಅಗಜೇಶನೈತಂದ ಶುಭವ ಬಯಸಿ ॥ 1 ॥

### ಶಂಕರಾಭರಣ ರೂಪಕ

ಈಶ್ವರ : ಧೀರರೀರ್ವರೀಗ ತಾಳ್ಮೆ ತಾಳಿರೀಕ್ಷಣ । ಹೋರಲೇನು ಒಳ್ಳಿತಹುದು ಪೇಳ್ವೆ ಬಿಡಿರಣ ॥ ಘೋರನ್ಯಾಯ ಪ್ರಕೃತಿಯೊಡಲ ಹೀರುತಿರುವುದು । ಮಾರಣಕ್ಕೆ ದಾರಿಯಹುದು ಶಾಂತಿ ತಳೆವುದು ॥ 1 ॥

### ಆರ್ವ ಸವಾಯ ಏಕತಾಳ

ಚಂದ್ರ+ಪ್ರಚೇತಸ : ಜಗದೀಶನ ನುಡಿ ಕೇಳುತಲುಭಯರು । ಬಗೆ ಬಗೆ ಕೈದುಗಳನು ತೊರೆದು ॥ ಮಗುಳೆರಗುತಲೆಂದರು ಶಿವ ಶಂಕರ । ಅಗಜೇಶನೆ ಪೊರೆ ಕ್ಷಮೆ ತಳೆದು ॥ 1 ॥

### ವಾರ್ಧಕ

ಈಶ್ವರ: ಋಷಿ ಕಂಡು ಪ್ರಮ್ಲೋಚನೆಯ ಕೂಡಲಾಗರ್ಭ । ಒಸರಿರಲು ಗರ್ಭವನು ವೃಕ್ಷಗಳು ಧರಿಸಿದವು । ಅಸು ರಕ್ಷನಹ ವಾಯು ತಾನೇಕಗೊಳಿಸಿದನು ಪ್ರೇಮಭಾವವ ತಳೆವುತ ॥ ಶಶಿ ಸುಧಾ ಕಿರಣಗಳ ಬೀರುತಲಿ ಪೊರೆದ ಮಾ । ರಿಷೆಯು ಮುನಿಯಪ್ಸರೆಗೆ ತರುಗಳಿಂಗಾಶುಗಗೆ । ಸುಷುಮೆ ತಾ ಚಂದ್ರಂಗೆ ಸುತೆಯೆನಿಸಿ ಸರ್ವ ಲಕ್ಷಣದಿಂದ ಮೆರೆಯುತಿಹಳು ॥ 1 ॥

### ಕಾಂಬೋಧಿ ಝಂಪೆತಾಳ

ಈಶ್ವರ : ದಶ ಪ್ರಚೇತಸರೆಲ್ಲ ಮಾರಿಷೆಯ ವರಿಸಲ್ಕೆ । ಎಸಗುವೀ ಸಂಬಂಧದಿಂದ ॥ ವಿಷವೆಲ್ಲ ಕಳೆವುತಲಿ ವಿಶ್ವಕ್ಕೆ ಪೊಸತಾದ । ಜಸದ್ವಯವು ಮೂಡುತೊಳಿತಹುದು ॥ 1 ॥

### ಕಾಂಬೋಧಿ ಝಂಪೆ – (ಸಾಂಗತ್ಯ ರೂಪಕ ಸಮಾನ ಬಂಧ)

ಭೂಲೋಲ ದಶ ಪ್ರಚೇತಸರಿಂಗೆ ಮಾರೀಷೆ । ಯೋಲೈಸಿ ವೈವಾಹವೆಸಗೆ ॥ ಮಾಲ ಮೌಕ್ತಿಕದಂತೆ ಕನ್ಯೆ ಶೋಭಿಸಲಾಗ । ಮೇಲಾಗಿ ಧ್ವನಿಸೆ ಶೋಬಾನೆ ॥ 1 ॥

### ಸಾಂಗತ್ಯ ರೂಪಕ

ಹಸಿರು ಹಾಸಿನ ಮೇಲೆ । ಬಿಸರುಹಾಕ್ಷಿಯಕೂಡೆ । ದಶ ಪ್ರಚೇತಸರ ಕುಳ್ಳಿರಿಸಿ ॥ ಕುಶಲದಿಂದಾರತಿ ಬೆಳಗೆ ವಿಶ್ವಕೆ ಶುಭ । ದೊಸಗೆ ಹಬ್ಬಿತು ಸೋಬಾನೆ ॥ 1 ॥

### ಮಟ್ಟೆತಾಳ (ಸಂದೇಶ ಸಾರುವಂತೆ ಸಮೂಹ ನೃತ್ಯ ಮಾಡಬಹುದು)

ಶಶಿಯು ರವಿಯು ನೀರು ಗಾಳಿ । ರಸೆಯ ಬೆಂಕಿಯೆಲ್ಲ ಪ್ರಕೃತಿ । ಬಸಿರ ಬಗೆಯ ಬೇಡ ಬದುಕು । ರಸಿಕನಾಗುತ ॥ 1 ॥ ಅಸುವು ನಿಂತುದುಸಿರ ಮೇಲೆ । ಉಸಿರ ರಕ್ಷೆ ಹಸಿರಿನಿಂದ ॥ ಹಸಿರ ನಾಶ ಮುಂದಕೆಂದೂ ॥ ವಿಷ ಫಲಪ್ರದ ॥ 2 ॥ ಅಹಹ ಭೂಮಿ ಪ್ರಾಣಿ ಪಕ್ಷಿ । ಸಹಿತವಾದ ಸೃಷ್ಟಿ ಸ್ಥಿತಿಯು । ಸಹಜವಲ್ತೆ ಪರಿಸರಾಂತು । ಮಹಿಮೆಯರಿತುಕೋ ॥ 3 ॥

### ಏಕತಾಳ

ವೃಕ್ಷದ ರಕ್ಷಣೆ ನಮ್ಮೆಲ್ಲರ ಹೊಣೆ । ತಕ್ಷಣ ಜಾಗೃತರಾಗೋಣ ॥ ಅಕ್ಷಯವಾಗಲಿ ಪೂರ್ವೋತ್ತರವೆನು । ತೀಕ್ಷ್ಣ ಮುಂದಕೆ ಸಾಗೋಣ ॥ 1 ॥

### ಭಾಮಿನಿ

ಹಸಿರ ರಕ್ಷೆ ಮಹತ್ವ ಸಾರುವ । ಎಸೆವ ಭಾಗವತಾದಿ ಗ್ರಂಥದೊ । ಳುಸುರಿರುವ ಮಾರೀಷೆ ಕಲ್ಯಾಣೆನುವ ಸತ್ಕಥೆಯ ॥ ಹೊಸೆದೆ ಪದ್ಯವ ಯಕ್ಷಗಾನದಿ । ವಸುಧೆಯಿಟಗಿ ಮಹಾಬಲೇಶ್ವರ । ಕುಶಲಮತಿಗಳು ಸದ್ಬಳಕೆ ಮಾಡುತಲಿ ಹರಸುವುದು ॥ 1 ॥

## ಯಮನ್‌ಕಲ್ಯಾಣಿ ತ್ರಿವುಡೆ ತಾಳ

ಜಯತು ಮಂಗಲ ಸಸ್ಯ ಶಾಮಲೆ । ಜಯತು ವಿಶ್ವಾಧಾರೆಗೆ ॥
ಜಯತು ಪ್ರಕೃತಿಯ ಮಾತೆ ಚರಣಕೆ । ನಿಯತಿ ನಿರ್ಮಿತ ಚೇತಕೆ ॥ 1 ॥

## ಮಂಗಳಂ ಶುಭ ಮಂಗಳಂ –



ಯಕ್ಷಗಾನ ಪ್ರದರ್ಶನಗಳಿಗೆ ಆಧಾರಭೂತವಾಗಿರುವುದು ಲಿಖಿತ ರೂಪದಲ್ಲಿರುವ ಪ್ರಸಂಗ ಕೃತಿ. ಕಥಾನಕವೊಂದನ್ನು ವಿವಿಧ ಛಂದೋಬಂಧಗಳನ್ನು ಬಳಸಿ ಪ್ರದರ್ಶಾನುಕೂಲಿಯಾಗಿ ರಚಿತವಾದ ಕೃತಿಯಲ್ಲಿ ದೃಶ್ಯ ಹಾಗೂ ಶ್ರವ್ಯ-ಕಾವ್ಯಗಳೆರಡರ ಮಿಶ್ರಣವನ್ನು ಕಾಣಬಹುದು. ಪದ್ಯ ಸಾಹಿತ್ಯದ ಚೌಕಟ್ಟಿನಲ್ಲಿ ಅರಳುವುದು ಗದ್ಯ ಸಾಹಿತ್ಯದ ಚೆಲುವಾದ ಪುಷ್ಪ. ಪ್ರಸಂಗ ಕಾವ್ಯವು ಹಾಡುಗಬ್ಬವಾಗಿರುವುದರಿಂದ ಅಲ್ಲಿ ನಾದ ಮಾಧುರ್ಯದ ಜೊತೆಗೆ ಅಥ-ರ್ಗಾಂಭೀರ್ಯವೂ ಇದೆ. ಅವುಗಳನ್ನು ಅಂತರ್ಯದಲ್ಲಿ ಪರಿಭಾವಿಸಿ ಅಥ-ರ್ಧಾರಿ ಅಥವಾ ವೇಷಧಾರಿ ತನ್ನ ಪ್ರತಿಭೆ ಪಾಂಡಿತ್ಯಗಳ ಹಿನ್ನೆಲೆಯಲ್ಲಿ ಪಾತ್ರವನ್ನು ಕೆತ್ತಿ ನಿಲ್ಲಿಸುತ್ತಾನೆ. ಹಾಗಾಗಿ ಪ್ರಸಂಗವು ಪ್ರತಿಪ್ರದರ್ಶನದಲ್ಲೂ ಮರುಹುಟ್ಟನ್ನು ಪಡೆಯುತ್ತ ನಿತ್ಯ ನೂತನವಾಗುತ್ತಿರುತ್ತದೆ. ಅಂತೆಯೇ ವರ್ಷಗಳುರುಳಿದರೂ ಪ್ರಸಂಗ ಹಳತಾಗುವುದಿಲ್ಲ.

ಪ್ರಸ್ತುತ ಸಂಕಲನವು ಇಟಗಿ ಮಹಾಬಲೇಶ್ವರ ಭಟ್ಟರ ಐದು ಪ್ರಸಂಗಗಳನ್ನು ಒಳಗೊಂಡಿದೆ. ಇಟಗಿಯವರು ಪ್ರಸಿದ್ಧ ವೇಷಧಾರಿಗಳೂ ಉತ್ತಮ ಕವಿಗಳೂ ಆಗಿದ್ದಾರೆ. ವ್ಯಾಪಕವಾದ ರಂಗಾನುಭವವಿರುವ ಅವರು ಇಂದಿನ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ಕೃತಿಗಳನ್ನು ರಚಿಸುತ್ತಿದ್ದಾರೆ. ಅವರನ್ನು ಪ್ರೋತ್ಸಾಹಿಸಿ ಅವರಿಂದ ಇನ್ನೂ ಉತ್ತಮಕೃತಿಗಳು ಹೊರಬರುವಂತಾಗಲೆಂಬುದು ನಮ್ಮ ಅಪೇಕ್ಷೆ.



ಪೌರಾಣಿಕವಲ್ಲದ ಪ್ರಸಂಗಗಳನ್ನು ಬರೆಯುವ ಅವಕಾಶಗಳು ಕೂಡಿ ಬಂದರೂ ಅವುಗಳನ್ನು ತೊರೆದು ಪುರಾಣ ಪ್ರಸಂಗಗಳಿಗೇ ನಾನು ಅಂಟಿ-ಕೊಂಡಿದ್ದು ನನ್ನ ಮಿತಿಯಾಗಿರಬಹುದು. ಭಿನ್ನವಾದ ಕಥಾಹಂದರಗಳು ಆಯಾ ಸಮಯಕ್ಕೆ ಅಗತ್ಯವೆನಿದಾಗ ರಚಯಿತಗೊಂಡ ಪ್ರಸಂಗಗಳು ಇವು. ಅಶ್ವಿನಿ ದೇವತೆಗಳ ಹಲವು ಕತೆಗಳನ್ನೊಳಗೊಂಡ ?ಅಶ್ವಿನಿ ವಿಜಯ? ಪ್ರಸಂಗವು ಶ್ರೀ ಮಂದಾರ್ತಿ ಮೇಳವೊಂದರಲ್ಲಿ ಒಂದು ತಿರುಗಾಟದಲ್ಲೇ ಅರವತ್ತಕ್ಕೂ ಹೆಚ್ಚು ಪ್ರದರ್ಶನಗಳನ್ನು ಕಂಡಿದೆಯಂತೆ. ಗುಂಡಬಾಳ, ಮಾರಣಕಟ್ಟೆ ಮೇಳಗಳಲ್ಲಿ ನಾನು ತಿರುಗಾಟ ನಡೆಸುತ್ತಿದ್ದಾಗ ಕೆಲವು ಪ್ರದರ್ಶನಗಳಾಗಿದ್ದವು. ಮಕ್ಕಳ ಯಕ್ಷಗಾನ ರಂಗಭೂಮಿಯನ್ನು ಲಕ್ಷ್ಯದಲ್ಲಿರಿಸಿಯೇ ರಚಿಸಿದ ?ಗುರುದಕ್ಷಿಣೆ? ಯನ್ನು ನಾಡಿನಾದ್ಯಂತ ಹಲವಾರು ಮಕ್ಕಳ ತಂಡದವರು ಪ್ರದರ್ಶಿಸಿದ್ದಾರೆ. ಶ್ರೀ ರಾಮಚಂದ್ರಾಪುರ ಮಠದವರು ಹಮ್ಮಿಕೊಂಡ ಗೋ ಯಾತ್ರೆಯ ಸಂದರ್ಭದಲ್ಲಿ ರಚಿಸಿದ ? ಗೋ ಮಹಿಮೆ? ಯು ತುಂಬಾ ಪ್ರದರ್ಶನಗಳನ್ನು ಕಂಡಿದೆ. ?ಮಾ-ರಿಷಾ ಕಲ್ಯಾಣ? ವು ಈ ಹಿಂದೆ ಶಿರ್ಸಿಯಲ್ಲಿ ನಡೆದ ರಾಜ್ಯ ಮಟ್ಟದ ಪರಿಸರ ಯಕ್ಷಗಾನ ಸ್ಪರ್ಧೆಯಲ್ಲಿ ನಮ್ಮ ತಂಡವು ಭಾಗವಹಿಸುವ ಸಮಯಕ್ಕೆ ಅಂದಿನ ಪ್ರದರ್ಶನಕ್ಕಾಗಿಯೇ ಸಿದ್ಧಗೊಂಡ ಕೃತಿಯಾಗಿದೆ. ಹಾಗೆಯೇ ?ಪ್ರೇತೊದ್ಧರಣ? ಕೂಡ ಕೆಲವು ತಾಳಮದ್ದಳೆಗಳ ಮೂಲಕ ರಂಗದ ಬೆಳಕನ್ನು ಕಂಡಿದೆ.

ಬೆಲೆ : ೮೦.೦೦

**ಕರ್ನಾಟಕ ಯಕ್ಷಗಾನ ಅಕಾಡೆಮಿ**
೨ನೇ ಮಹಡಿ ಚಾಲುಕು ವಿಭಾಗ, ಕನ್ನಡ ಭವನ,
ಜೆ.ಸಿ ರಸ್ತೆ, ಬೆಂಗಳೂರು ೫೬೦ ೦೦೨